ಕನ್ನಡ ವಿಶ್ವವಿದ್ಯಾನಿಲಯ

ಕನ್ನಡ ಎಂ.ಫಿಲ್ ಪದವಿಯ ಭಾಗವಾಗಿ ಸಾದರಪಡಿಸಿದ ಸಂಪ್ರಬಂಧ

ಗಾವಡಗೆರೆ ಸಾಂಸ್ಕೃತಿಕ ಅಧ್ಯಯನ

ಮಾರ್ಗದರ್ಶಕರು

ಡಾ.ಶುಭಚಂದ್ರ

ವಿಶ್ರಾಂತ ಪ್ರಾಧ್ಯಾಪಕರು

ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ

ಮೈಸೂರು ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿ

ಮೈಸೂರು.

ನಿಬಂಧಕರು

ಗುರುರಾಜ

ಎಂ.ಫಿಲ್. ವಿದ್ಯಾರ್ಥಿ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ

ಮೈಸೂರು

೨೦೦೭-೦೮

ಕನ್ನಡ ವಿಶ್ವವಿದ್ಯಾನಿಲಯ

ಕನ್ನಡ ಎಂ.ಫಿಲ್ ಪದವಿಯ ಭಾಗವಾಗಿ ಸಾದರಪಡಿಸಿದ ಸಂಪ್ರಬಂಧ

ಗಾವಡಗೆರೆ ಸಾಂಸ್ಕೃತಿಕ ಅಧ್ಯಯನ

ಮಾರ್ಗದರ್ಶಕರು

ಪ್ರೊ.[redacted].ಶುಭಚಂದ್ರ

ವಿಶ್ರಾಂತ ಪ್ರಾಧ್ಯಾಪಕರು

ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ

ಮೈಸೂರು ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿ

ಮೈಸೂರು.

ನಿಬಂಧಕರು

ಗುರುರಾಜ

ಎಂ.ಫಿಲ್. ವಿದ್ಯಾರ್ಥಿ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ

ಮೈಸೂರು

೨೦೦೭-೦೮

ದೃಢೀಕರಣ ಪತ್ರ

೨೦೦೭-೦೮ನೇ ಸಾಲಿನ ಕ್ರಮ ಸಂಖ್ಯೆ KVTM-00158 ರ ಎಂ.ಫಿಲ್., ವಿದ್ಯಾರ್ಥಿಯಾದ **ಗುರುರಾಜ** ಇವರು ಈ ಪರೀಕ್ಷೆಯ ಅಂಗವಾಗಿ **ಗಾವಡಗೆರೆ ಸಾಂಸ್ಕೃತಿಕ ಅಧ್ಯಯನ** ಎಂಬ ವಿಷಯವನ್ನು ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿದ್ದಾರೆ. ಇದನ್ನು ಇವರು ಈ ಮೊದಲು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಪ್ರೊ.[redacted].ಶುಭಚಂದ್ರ
ವಿಶ್ರಾಂತ ಪ್ರಾಧ್ಯಾಪಕರು
ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ
ಮೈಸೂರು ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ
ಮೈಸೂರು.

ಸ್ಥಳ: ಮೈಸೂರು
ದಿನಾಂಕ: 22-09-08

ಪ್ರಮಾಣ ಪತ್ರ

ಗಾವಡಗೆರೆ ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯದ ಸಂಶೋಧನ ಸಂಪ್ರಬಂಧವನ್ನು ಕನ್ನಡ ಎಂ.ಫಿಲ್, ಪದವಿಯ **ಗುರುರಾಜ**. ಕ್ರಮಸಂಖ್ಯೆ KVTM-00158 ರ ವಿದ್ಯಾರ್ಥಿಯಾದ ನಾನು ೨೦೦೭–೦೮ನೇ ಸಾಲಿನ ಪರೀಕ್ಷೆಗಾಗಿ ಡಾ.ಶುಭಚಂದ್ರ, ನಿವೃತ್ತ ಪ್ರಾಧ್ಯಾಪಕರು, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಈ ಸಂಪ್ರಬಂಧವನ್ನು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಪ್ರಶಸ್ತಿಗಾಗಿ ಯಾವ ವಿಶ್ವವಿದ್ಯಾನಿಲಯಕ್ಕೂ ಸಲ್ಲಿಸಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ನಿಬಂಧಕಾರರು
ಗುರುರಾಜ
ಎಂ.ಫಿಲ್., ವಿದ್ಯಾರ್ಥಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯ
ಮೈಸೂರು.

ಸ್ಥಳ: ಮೈಸೂರು
ದಿನಾಂಕ: 22:07:08

ಪರಿವಿಡಿ

ಗಾವಡಗೆರೆ ಸಾಂಸ್ಕೃತಿಕ ಅಧ್ಯಯನ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯಲ್ಲಿ ಒಂದು ಊರಿನ ಅಧ್ಯಯನವು ಸಾಂಸ್ಕೃತಿಕ ಮಹತ್ವದ್ದಾಗಿರುತ್ತದೆ. ಜೊತೆಗೆ ಸಾಮಾಜಿಕ, ಐತಿಹಾಸಿಕ, ಧಾರ್ಮಿಕ ಹಾಗೂ ಆರ್ಥಿಕ ದೃಷ್ಟಿಯಿಂದ, ಜಾನಪದೀಯ ದೃಷ್ಟಿಯಿಂದಲೂ ಮಹತ್ವದ ದಾಖಲೆಗಳನ್ನು ಕೂಡಿ ಹಾಕಿದಾಗ ಈ ಬಗೆಯ ಅಧ್ಯಯನಕ್ಕೆ ಒಂದು ಸಾಂಸ್ಕೃತಿಕ ಆಯಾಮ ಬರುತ್ತದೆ. ಈ ಬಗೆಯ ಗ್ರಾಮ ಸಮಾಜದ ಅಧ್ಯಯನದಿಂದಲೇ ನಿಜ ಜಾನಪದ ದ್ರವ್ಯ ಹೊರಗೆ ಬರುತ್ತದೆ.

ಒಂದು ಗ್ರಾಮದ ಅಧ್ಯಯನವೆಂದರೆ ಸಾಹಿತ್ಯ, ಕಲೆ, ಸಂಸ್ಕೃತಿ, ಸಾಮಾಜಿಕ ಬೆಳವಣಿಗೆ, ವಿಸಂಗತಿ ಇವುಗಳೆಲ್ಲವನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದಾಗ ಅದು ಒಂದು ಸಾಂಸ್ಕೃತಿಕ ಅಧ್ಯಯನವಾಗುತ್ತದೆ.

ಸಾಂಸ್ಕೃತಿಕ ಅಧ್ಯಯನದಿಂದ ನಮ್ಮೆಲ್ಲ ಸಾಂಸ್ಕೃತಿಕ ಅಂಶಗಳ ಬಹುಮುಖ್ಯ ಹಿನ್ನಲೆಯಾದ ಗ್ರಾಮೀಣ ಹಿನ್ನಲೆಯನ್ನು ಅಧ್ಯಯನಕ್ಕೊಳಪಡಿಸಿದರೆ ವಿಸ್ಮಯಗಳು ಬೆಳಕಿಗೆ ಬರುತ್ತವೆ. ೧೯-೨೦ನೇ ಶತಮಾನದ ಕಾಲಘಟ್ಟದಲ್ಲಿ ಸಾಹಿತ್ಯ ವಿಮರ್ಶೆಯ ಅಧ್ಯಯನದ ಸಂಶೋಧನೆಗಳು ಹೆಚ್ಚೆಚ್ಚು ನಡೆದಂತೆ ಈ ಬಗೆಯ ಅಧ್ಯಯನದ ಮಹತ್ವ ಹೆಚ್ಚುತ್ತದೆ. ಈ ಅರ್ಥದಲ್ಲಿ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಗಾವಡಗೆರೆ, ಸಾಂಸ್ಕೃತಿಕವಾಗಿ, ಐತಿಹಾಸಿಕ ಮಾದರಿಯಾಗುವ ಗ್ರಾಮವಾಗಿದೆ. ಹಾಗಾಗಿ ನಾನು ಈ ಬಗೆಯ ಅಧ್ಯಯನ ಕೈಗೊಂಡಿದ್ದೇನೆ.

ಗಾವಡಗೆರೆ ಗ್ರಾಮ ಹುಣಸೂರು ತಾಲ್ಲೂಕಿನಲ್ಲಿ ಇರುವ ಪ್ರಮುಖ ಹೋಬಳಿ ಕೇಂದ್ರವಾಗಿದ್ದು ಹುಣಸೂರಿನಿಂದ ೧೫ ಕಿ.ಮೀ. ಮತ್ತು ಕೃಷ್ಣರಾಜ ನಗರದಿಂದ ೭ ಕಿ.ಮೀ. ಅಂತರದಲ್ಲಿ ಎರಡು ತಾಲ್ಲೂಕುಗಳ ಮಧ್ಯಭಾಗದಲ್ಲಿದೆ.

ಈ ಗ್ರಾಮಕ್ಕೆ ಗಾವಡಗೆರೆ ಎಂಬ ಹೆಸರು ಬರಲು ಕಾರಣವೇನೆಂದರೆ 'ಗೌಡ' ಕಟ್ಟಿಸಿದ ಕೆರೆ ಇರುವುದರಿಂದ 'ಗಾವಡಗೆರೆ' ಎಂಬ ಹೆಸರು ಬಂದಿತು. 'ಗಾವುಂಡ' ಎಂದರೆ ಗಾಮುಂಡ ಅಥವಾ ಗ್ರಾಮದ ಮುಖಂಡ ಕಟ್ಟಿಸಿದ ಕೆರೆ.

ಗಾವುಂಡ>ಗಾವುಡ>ಗಾವಡ ಎಂಬ ರೂಪಾಂತರ ಪಡೆದು 'ಕೆರೆ' ಎಂಬ ಪದದಲ್ಲಿನ 'ಕ' ಕಾರ 'ಗ' ಕಾರ ಆದೇಶವಾಗಿ 'ಗೆರೆ' ಎಂದಾಗಿ 'ಗಾವಡಗೆರೆ' ಎಂಬ ಹೆಸರು ಬಂದಿತು.

ಗಾವಡಗೆರೆ ಗ್ರಾಮ ಒಂದು ಹೋಬಳಿ ಕೇಂದ್ರವಾಗಿದ್ದು ಇಲ್ಲಿ ಹಲವಾರು ಜಾತಿ, ವೃತ್ತಿ, ಕಸುಬು, ಧರ್ಮದ ಜನ ವಾಸವಾಗಿದ್ದು ತಮ್ಮದೆ ಆಚಾರ-ವಿಚಾರಗಳಿಂದ ತಮ್ಮ ಜೀವನ ನಡೆಸುತ್ತಿದ್ದಾರೆ.

ಗಾವಡಕಾರೆ ಗ್ರಾಮದ ವಿಶೇಷತೆಯೆಂದರೆ ಇಲ್ಲಿ ವಾಸವಾಗಿರುವ ಮರಾಠಿ ಜನಾಂಗ ಮತ್ತು ಅವರ ಸಂಸ್ಕೃತಿ, ಆಚಾರ-ವಿಚಾರ, ಹಬ್ಬ ಹರಿದಿನಗಳು ತಮ್ಮದಲ್ಲದ ಭಾಷೆ ಸಂಸ್ಕೃತಿ ನೆಲದಲ್ಲಿ, ಪರ ಸಂಸ್ಕೃತಿಯನ್ನು ತಮ್ಮಲ್ಲಿ ಮೇಳೈಸಿಕೊಂಡು ತಮ್ಮದೆ ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದಾರೆ.

ಈ ಗ್ರಾಮದಲ್ಲಿ ವಾಸಿಸುವ ಬಹುಸಂಖ್ಯಾತ ಜನಾಂಗವಾದ ನಾಯಕ ಜನಾಂಗದವರು ತಮ್ಮ ದಿನನಿತ್ಯದ ಚಟುವಟಿಕೆಗಳಲ್ಲೂ ದೇವರನ್ನು ನಂಬಿ ತಮ್ಮ ಸಂಪಾದನೆಯ ಸ್ವಲ್ಪ ಹಣವನ್ನು ದೇವರ ಕಾರ್ಯಗಳಿಗಾಗಿ ಮೀಸಲಿಡುತ್ತಾರೆ. ಇದಕ್ಕೆ ನಿದರ್ಶನವೆಂಬಂತೆ ಹಲವಾರು ದೇವಾಲಯಗಳ ಜೀರ್ಣೋದ್ಧಾರ ಕೈಗೊಂಡಿದ್ದಾರೆ.

ಟಿ.ಎಸ್.ಸುಬ್ಬರಾವ್ ಘಾಟ್ಕೆಯಂತಹ ಮಹಾದಾನಿಗಳು ಗಾವಡಗೆರೆಯ ಹೆಸರನ್ನು ಹುಣಸೂರು ತಾಲ್ಲೂಕಿನಲ್ಲಿ ಮತ್ತಷ್ಟು ಪ್ರಸಿದ್ಧಿಗೊಳಿಸಿದ್ದಾರೆ. ಗಾವಡಗೆರೆ ಎಂದರೆ ಸುಬ್ಬರಾವ್ ಘಾಟ್ಕೆ, ಸುಬ್ಬರಾವ್ ಘಾಟ್ಕೆ ಎಂದರೆ ಗಾವಡಗೆರೆ ಎಂಬಷ್ಟರಮಟ್ಟಿಗೆ ಅವರ ದಾನವೃತ್ತಿ ಅಜರಾಮರವಾಗಿದೆ.

ಗಾವಡಗೆರೆ ಗ್ರಾಮದಲ್ಲಿ ಒಟ್ಟು ೭೬೧ ಕುಟುಂಬಗಳಿದ್ದು ಒಂದು ಹೋಬಳಿ ಕೇಂದ್ರಕ್ಕೆ ಇರಬೇಕಾದ ಎಲ್ಲ ಸವಲತ್ತುಗಳು ಇಲ್ಲಿ ಇವೆ. ಆರ್ಥಿಕ ಚಟುವಟಿಕೆಗಾಗಿ ಬ್ಯಾಂಕ್ ಮತ್ತು ಸಹಕಾರಿ ಬ್ಯಾಂಕ್, ಆರೋಗ್ಯ ದೃಷ್ಟಿಯಿಂದ ಆಸ್ಪತ್ರೆ, ವಿದ್ಯಾರ್ಜನೆಗೆ ಪ್ರಾಥಮಿಕ ಹಂತದಿಂದ ಪದವಿಪೂರ್ವ ಹಂತದವರೆಗೆ ಶಾಲಾ ಕಾಲೇಜಿನ ಸೌಲಭ್ಯಗಳು ಇವೆ. ಒಂದು ಗ್ರಾಮದ ಜನತೆ ಸಾಂಸ್ಕೃತಿಕವಾಗಿ ಪ್ರಜ್ಞಾವಂತರಾಗಬೇಕೆಂದಲ್ಲಿ ಇವೆಲ್ಲವುಗಳ ಪಾತ್ರ ಬಹು ಮುಖ್ಯವಾದುದಾಗಿದೆ.

ಮಠಮಾನ್ಯಗಳು, ದೇವಾಲಯಗಳು ಮನುಷ್ಯನ ಸಾಂಸ್ಕೃತಿಕ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಯಾಂತ್ರೀಕೃತ ಬದುಕಿನ ಜಂಜಾಟಗಳಲ್ಲಿ ಸಿಲುಕಿರುವ ಮನುಷ್ಯನಿಗೆ ನೆಮ್ಮದಿ ತಂದುಕೊಳ್ಳಲು ಮಠಗಳು, ದೇವಾಲಯಗಳ ಪಾತ್ರ ಮುಖ್ಯವಾದುದಾಗಿದೆ.

ಗಾವಡಗೆರೆ ಗ್ರಾಮದಲ್ಲಿರುವ 'ಓಂ ಶ್ರೀ ಗುರುಲಿಂಗ ಜಂಗಮದೇವರ ಮಠ' ಈ ನಿಟ್ಟಿನಲ್ಲಿ ಸಾಮಾಜಿಕವಾಗಿ, ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ಶೈಕ್ಷಣಿಕವಾಗಿ ತನ್ನ ಸೇವೆ ಸಲ್ಲಿಸುತ್ತಿದೆಯಲ್ಲದೆ ಮರಾಠಿ ಜನಾಂಗದವರ ಶ್ರೀ ಸಿದ್ಧರಾಮೇಶ್ವರ ಮಠ ಅವರ ಭಾಷೆ ಸಂಸ್ಕೃತಿ ಉಳಿಸಿಕೊಳ್ಳುವಲ್ಲಿ ಪಾತ್ರವಹಿಸುತ್ತಿದೆ. ಗಾವಡಗೆರೆ ಗ್ರಾಮದ ಜನ ಎಷ್ಟು ದೈವಭಕ್ತರೆಂಬುದಕ್ಕೆ ಇಲ್ಲಿರುವ ೧೫ಕ್ಕಿಂತಲೂ ಹೆಚ್ಚಿನ ದೇವಾಲಯಗಳು ಸಾಕ್ಷಿಯಾಗಿವೆ.

ಗಾವಡಗೆರೆ ಗ್ರಾಮದ ಕೀರ್ತಿ ಸಾಕಷ್ಟು ಹೆಚ್ಚಲು ಗ್ರಾಮದೇವತೆಯಾದ ಪಟ್ಟಲದಮ್ಮನ (ಗಾವಡಗೆರೆಯಮ್ಮ) ಪಾತ್ರ ಪ್ರಮುಖವಾದುದಾಗಿದೆ. ಬೇಡಿದ ವರ ನೀಡುವ ಇಷ್ಟಾರ್ಥ ದೇವತೆ ಎಂದು ನಂಬಿರುವ ಅನೇಕ ಭಕ್ತರು ದೇವಿಗೆ ನಡೆದುಕೊಳ್ಳುತ್ತಾರೆ. ದೇವಿಯ ಭಕ್ತರ ಸಂಖ್ಯೆ ಎಷ್ಟು ಪ್ರಮಾಣದಲ್ಲಿದೆ ಎಂಬುದಕ್ಕೆ ಪ್ರತಿ ಶುಕ್ರವಾರ ನಡೆಯುವ ದೇವಿ ಪೂಜೆಗೆ ಹಾಗೆಯೇ ಜಾತ್ರಾ ಮಹೋತ್ಸವದಲ್ಲಿ ಸೇರುವ ಜನರೆ ಸಾಕ್ಷಿ. ಗಾವಡಗೆರೆಯಮ್ಮ ಪವಾಡ ದೇವತೆ ಎಂದು ನಂಬಿ ಪೂಜಿಸುತ್ತಾರೆ. ಜೊತೆಗೆ ಊರಿನ ಸಂಸ್ಕೃತಿ ಆಚಾರ-ವಿಚಾರ, ಕೃಷಿ, ಸಾಮಾಜಿಕ, ಧಾರ್ಮಿಕ ಪರಿಸ್ಥಿತಿ ಹಬ್ಬ ಹರಿದಿನಗಳು, ಜಾತ್ರೆಯಲ್ಲಿನ ಆಚರಣೆಗಳು, ಪ್ರಗತಿಪರ ಚಿಂತನೆ ಈ ಎಲ್ಲ ದೃಷ್ಟಿಯಿಂದಲೂ ಗಾವಡಗೆರೆ ಗ್ರಾಮ ಅಧ್ಯಯನ ಯೋಗ್ಯ ವಿಷಯವಾದ್ದರಿಂದ ನಾನು ಈ ಗ್ರಾಮವನ್ನು ಅಧ್ಯಯನ ಮಾಡಲು ಮುಂದಾಗಿದ್ದೇನೆ.

ಅಧ್ಯಾಯ ೨

ಗಾವಡಗೆರೆಯ ಶಾಸನಗಳು

ಯಾವುದೇ ಪ್ರದೇಶದ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸಗಳ ಅಧ್ಯಯನಕ್ಕೆ ಶಾಸನಗಳು ಅಮೂಲ್ಯ ಆಕರಗಳು. ಶಾಸನಗಳು ಒಂದು ಜನಾಂಗದ ಆಸ್ತಿ. ಸುದೈವದಿಂದ ನಮ್ಮ ನಾಡಿನ ಶಾಸನ ಸಂಪತ್ತು ಹೇರಳವಾಗಿದೆ. ಯಾರ ಕಣ್ಣಿಗೂ ಬೀಳದೆ ಮರೆಯಾಗಿರುವ ಶಾಸನಗಳು ಕೂಡ ಇನ್ನೂ ಹೇರಳವಾಗಿವೆ. ಇಂತಹ ಶಾಸನಗಳನ್ನು ಸಂಶೋಧಕರು ಬೆಳಕಿಗೆ ತಂದಲ್ಲಿ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆ ರಾಷ್ಟ್ರ ಮಟ್ಟದಲ್ಲಿ ಗುರುತಿಸಲ್ಪಡುತ್ತದೆ. ಗಾವಡಗೆರೆ ಗ್ರಾಮಕ್ಕೆ ಸಂಬಂಧಿಸಿದಂತೆ ಒಟ್ಟು ೩ ಶಾಸನಗಳು ದೊರೆತಿವೆ.

ವಿಠೋಬ ದೇವಾಲಯದ ಶಾಸನ

ಶ್ರೀ
ವಿಠೋಬ
1914 ರಿಂದ 1919
ಈ ವರೆವಿಗೆ ನಡೆ
ದ ಇಂಗ್ಲೇಂಡ್ ಮ
ತ್ತು ಜರ್ಮ ನಿಯ ಮ
ಹಾಯುದ್ಧಕ್ಕೆ ಹೋ
ಗಿದ್ದ ಗಾವಡಗೆರೆ
ಮುಂತಾದ 8 ಹಳ್ಳಿ
ಯ ಮಹಾಜನರು
ಈ ದೇವಸ್ಥಾನಕ್ಕೆ 23½
ಗುಂಟೆ ಗದ್ದೆಯನ್ನು
ಅರ್ಪಿಸಿರುವ
ಮಹಾಶಾಸನ
ಧರ್ಮಾರ್ಥ
ತಾ: 6-7-1927
ಕಾರ್ಯದರ್ಶಿ
ಅ. ಪಾಂಡೋಜಿ
ಕದಂ

ಈ ಶಾಸನವು ಮರಾಠಿಗರ ಆರಾಧ್ಯ ದೈವವಾದ ವಿಠೋಬ ರುಕ್ಮಿಣಿ ದೇವಾಲಯದ ಹೊರಭಾಗದಲ್ಲಿರುವ ಶಿಲಾಶಾಸನವಾಗಿದೆ. 'ವಿಠೋಬ' ದೇವನನ್ನು ಸ್ತುತಿಸುವ ಮೂಲಕ ಈ ಶಾಸನ ಪ್ರಾರಂಭವಾಗುತ್ತದೆ. ೧೯೧೪ರಿಂದ ೧೯೧೯ರವರೆಗೆ ನಡೆದ ಇಂಗ್ಲೇಂಡ್ ಮತ್ತು ಜರ್ಮನಿಯ ಮಹಾಯುದ್ಧದಲ್ಲಿ ಭಾಗವಹಿಸಿದ್ದ ಗಾವಡಗೆರೆ ಮುಂತಾದ ೮ ಹಳ್ಳಿಯ ಮಹಾಜನರು ಪುಕ್ಕಟೆಯಾಗಿ ಮತ್ತು ಯುದ್ಧದಲ್ಲಿ ಪಾಲ್ಗೊಂಡ ನೆನಪಿಗಾಗಿ ವಿಠೋಬ ದೇವಸ್ಥಾನಕ್ಕೆ ೨೩½ ಗುಂಟೆ ಗದ್ದೆಯನ್ನು ಅರ್ಪಿಸಿರುವ ಮಹಾಶಾಸನವಿದು. ಇದನ್ನು ದಿನಾಂಕ ೬ ಜುಲೈ ೧೯೨೭ರಂದು ಕೆತ್ತಿಸಲಾಯಿತು. ಇದರ ಕಾರ್ಯದರ್ಶಿಗಳು ಅ. ಪಾಂಡೋಜಿ ಕದಂ ಎಂಬುವವರಾಗಿದ್ದಾರೆ. ಇಂದಿಗೂ ಸಹ ಮರಾಠಿಗರ ಮನೆಗಳಲ್ಲಿ ವಿವಿಧ ಬಗೆಯ ಕತ್ತಿಗಳಿದ್ದು ಅವುಗಳನ್ನು ಕ್ಷತ್ರೀಯರಾದ ಮರಾಠಿಗರು ದೇವರ ಮನೆಯಲ್ಲಿಟ್ಟು ಪೂಜಿಸುತ್ತಾರಲ್ಲದೆ ದಸರಾ ಸಂದರ್ಭದಲ್ಲಿ ಬನ್ನಿ ಮರ ಕಡಿಯಲು ಮೆರವಣಿಗೆ ಮೂಲಕ ಹೋಗುತ್ತಾರೆ.

ಸಂತೆಮಾಳದಲ್ಲಿರುವ ಶಾಸನ

ಶುಭಮಸ್ತು
ಈ ಗಾವಡಗೆರೆ
ಸಂತೆಯು 1910 ನೇ
ಇಸವಿಯಲ್ಲಿ ಇದೆ
ಗ್ರಾಮದ ವೆಂಕೋ
ಬರಾವ್ ಕದಂರ
ವರಿಂದ ಧರ್ಮಾ
ರ್ಥವಾಗಿ ಸ್ವಂತ
ಲಾಗೋಡಿನಿಂದ
ಸ್ಥಾನಿಕವಾಗಿರು
ತ್ತೆ ------ 3-12-1936
ಮಂಗಳಂ
B.G.R.S

ಒಳಿತನ್ನು ಬಯಸುವ 'ಶುಭಮಸ್ತು'ವಿನಿಂದ ಪ್ರಾರಂಭವಾಗುವ ಈ ಶಾಸನವು ಗಾವಡಗೆರೆ ಗ್ರಾಮದ ಪಟ್ಟಲದಮ್ಮ ದೇವಾಲಯದ ಬಳಿ ಇರುವ ಸಂತೆ ಮಾಳದಲ್ಲಿ ಇದೆ. ಈ ಶಾಸನದ ಪ್ರಕಾರ ಗಾವಡಗೆರೆ ಗ್ರಾಮದಲ್ಲಿ ೧೯೧೦ನೇ ಇಸವಿಯಲ್ಲಿ ಇದೆ ಗ್ರಾಮದ ವೆಂಕೋಬರಾವ್‌ಕದಂರವರ ಸಹಾಯ ಮಾಡುವ ಮನೋಧರ್ಮದಿಂದ ಪುಕ್ಕಟೆಯಾಗಿ ಸ್ವಂತ ಖರ್ಚು ವೆಚ್ಚದಿಂದ ಈ ಸ್ಥಳದಲ್ಲಿ ಸಂತೆಯನ್ನು ಪ್ರಾರಂಭಿಸಲಾಗಿದೆ. ಇಲ್ಲಿ 'ಸ್ಥಾನಿಕ' ಎಂಬ ಪದಕ್ಕೆ ದೇವಸ್ಥಾನ ಮುಂತಾದ ಸಾಮಾಜಿಕ ಸಂಸ್ಥೆಗಳ ಮೇಲಧಿಕಾರಿ, ಆಡಳಿತಾಧಿಕಾರಿ

ಎಂದಿರುವುದರಿಂದ 'ವೆಂಕಟರಾವ್‌ಕದಂ' ರವರೆ ಗ್ರಾಮದ ಮುಖ್ಯಸ್ಥರೆಂದು ತಿಳಿದುಬರುತ್ತದೆ. ಅಲ್ಲದೆ ಗ್ರಾಮದ ಯಜಮಾನಿಕೆಯು ಪರಂಪರಾಗತವಾಗಿ 'ದಿವಾನ್‌ವಾಡಕದಂ' ವಂಶದವರಿಗೆ ಮಾತ್ರ ಸೀಮಿತವಾದುದಾಗಿದ್ದು ಪ್ರಸ್ತುತ ಸಂದರ್ಭದಲ್ಲೂ 'ದಿವಾನ್‌ವಾಡಕದಂ' ವಂಶಸ್ಥರಾದ 'ತುಕಾರಾಂಕದಂ'ರವರೆ ಗ್ರಾಮದ ಮುಖಂಡರಾಗಿದ್ದಾರೆ.

ಲಾಗೋಡು ಎಂಬ ಪದಕ್ಕೆ ಲಾಗವಾಡು ಎಂಬರ್ಥವಿದ್ದು 'ಲಾಗವಾಡು' ಎಂದರೆ 'ಖರ್ಚು ವೆಚ್ಚ' ಎಂಬರ್ಥವನ್ನು ಹೊಂದಿದೆ. 'ಧರ್ಮಾರ್ಥ' ಎಂಬ ಪದಕ್ಕೆ 'ಸಹಾಯ ಮಾಡುವ ಮನೋಧರ್ಮ' 'ಪುಕ್ಕಟೆಯಾಗಿ' 'ಉಚಿತವಾಗಿ' ಎಂಬರ್ಥವನ್ನು ಹೊಂದಿದೆ. ಈ ಶಾಸನವು ದಿನಾಂಕ ೩ ಡಿಸೆಂಬರ್ ೧೯೩೬ರಂದು ಕೆತ್ತಲಾಗಿದ್ದು 'ಮಂಗಳಂ' ಎಂಬ ಶುಭಪತ್ರದ ಪದದೊಂದಿಗೆ ಅಂತ್ಯವಾಗಿದೆ.

ಗಾವಡಗೆರೆ ಗ್ರಾಮದಲ್ಲಿ ೧೯೧೦ನೇ ಇಸವಿಯಿಂದಲೂ ಸಂತೆ ನಡೆಯುತ್ತಿದ್ದು ಸುತ್ತಮುತ್ತಲ ಗ್ರಾಮಸ್ಥರು ಮಂಗಳವಾರದಂದು ಈ ಸಂತೆಯಲ್ಲಿ ಭಾಗಿಯಾಗುತ್ತಿದ್ದರು ಎಂಬುದಕ್ಕೆ ಈ ಶಾಸನವೆ ಕುರುಹಾಗಿದೆ. ಇತ್ತೀಚಿನ ೨೦ ವರ್ಷಗಳಿಂದ ಸಂತೆ ಕಟ್ಟುತ್ತಿಲ್ಲವಾದರೂ ಗ್ರಾಮಸ್ಥರು ಮತ್ತು ಜನಪ್ರತಿನಿಧಿಗಳ ಪ್ರೋತ್ಸಾಹದಿಂದ ಮತ್ತೆ ಈ ಗ್ರಾಮದಲ್ಲಿ ಸಂತೆ ಪ್ರಾರಂಭಿಸಬೇಕೆಂಬ ಯೋಜನೆ ಕೈಗೊಂಡಿದ್ದಾರೆ.

ಪಟ್ಟಲದಮ್ಮ ದೇವಾಲಯದ ಶಾಸನ

ಶ್ರೀ
ಪಟ್ಟಲದಮ್ಮ
1914 ರಿಂದ 1919
ಈ ವರೆವಿಗೆನದೆದ ಇಂಗ್ಲೆಂಡ್
ಮತ್ತು ಜರ್ಮನಿ ಮ
ಹಾ ಯುದ್ಧಕ್ಕೆ
ಹೋಗಿದ್ದ ಗಾವ
ಡಗೆರೆ ಮುಂತಾ
ದ 8 ಹಳ್ಳಿ ಮಹಾ
ಜನರು ಧರ್ಮಾರ್ಥವಾಗಿ
ಕಟ್ಟಿಸಿ ಕೊಟ್ಟ ಮುಂಭಾಗದ
9 ಅಂಕಣ ಕಟ್ಟಡ
ದ ಶಾಸನವಿದು
ತಾ. 20-11-23
ಕಾರ್ಯದರ್ಶಿ ದಿ
ಅ ಪಾಂಡುರಂಗ ಕದಂ

ಗ್ರಾಮದೇವತೆಯಾದ ಪಟ್ಟಲದಮ್ಮ ಅಥವಾ ಗಾವಡಗೆರೆಯಮ್ಮ ದೇವಿಯ ದೇವಾಲಯದಲ್ಲಿರುವ ಪ್ರಮುಖ ಶಾಸನವಾಗಿದ್ದು ಈ ಶಾಸನವು 'ಪಟ್ಟಲದಮ್ಮ' ಎಂದು ದೇವಿಯನ್ನು ಸ್ತುತಿಸುವುದರ ಮೂಲಕ ಪ್ರಾರಂಭವಾಗುತ್ತದೆ. ೧೯೧೪ ರಿಂದ ೧೯೧೯ರವರೆಗೆ ನಡೆದ ಇಂಗ್ಲೆಂಡ್ ಮತ್ತು ಜರ್ಮನಿ ದೇಶಗಳ ನಡುವಿನ ಮಹಾಯುದ್ಧದಲ್ಲಿ ಇಂಗ್ಲೆಂಡ್ ಪರ ಯುದ್ಧಕ್ಕೆ ಹೋಗಿದ್ದ ಗಾವಡಗೆರೆ ಮುಂತಾದ '೮' ಹಳ್ಳಿಯ ಮಹಾಜನರು ಉಚಿತವಾಗಿ ಮತ್ತು ಯುದ್ಧಕ್ಕೆ ಹೋಗಿದ್ದ ಜ್ಞಾಪಕಾರ್ಥವಾಗಿ ದೇವಾಲಯದ ಮುಂಭಾಗ ದೇವಿಯ ಗರ್ಭಗುಡಿಯನ್ನು ಸೇರಿಕೊಂಡಂತೆ ೯ ಅಂಕಣದ ಕಟ್ಟಡವನ್ನು ನಿರ್ಮಿಸಿದ ಶಿಲಾಶಾಸನವಾಗಿದೆ. ಈ ಶಾಸನವು ದೇವಾಲಯದ ಪ್ರವೇಶದ್ವಾರದಲ್ಲಿದ್ದು ತಾರೀಖು ೨೦ ನವೆಂಬರ್ ೧೯೨೩ರಂದು ಕೆತ್ತಲಾಗಿದೆ. ಇದರ ಕಾರ್ಯದರ್ಶಿಗಳು ಡಿ.ಪಾಂಡುರಂಗಕದಂ ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಅಧ್ಯಾಯ ೩

ಸಾಂಸ್ಕೃತಿಕ ಕ್ಷೇತ್ರವಾಗಿ ಗಾವಡಗೆರೆ

ಸಂಸ್ಕೃತಿ ಎಂಬುದು ಮನುಷ್ಯನ ಸಮಸ್ತ ಸಾಮಾಜಿಕ ಪರಂಪರೆಯನ್ನು ಒಳಗೊಂಡಿರುತ್ತದೆ. ಕನ್ನಡದ ಸಂಸ್ಕೃತಿ ಎಂಬ ಪದವು ಇಂಗ್ಲೀಷಿನ Culture (ಕಲ್ಚರ್) ಎಂಬ ಪದದ ಸಂವಾದಿ ಪದ ಮನುಷ್ಯ ನಿರ್ಮಿತವಾದದ್ದು Culture (ಕಲ್ಚರ್) ಎಂಬುದಾಗಿದೆ.

ಸಮಾಜಕ್ಕೆ ಒಪ್ಪಿತವಾದ ಮೌಲ್ಯಗಳ ಒಟ್ಟು ಮೊತ್ತವೇ 'ಸಂಸ್ಕೃತಿ' ಯಾವ ಮೌಲ್ಯವನ್ನು ಸಮಾಜ ಒಳ್ಳೆಯ ಮೌಲ್ಯ ಎಂದು ಭಾವಿಸುವುದೋ ಅದನ್ನು ಸಂಸ್ಕೃತಿ ಎಂದು ಪರಿಗಣಿಸಲಾಗುತ್ತದೆ. ಸಂಸ್ಕೃತಿ ಒಂದು ಸಮುದಾಯ ಒಳ್ಳೆಯದೆಂದು ಭಾವಿಸಿರುವ ಮೌಲ್ಯಗಳಾಗಿರುತ್ತವೆ.

ಒಂದು ಸಮುದಾಯದ ಎಲ್ಲಾ ರೀತಿಯ ಆಚಾರ ವಿಚಾರಗಳು, ರೂಢಿ ಸಂಪ್ರದಾಯಗಳು, ಮೌಲ್ಯಗಳು ಒಟ್ಟಾರೆಯಾಗಿ ಒಂದು ಜನಜೀವನದ ಸಂಪೂರ್ಣ ಜೀವನ ವಿಧಾನವನ್ನೇ ಸಂಸ್ಕೃತಿ ಎಂದು ಕರೆಯಲಾಗುತ್ತದೆ.

ಸಂಸ್ಕೃತಿ ಎಂದರೇನೆಂಬುದಕ್ಕೆ ಒಂದು ನಿರ್ದಿಷ್ಟತೆಯನ್ನು ನೀಡಲು ಸಾಧ್ಯವಿಲ್ಲ. ಸಂಸ್ಕೃತಿ ಎಂದರೆ ಒಳ್ಳೆಯದು ಮಾತ್ರವಲ್ಲ. ಜನರ ಪ್ರತಿಯೊಂದು ನಡವಳಿಕೆಯೂ ಸಂಸ್ಕೃತಿ ಎನಿಸಿಕೊಳ್ಳುತ್ತದೆ. ಇಲ್ಲಿ ಒಳ್ಳೆಯದು ಕೆಟ್ಟದ್ದು ಎಂಬುದು ಮುಖ್ಯವಲ್ಲ. ಜನರ ಒಟ್ಟಾರೆ ಜೀವನ ವಿಧಾನ ಮುಖ್ಯವಾಗಿದೆ.

ಸಂಸ್ಕೃತಿ ಎನ್ನುವುದು ಒಂದು ಸಿದ್ಧವಸ್ತುವಲ್ಲ. ಅದು ನಿರಂತರವಾಗಿ ಬದಲಾಗುವ ಪ್ರಕ್ರಿಯೆ. ಇಂತಹ ಸಂಸ್ಕೃತಿ ಎಂಬುದಕ್ಕೆ ಒಂದು ಒಪ್ಪಿಗೆ ಇರುವುದಿಲ್ಲ. ಇಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬ ಚರ್ಚೆ ಸದಾ ನಡೆಯುತ್ತಲೇ ಇರುತ್ತದೆ. ಒಂದು ಕಾಲದಲ್ಲಿ ಸರಿಯಾದದ್ದು ಮತ್ತೊಮ್ಮೆ ತಪ್ಪಾಗಬಹುದು.

ಸಂಸ್ಕೃತಿ ಎಂಬ ಪದ ಇತ್ತೀಚೆಗೆ ಸರ್ವವ್ಯಾಪಿಯಾಗಿ, ಸರ್ವಬಳಕೆಯ ಪದವಾಗಿ ರೂಪುಗೊಂಡಿದೆ. ಸಾಂಸ್ಕೃತಿಕ ಎಂಬ ಪದವಂತು ಸಾಮಾನ್ಯವಾಗಿ ಬಳಕೆಯಲ್ಲಿದೆ. ಒಂದು ಗ್ರಾಮದ ಸಾಂಸ್ಕೃತಿಕ ಅಧ್ಯಯನ ಮಾಡುವ ಮೊದಲು ಸಂಸ್ಕೃತಿ ಎಂದರೇನೆಂಬುದನ್ನು ತಿಳಿಯುವುದು ಸಾಂಸ್ಕೃತಿಕ ಅಧ್ಯಯನಕಾರನ ಕರ್ತವ್ಯವಾಗಿದೆ.

ದೇವಾಲಯಗಳು

ಗಾವಡಗೆರೆ ಗ್ರಾಮದಲ್ಲಿ ಅನೇಕ ದೇವಾಲಯಗಳು ಕಂಡುಬರುತ್ತವೆ. ಇಲ್ಲಿ ಜನ ದೇವರನ್ನು ಹೆಚ್ಚು ನಂಬಿ ಶ್ರದ್ಧಾ ಭಕ್ತಿಗಳಿಂದ ಪೂಜಿಸುವವರಾಗಿದ್ದಾರೆ. ಗಾವಡಗೆರೆಯಲ್ಲಿ ಕಂಡುಬರುವ ಪ್ರಮುಖ ದೇವಾಲಯಗಳೆಂದರೆ;

೧. ಬಸವೇಶ್ವರ ದೇವಾಲಯ
೨. ಗಾವಡಗೆರೆಯಮ್ಮ ಅಥವಾ ಪಟ್ಟಲದಮ್ಮ ದೇವಾಲಯ
೩. ಪಿರಿಯಾಪಟ್ಟಣದಮ್ಮ ದೇವಾಲಯ
೪. ವಿಠೋಬ ದೇವಾಲಯ
೫. ಮಹದೇಶ್ವರ ದೇವಾಲಯ
೬. ರಾಮದೇವರ ದೇವಾಲಯ
೭. ಶನಿದೇವರ ದೇವಾಲಯ
೮. ಮಾರಮ್ಮ ದೇವಾಲಯ
೯. ಮಂಚಮ್ಮನ ದೇವಾಲಯ
೧೦. ರಾಂಚೆಯ ದೇವಾಲಯ
೧೧. ಬೆಟ್ಟದಚುಕ್ಕಿ ದೇವಾಲಯ
೧೨. ಮರಗೆಮ್ಮನ ದೇವಾಲಯ
೧೩. ಹಾಲಮ್ಮನ ದೇವಾಲಯ
೧೪. ಚಿಕ್ಕಮ್ಮನ ದೇವಾಲಯ

ಬಸವೇಶ್ವರ ದೇವಾಲಯ: ಬಸವೇಶ್ವರ ದೇವಾಲಯವು ಊರಿನ ಮಧ್ಯಭಾಗದಲ್ಲಿದೆ. ಕಲೆ ಮತ್ತು ವಾಸ್ತುಶಿಲ್ಪವಿಲ್ಲದ ಈ ದೇವಾಲಯದ ಗರ್ಭಗುಡಿಯಲ್ಲಿ ಲಿಂಗ ಮತ್ತು ಎದುರಿಗೆ ಬಸವನ ವಿಗ್ರಹವಿದ್ದರೆ ದೇವಾಲಯದ ಮಧ್ಯಭಾಗದಲ್ಲಿ ಶಿವಪಾರ್ವತಿ, ಗಣೇಶ, ಚಿಕ್ಕಚಿಕ್ಕ ಬಸವನ ವಿಗ್ರಹಗಳಿದ್ದರೆ ನಂತರ ಭಕ್ತರು ಕೂರುವುದಕ್ಕೆ ಅಂಗಳವಿದೆ. ದೇವಾಲಯ ಎತ್ತರವಾದ ಜಾಗದಲ್ಲಿ ಕಟ್ಟಲ್ಪಟ್ಟಿದ್ದು ದೇವಾಲಯದ ಸುತ್ತ ಕಾಂಪೌಂಡ್ ಇದೆಯಲ್ಲದೆ ದೇವಾಲಯದ ಪ್ರವೇಶದ್ವಾರದಲ್ಲಿ ಸುಂದರವಾದ ದೊಡ್ಡ ಬಸವನ ವಿಗ್ರಹವನ್ನು ಸಿಮೆಂಟಿನಿಂದ ಮಾಡಲಾಗಿದೆ. ದೇವಾಲಯದ ಎದುರಿಗೆ 'ಕುರ್ಜು'[೧] ಇದೆ. ಓಕುಳಿ ಹಬ್ಬದಲ್ಲಿ ಈ ಕುರ್ಜಿನಲ್ಲೇ ಉತ್ಸವ ಮೂರ್ತಿಯನ್ನು ಇಟ್ಟು ಪೂಜಿಸುವುದಾಗಿದೆ. ದೇವಾಲಯದ ಒಳಗಡೆ ಯಾವುದೇ

[೧] ಕುರ್ಜು ಎಂದರೆ ೪ ಕಂಬಗಳ ಆಧಾರದ ಮೇಲೆ ಕಟ್ಟಿರುವ ಗೋಪುರ. ಓಕುಳಿ ಹಬ್ಬದಲ್ಲಿ ಕುರ್ಜಿನ ಮೊದಲನೇ ಹಂತದಲ್ಲಿ ದೇವರ ಮೂರ್ತಿಯನ್ನು ಪೂಜಿಸಿ ಪ್ರತಿಷ್ಠಾಪಿಸಲಾಗುತ್ತದೆ.

ಕಿಟಕಿಗಳಾಗಲಿ ಇಲ್ಲ. ಹೊರ ಅಂಗಳದಲ್ಲಿ ಲಿಂಗಕ್ಕೆ ನೇರವಾಗಿ ಸಣ್ಣದೊಂದು ಕಿಂಡಿ ಮಾತ್ರ ಕಾಣಬಹುದು.

ಕುರ್ಜು ಎಂದರೆ ನಾಲ್ಕು ಕಂಭಗಳ ಆಧಾರದ ಮೇಲೆ ಕಟ್ಟಿರುವ ಗೋಪುರ, ಓಕುಳಿ ಹಬ್ಬದಲ್ಲಿ ಕುರ್ಜಿನ ಮೊದಲನೆ ಹಂತದಲ್ಲಿ ದೇವರನ್ನು ಪ್ರತಿಷ್ಠಾಪಿಸಲಾಗುತ್ತದೆ.

ಪಟ್ಟಲದಮ್ಮ ಅಥವಾ ಗಾವಡಗೆರೆಯಮ್ಮ ದೇವಾಲಯ: ಗಾವಡಗೆರೆಯಮ್ಮನ ದೇವಾಲಯಗಳು ಈ ಗ್ರಾಮದಲ್ಲಿ ಎರಡಿದ್ದು ಊರ ಹೊರಭಾಗದ ದೇವಾಲಯವು ದೇವಿಯ ಮೂಲ ದೇವಾಲಯವಾಗಿದ್ದರೆ ಊರ ಮಧ್ಯೆ ಇರುವ ದೇವಿಯ ದೇವಾಲಯದಲ್ಲಿ ಬೆಲೆಬಾಳುವ ಉತ್ಸವಮೂರ್ತಿ ಮತ್ತು ಚಿನ್ನ, ಬೆಳ್ಳಿ ಆಭರಣಗಳನ್ನು ಇಡಲಾಗಿದೆ. ಪ್ರತಿಶುಕ್ರವಾರದಂದು ಬೆಳಗ್ಗಿನಿಂದ ಸಂಜೆಯವರೆಗೆ ಕಾಡಿನ ದೇವಾಲಯದಲ್ಲಿ ಪೂಜೆ ನಡೆದರೆ, ಸಂಜೆಯಿಂದ ರಾತ್ರಿಯವರೆಗೆ ಊರಿನ ದೇವಾಲಯದಲ್ಲಿ ಪೂಜೆ ನಡೆಯುತ್ತದೆ. ದೇವಾಲಯದಲ್ಲಿ ಭಕ್ತರಿಗೆ ಕಪ್ಪು ಹೂವು ನೀಡುವುದು ವಾಡಿಕೆ. ಆ ಕಪ್ಪನ್ನು ಹಣೆಗೆ ಹಚ್ಚಿಕೊಂಡಲ್ಲಿ ನಮ್ಮ ಕಷ್ಟಗಳೆಲ್ಲ ಪರಿಹಾರವಾಗುತ್ತದೆ ಎಂಬುದು ಭಕ್ತರ ನಂಬಿಕೆ. ದೇವಿಗೆ ಪ್ರತಿ ಶುಕ್ರವಾರ ಮಾತ್ರ ಪೂಜಿಸಲಾಗುತ್ತಿದೆ. ಮಿಕ್ಕ ಹಾಗೆ ಹಬ್ಬಹರಿದಿನಗಳಲ್ಲಿ ಮತ್ತು ವಿಶೇಷ ದಿನಗಳಲ್ಲಿ ಪೂಜಿಸಲಾಗುತ್ತದೆ.



ಪಟ್ಟಲದಮ್ಮ ದೇವಾಲಯ

ಪಿರಿಯಾಪಟ್ಟಣದಮ್ಮ ದೇವಾಲಯ: 'ಪಿರಿಯಾಪಟ್ಟಣದಮ್ಮ'[೧] ದೇವಾಲಯವು ಊರ ಹೊರಭಾಗದಲ್ಲಿ ಗಾವಡಗೆರೆಯಮ್ಮ ದೇವಾಲಯದ ಸ್ವಲ್ಪ ದೂರದಲ್ಲಿ ಗಾವಡಗೆರೆಯ ಓಂ ಶ್ರೀ ಗುರುಲಿಂಗಜಂಗಮ ದೇವರ ಮಠದ ಪಕ್ಕದಲ್ಲಿದೆ. ಪಿರಿಯಾಪಟ್ಟಣದಮ್ಮ ದೇವಿಯನ್ನು ಮಡಿವಾಳ ಜನಾಂಗದವರು ಪೂಜಿಸುತ್ತಾರೆ. ಪ್ರತಿ ಶುಕ್ರವಾರ ಇಲ್ಲಿ ಪೂಜೆ ನಡೆಯುತ್ತದೆ. ಮೊದಲು ಗಾವಡಗೆರೆಯಮ್ಮನಿಗೆ ಪೂಜೆ ಸಲ್ಲಿಸಿದ ನಂತರವೆ ಪಿರಿಯಾಪಟ್ಟಣದಮ್ಮನಿಗೆ ಭಕ್ತರು ಪೂಜೆ ಸಲ್ಲಿಸಬೇಕು ಎಂಬುದು ವಾಡಿಕೆ. ಇಲ್ಲದಿದ್ದಲ್ಲಿ ಪಟ್ಟಲದಮ್ಮ ದೇವಿ ಕೋಪಿಸಿಕೊಳ್ಳುತ್ತಾಳೆ ಎಂಬುದು ಇಲ್ಲಿನ ಜನರ ನಂಬಿಕೆ. ಗ್ರಾಮದಲ್ಲೂ ಪಿರಿಯಾಪಟ್ಟಣದಮ್ಮ ದೇವಿಯ ದೇವಾಲಯವಿದ್ದು ಇಲ್ಲಿ ದೇವಿಯ ಚಿನ್ನದ ವಿಗ್ರಹ, ಚಿನ್ನ, ಬೆಳ್ಳಿ, ಒಡವೆ ವಸ್ತ್ರಗಳನ್ನಿಡಲಾಗಿದೆ. ಶುಕ್ರವಾರ ಈ ದೇವಾಲಯದಲ್ಲೂ ಪೂಜೆ ಪುನಸ್ಕಾರ ನಡೆಸಲಾಗುತ್ತದೆ. ಪಿರಿಯಾಪಟ್ಟಣದಮ್ಮ ದೇವಿಯ ಉತ್ಸವಮೂರ್ತಿಯನ್ನು ಮೆರವಣಿಗೆ ಮಾಡುವುದಿಲ್ಲ. ಇದು ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಯಾಗಿದೆ.

ವಿಠೋಬ ದೇವಾಲಯ: ವಿಠೋಬ ದೇವಾಲಯವು ಮರಾಠಿಗರ ದೇವಾಲಯವಾಗಿದೆ. ಈ ದೇವಾಲಯವು ಇತ್ತೀಚೆಗೆ ಪೂರ್ಣ ಜೀರ್ಣೋದ್ಧಾರಗೊಂಡಿದೆ. ಈ ಮೊದಲು ಇದ್ದ ಮಂಗಳೂರು ಹೆಂಚಿನ ದೇವಾಲಯವನ್ನು ಪೂರ್ಣ ಪ್ರಮಾಣದಲ್ಲಿ ನವೀಕರಿಸಿ ವಿಠೋಬ ಮತ್ತು ರುಕ್ಮಿಣಿ ದೇವಿಯನ್ನಲ್ಲದೆ ಗಣೇಶನನ್ನು ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿದೆ. ಮರಾಠಿಗರು ಪಾಂಡುರಂಗನನ್ನು ಬಹಳ ಶ್ರದ್ಧಾಭಕ್ತಿಯಿಂದ ಪೂಜಿಸುತ್ತಾರಲ್ಲದೆ ಪ್ರತಿದಿನ ದೇವಾಲಯದಲ್ಲಿ ಬೆಳಿಗ್ಗೆ ಮತ್ತು ಸಂಜೆ ಪೂಜೆ ನಡೆಸಲಾಗುತ್ತದೆ. ಪ್ರತಿದಿನ ಸಂಜೆ ಭಜನೆ ಮಾಡಲಾಗುತ್ತದೆ. ವಿಠೋಬ ರುಕ್ಮಿಣಿಯನ್ನು ಈ ಗ್ರಾಮದಲ್ಲಿ ಮರಾಠಿ ಜನಾಂಗದವರು ಹೊರತುಪಡಿಸಿ ಬೇರೆ ಯಾರು ಪೂಜಿಸುವುದಿಲ್ಲ. ಪಂಡರಾಪುರದ ವಿಠಲನ ಭಕ್ತರಾದ್ದರಿಂದ ಮರಾಠಿಗರು ಇಲ್ಲಿ ಪಾಂಡುರಂಗನ ದೇವಾಲಯವನ್ನು ನಿರ್ಮಿಸಿಕೊಂಡಿದ್ದಾರೆ. ಪಾಂಡುರಂಗನಿಗೆ ಎಲ್ಲಾ ರೀತಿಯ ಸಿಹಿ ತಿಂಡಿಗಳು, ಪೇಡ, ಹೋಳಿಗೆ ನೈವೇದ್ಯವಾಗಿ ಅರ್ಪಿಸುತ್ತಾರೆ.

ಮಹದೇಶ್ವರ ದೇವಾಲಯ: ಮಹದೇಶ್ವರ ದೇವಾಲಯವು ಗಾವಡಗೆರೆ ಕೆರೆಯ ದಡದಲ್ಲಿರುವ ದೇವಾಲಯವಾಗಿದ್ದು ಈ ದೇವಾಲಯವನ್ನು ಲಿಂಗಾಯಿತರು ಪೂಜಿಸುತ್ತಾರೆ. ದೇವಾಲಯದಲ್ಲಿ ೧½ ಎತ್ತರದ ಲಿಂಗವಿದೆ. ಪ್ರತಿ ಸೋಮವಾರ ಮತ್ತು ಶುಕ್ರವಾರ ಇಲ್ಲಿ ಪೂಜೆ ನಡೆಯುತ್ತದೆ.

---

[೧] ಪಿರಿಯಾಪಟ್ಟಣದಮ್ಮ ದೇವಿಯ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡುವುದಿಲ್ಲ. ಇದು ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಯಾಗಿದೆ.

ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದಲ್ಲದೆ ‘ಪರು’[೧] ಸಹಾ ಮಾಡಲಾಗುತ್ತದೆ. ದೇವಾಲಯದ ಪಕ್ಕದಲ್ಲಿ ಒಂದು ಕೊಳವಿದೆ. ಪಕ್ಕದ ಕೆರೆಯೂರು ಗ್ರಾಮಸ್ಥರು ಸೇರಿ ಪರು ಮಾಡುತ್ತಾರಲ್ಲದೆ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಮಹದೇಶ್ವರನಿಗೆ ಯಾವುದೇ ಬಲಿಯನ್ನು ನೀಡುವುದಿಲ್ಲ. ಜಾತ್ರೆ ದಿನದಂದು ದೇವಾಲಯದ ಎದುರಿಗೆ ಬೆಂಕಿ ಕೊಂಡ ಹಾಕಿ ಹರಕೆ ಹೊತ್ತ ಭಕ್ತರು ಕೊಂಡ ಹಾದು ಹರಕೆ ತೀರಿಸುತ್ತಾರೆ.

ಮಾರಮ್ಮನ ದೇವಾಲಯ: ಮಾರಮ್ಮನ ದೇವಾಲಯವು ಊರ ಮಧ್ಯಭಾಗದಲ್ಲಿದ್ದು ಅಮ್ಮ ಆದವರು ದೇವಿಗೆ ಮಡಿಯಲ್ಲಿ ಬೇವಿನಸೊಪ್ಪು, ಎಳನೀರು, ಮೊಸರನ್ನ, ನಿಂಬೆಹಣ್ಣು, ಪೂಜಾ ಸಾಮಗ್ರಿಗಳೊಂದಿಗೆ ತಂಪು ನೀಡುತ್ತಾರೆ. ಯುಗಾದಿ ಹಬ್ಬದಲ್ಲಿ ದೇವರ ಮೂರ್ತಿಗಳನ್ನು ನದಿಯಲ್ಲಿ ತೊಳೆದು ಪೂಜಿಸುವುದು ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಯಾಗಿದೆ. ಆ ರೀತಿ ತಂದ ಗಾವಡಗೆರೆಯಮ್ಮ ದೇವಿಯ ಉತ್ಸವಮೂರ್ತಿಯನ್ನು ಮಾರಮ್ಮನ ದೇವಾಲಯದಲ್ಲಿ ಇಟ್ಟು ಪೂಜಿಸಿ ಸೂರ್ಯಾಸ್ತದ ನಂತರ ದೇವಿಯ ದೇವಾಲಯಕ್ಕೆ ಕೊಂಡೊಯ್ಯಲಾಗುತ್ತದೆ. ಹಾಗೆಯೇ ಗಾವಡಗೆರೆಯಮ್ಮ ದೇವಿಯ ಜಾತ್ರೆಯಲ್ಲಿ ನಡೆಯುವ ಪ್ರಮುಖ ಆಚರಣೆಗಳಲ್ಲೊಂದಾದ ಬಾಯಿಬೀಗ ಹಾಕುವುದು ಮಾರಿ ದೇವಾಲಯದಲ್ಲಿ ನಡೆಯುವುದು ವಿಶೇಷ. ವರ್ಷಕ್ಕೊಮ್ಮೆ ಗ್ರಾಮದಲ್ಲಿ ಮಾರಮ್ಮನ ಹಬ್ಬವನ್ನು ವಿಜೃಂಭಣೆಯಿಂದ ನಡೆಸಲಾಗುತ್ತದೆ. ಮಾರಮ್ಮನಿಗೆ ಹೆಂಗಳೆಯರು ಹಸಿಅಕ್ಕಿ ತಂಬಿಟ್ಟಿನಲ್ಲಿ ದೀಪ ಹಚ್ಚಿ ತಂದು ಕಣಗಿಲೆ ಹೂವಿನಿಂದ ಅಲಂಕರಿಸಿ ಆರತಿ ಎತ್ತಿ ಪೂಜಿಸುತ್ತಾರೆ. ಪೂಜೆಯ ನಂತರ ಕುರಿ ಕೋಳಿ ಮೇಕೆಗಳನ್ನು ದೇವಿಗೆ ಬಲಿ ನೀಡಲಾಗುತ್ತದೆ. ದಲಿತ ಜನಾಂಗದವರು ಅವರಿಗೆ ಪ್ರತ್ಯೇಕ ಮಾರಿ ಗುಡಿಯನ್ನು ಕಟ್ಟಿಕೊಂಡಿದ್ದಾರೆ. ನಾಯಕ ಜನಾಂಗದ ವ್ಯಕ್ತಿ ಇಲ್ಲಿ ಪೂಜಾರಿಯಾಗಿದ್ದಾರೆ.

ಶನಿದೇವರ ದೇವಾಲಯ: ಗಾವಡಗೆರೆಯಲ್ಲಿ ಒಟ್ಟು ೪ ಶನಿದೇವರ ದೇವಾಲಯಗಳಿವೆ. ಈ ದೇವಾಲಯಗಳಲ್ಲಿ ಪ್ರತಿ ಬುಧವಾರ ಮತ್ತು ಶನಿವಾರ ವಿಶೇಷ ಪೂಜೆಗಳು ನಡೆಯುತ್ತವೆ. ಈ ದೇವಾಲಯಗಳಲ್ಲಿನ ಅರ್ಚಕರು ನಾಯಕ ಜನಾಂಗದವರಾಗಿದ್ದಾರೆ. ಶ್ರಾವಣ ಮಾಸದ ಸಂದರ್ಭದಲ್ಲಿ ಶನಿದೇವರ ನಾಟಕವನ್ನು ಅಭಿನಯಿಸುತ್ತಾರೆ. ಅಲ್ಲದೆ ಶನಿದೇವರ ಕಥೆಯನ್ನು ಪಠಿಸುತ್ತಾರೆ.

---

[೧] ‘ಪರು’ ಎಂದರೆ ದೇವಾಲಯದಲ್ಲಿ ಮಾಡುವ ಅಡುಗೆ. ಪರು ಮಾಡಲು ಪೂಜಾರಿ ಮನೆಯವರು ಊರಿನಲ್ಲೆಲ್ಲಾ ಅಕ್ಕಿ ಬೇಳೆ ಎತ್ತಿ ತರುತ್ತಾರೆ.

ರಾಂಚೆಯಿ ದೇವಾಲಯ : ರಾಂಚೆಯಿ ದೇವಾಲಯವು ಮರಾಠಿಗರು ಪೂಜಿಸುವ ದೇವಿಯಾಗಿದೆ. ಈ ದೇವಿಗೆ ಯಾವುದೇ ರೀತಿಯ ಗುಡಿಯನ್ನು ಕಟ್ಟಿಲ್ಲ. ಎತ್ತರವಾದ ಕಟ್ಟೆಯ ಮೇಲೆ ಒಂದು ಕೊಣಮಾವಿನ ಮರದ ಕೆಳಗೆ ದೇವಿಯನ್ನು ಪೂಜಿಸುತ್ತಾರೆ. ವಿಶೇಷವಾಗಿ ಘಾಟ್ಕೆಗಳು ಹೆಚ್ಚು ಪೂಜಿಸುತ್ತಾರೆ. ಈ ದೇವಿಯ ಅರ್ಚಕರು ಒಬ್ಬ ಹೆಂಗಸು. ದೇವಾಲಯದಲ್ಲಿ ಭಾವಿಯನ್ನು ಸೇರಿದಂತೆ ವಿಶಾಲವಾದ ಕಾಂಪೌಂಡ್ ಇದೆ.

ರಾನಾ ಚಿ ಆಯಿ ಎಂದರೆ ಮರಾಠಿ ಭಾಷೆಯಲ್ಲಿ ಕಾಡಿನಿಂದ ಬಂದ ತಾಯಿ ಎಂದು ಅರ್ಥ. 'ಆ' 'ರಾನಾ ಚಿ ಆಯಿ' ಎಂಬ ಪದ 'ರಾಂಚಾಯಿ' ಎಂದಾಗಿದೆ. ಈ ದೇವಿಯನ್ನು 'ಚಪ್ಪರದಮ್ಮ' ಎಂಬ ಹೆಸರನಿಂದಲೂ ಕರೆಯಲಾಗುತ್ತದೆ. ಈ ದೇವಿಗೆ ಪ್ರತಿ ಶುಕ್ರವಾರ ವಿಶೇಷವಾಗಿ ಪೂಜಿಸಲಾಗುತ್ತದೆ. ಈ ದೇವಿಯ ಪೂಜೆ ಮಾಡುವ ಸಂದರ್ಭದಲ್ಲಿ ಚಪ್ಪರವನ್ನು ಹಾಕಿ ಪೂಜೆ ಸಲ್ಲಿಸಬೇಕು. ಆದ್ದರಿಂದ ಚಪ್ಪರದ ಕೆಳಗೆ ವಾಸಿಸುವ ತಾಯಿ 'ಚಪ್ಪರದಮ್ಮ' ಎಂದು ಕರೆಯುತ್ತಾರೆ. ಕಾರ್ತಿಕ ಮಾಸದಲ್ಲಿ ದೇವಿಯನ್ನು ವಿಶಿಷ್ಟವಾಗಿ ಪೂಜಿಸಲಾಗುತ್ತದೆ. ರಾಂಚಾಯಿ ದೇವಿ ಘಾಟ್ಕೆ ವಂಶಸ್ಥರ ಮನೆದೇವತೆಯಾಗಿದ್ದಾಳೆ. ದೇವಿಗೆ ಯಾವುದೇ ರೀತಿಯ ಬಲಿ ನೀಡುವುದಿಲ್ಲ. ಕೊಣಮಾವಿನ ಮರದ ಕೆಳಗೆ ದೇವಿಯನ್ನು ಸಣ್ಣದೊಂದು ಕಲ್ಲಿನ ರೂಪದಲ್ಲಿ ಪೂಜಿಸುತ್ತಾರೆ. ದೇವಿಗೆ ಎಲ್ಲಾ ಹಬ್ಬ ಹರಿದಿನಗಳಂದು ಸೀರೆ ತೊಡಿಸಿ ಪೂಜಿಸುತ್ತಾರೆ.

ಮರಗೆಮ್ಮ ದೇವಾಲಯ: ಮರಗೆಮ್ಮ ದೇವಾಲಯವು ಊರಾಚೆ ಕೆರೆಯ ಬಳಿ ಇದೆ. ಈ ದೇವಿಯ ಭಕ್ತರು ಮತಾಲೆ ವಂಶಸ್ಥರು. ವರ್ಷಕ್ಕೊಂದು ಬಾರಿ ಎಲ್ಲ ಕಡೆ ನೆಲೆಸಿರುವ ಗಾವಡಗೆರೆಯ ಮತಾಲೆ ವಂಶಸ್ತರು ಬಂದು ಮರಗೆಮ್ಮ ದೇವಿಯ ಉತ್ಸವವನ್ನು ವಿಜೃಂಭಣೆಯಿಂದ ನೆರವೇರಿಸುತ್ತಾರೆ. ದೇವಿಗೆ ತಂಬಿಟ್ಟಿನಲ್ಲಿ ಆರತಿ ಮಾಡಿಕೊಂಡು ಅವುಗಳಿಗೆ ಕಣಗಿಲೆ ಹೂವುಗಳಿಂದ ಅಲಂಕರಿಸಿ ತಮ್ಮ ತಮ್ಮ ಮನೆಗಳಿಂದ ಮಂಗಳ ವಾದ್ಯಗಳ ಮೂಲಕ ಮೆರವಣಿಗೆಯಲ್ಲಿ ಬಂದು ಊರ ಹೊರಭಾಗದಲ್ಲಿರುವ ದೇವಾಲಯಕ್ಕೆ ಬಂದು ಪೂಜೆ ಸಲ್ಲಿಸಿ ಕುರಿ, ಮೇಕೆ, ಕೋಳಿಗಳನ್ನು ಬಲಿ ನೀಡುತ್ತಾರೆ.

ಹಾಲಮ್ಮ, ಮಂಚಮ್ಮ, ಚಿಕ್ಕಮ್ಮ, ದೇವಾಲಯಗಳು: ಗಾವಡಗೆರೆ ಗ್ರಾಮದಲ್ಲಿ ವಾಸವಾಗಿರುವ ಕೆಲವು ನಾಯಕ ಜನಾಂಗದ ಜನ ಮನೆ ದೇವತೆಯಾಗಿ ಹಾಲಮ್ಮ, ಮಂಚಮ್ಮ, ಚಿಕ್ಕಮ್ಮ ದೇವರನ್ನು ಪೂಜಿಸುತ್ತಾರೆ. ಈ ದೇವತೆಗಳಿಗೆ ಪ್ರತ್ಯೇಕವಾದ ದೇವಾಲಯಗಳಿವೆ. ದೇವಾಲಯ ಯಾವ ಕಾಲದಲ್ಲಿ ನಿರ್ಮಾಣವಾಯಿತು ಎಂಬುದು ನಿಖರವಾಗಿ ತಿಳಿದಿಲ್ಲ. ಮೊದಲಿದ್ದ ಸಣ್ಣ

ಹೆಂಚಿನ ಮನೆಯಲ್ಲಿದ್ದ ದೇವಾಲಯವನ್ನು ಕೆಡವಿ ಸಂಪೂರ್ಣವಾಗಿ ಹೊಸದಾಗಿ ಆರ್.ಸಿ.ಸಿ. ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಹಾಲಮ್ಮ, ಮಂಚಮ್ಮ, ಚಿಕ್ಕಮ್ಮ ದೇವಾಲಯಗಳಲ್ಲಿ ದೇವಿಯ ಯಾವುದೇ ಮೂರ್ತಿಗಳಿಲ್ಲದಿರುವುದು ವಿಶೇಷ. ಆದರೆ ದೇವಿ ನೆಲೆಸಿದ್ದಾಳೆಂದು ನಂಬಿರುವ ಜಾಗವನ್ನು ಗರ್ಭಗುಡಿ ಎಂದು ನಂಬಿ ಮಂಟಪ ಕಟ್ಟಿ ಅಲ್ಲಿ ದೀಪ ಹಚ್ಚಿಟ್ಟು ಪೂಜೆ ಸಲ್ಲಿಸುತ್ತಾರೆ. ದೀಪ ಹಚ್ಚಿಡುವ ಜಾಗದಲ್ಲಿ ದೇವಿ ನೆಲೆಸಿದ್ದಾಳೆ ಎಂಬುದು ತಲೆತಲಾಂತರದಿಂದ ನಡೆದುಕೊಂಡು ಬಂದ ನಂಬಿಕೆಯಾಗಿದೆ.

ದೇವಿಯರಿಗೆ ಪ್ರತಿದಿನ ೨ ರಿಂದ ೮ಗಂಟೆ ಸಮಯದಲ್ಲಿ ದೀಪ ಹಚ್ಚುತ್ತಾರೆ. ಈ ದೇವಾಲಯಗಳ ಪೂಜಾರಿಕೆ ತಲೆತಲಾಂತರದಿಂದ ಸೀಮಿತ ಕುಟುಂಬಕ್ಕೆ ಉಳಿದುಕೊಂಡು ಬಂದಿದೆ. ಈ ದೇವಿಯರನ್ನು ಪೂಜಿಸುವ ರೀತಿಯಲ್ಲಿ ಮತ್ತೊಂದು ವಿಶೇಷವೆಂದರೆ ದೇವಿಯನ್ನು ಪೂಜಿಸುವ ಪೂಜಾರಿ ಸಹಾ ದೀಪಾವಳಿ ಹಬ್ಬದ ಮೊದಲ ದಿನ ಬಿಟ್ಟು ಬೇರೆ ಯಾವ ಸಮಯದಲ್ಲೂ ಗರ್ಭಗುಡಿಯನ್ನು ಪ್ರವೇಶಿಸುವ ಹಾಗಿಲ್ಲ. ದೇವಿಯರಿಗೆ ದೀಪಾವಳಿಯಂದು ವಿಜೃಂಭಣೆಯಿಂದ ಪೂಜೆ ಸಲ್ಲಿಸಲಾಗುತ್ತದೆ. ದೇವಿಗೆ ಪೂಜೆ ಸಲ್ಲಿಸಲು ದೀಪಾವಳಿ ಹಬ್ಬ ೩ ದಿನ ಮುಂಚಿತವಾಗಿ ಬಾಳೆಗೊನೆಗಳನ್ನು ಯಾರಿಗೂ ತಿಳಿಯದ ರೀತಿ ಕಡಿದು ತರುತ್ತಾರೆ.

ಈ ಸಮಯದಲ್ಲಿ ಹರಿಜನ ಆ ಬಾಳೆಗೊನೆಯನ್ನು ನೋಡಕೂಡದು. ನೋಡಿದರೆ ಮೈಲಿಗೆಯಾಗುತ್ತದೆ ಎಂಬುದು ಅವರ ನಂಬಿಕೆ. ಹಾಗೆಯೇ 'ಹರಿಜನರ ನೆರಳು'[೧] ಸಹಾ ದೇವಿಯ ಮೇಲೆ ಬೀಳಕೂಡದು ಎಂಬುದು ಅವರ ನೇಮ ಮತ್ತು ನಂಬಿಕೆ. ದೀಪಾವಳಿ ಹಬ್ಬದ ಮೊದಲ ದಿನ ಬಾಳೆಗೊನೆಗಳನ್ನು ಹಗದಲ್ಲಿ ಅಡೆಗೆ ಇಡುತ್ತಾರೆ. ದೇವಾಲಯದ ಪೂಜಾರಿ ೩ ದಿನಗಳು ದೇವಾಲಯದ ಒಳಗೆ ವಾಸವಾಗಿರಬೇಕು. ಒಂದು ವೇಳೆ ಬಹಿರ್ದೆಸೆಗೆ ಅಥವಾ ಯಾವುದೇ ಕಾರ್ಯ ನಿಮಿತ್ತ ದೇವಾಲಯದ ಹೊರಬಂದರೆ ಆತ ಮತ್ತೆ ಸ್ನಾನ ಮಾಡಿ ಮಡಿಯುಟ್ಟು ದೇವಾಲಯದ ಒಳಗೆ ಪ್ರವೇಶ ಮಾಡಬೇಕು.

ದೇವಿಯ ಹಬ್ಬವು ರಾತ್ರಿಯ ವೇಳೆ ಯಾರು ನೋಡದ ರೀತಿ ರಾತ್ರಿ ೧೨ ಗಂಟೆಯ ನಂತರ ಪ್ರಾರಂಭವಾಗಿ ಸೂರ್ಯೋದಯದ ಮುಂಚಿತವಾಗಿ ನಡೆದುಹೋಗುತ್ತದೆ. ರಾತ್ರಿ ೧೨ ಗಂಟೆ ಸಮಯದಲ್ಲಿ ಕೆರೆಯಿಂದ ದೇವರನ್ನು ತರುತ್ತಾರೆ. ಒಂದು ಗಡಿಗೆಯಲ್ಲಿ ಹೊಂಬಾಳೆಯನ್ನಿಟ್ಟು ಮಂಗಳದ್ರವ್ಯಗಳಿಂದ ಪೂಜಿಸಿ ಗಂಗೆ ಪೂಜೆ ಮಾಡಿ ನಂತರ ದೇವಿಯನ್ನು

[೧] ಹರಿಜನರ ನೆರಳು ಸೋಕಿದರೆ ಮೈಲಿಗೆಯಾಗುತ್ತದೆ ಎಂಬ ಆಚರಣೆಯನ್ನು ಪ್ರಸ್ತುತ ಸಂದರ್ಭದಲ್ಲೂ ಅನುಸರಿಸಿಕೊಂಡು ಬರುತ್ತಿದ್ದಾರೆ.

ತರುತ್ತಾರೆ. ದೀಪಾವಳಿ ಹಬ್ಬದ ಒಂದು ವಾರ ಕಾಲ ಮಾತ್ರ ಪೂಜಾರಿ ದೇವಿಯ ಗರ್ಭಗುಡಿಯೊಳಗೆ ಪ್ರವೇಶ ಮಾಡಬಹುದು. ನಂತರ ಯಾವುದೇ ಕಾರಣಕ್ಕೂ ಗರ್ಭಗುಡಿಯೊಳಗೆ ಪ್ರವೇಶ ಮಾಡುವ ಹಾಗಿಲ್ಲ. ದೇವಿಯ ದೇವಾಲಯವನ್ನು ಪ್ರತಿ ಭಾನುವಾರ ಮತ್ತು ಶುಕ್ರವಾರ ಶುಚಿಗೊಳಿಸಿ ದೀಪ ಹಚ್ಚಿಡಲಾಗುತ್ತದೆ. ದೇವಿಯ ಯಾವುದೇ ಮೂರ್ತಿಯಲ್ಲದೆ ದೇವಿಯನ್ನು ಅಗೋಚರ ರೂಪದಲ್ಲಿ ಭಕ್ತಿಭಾವದಿಂದ ಅಪಾರವಾಗಿ ನಂಬಿ ಪೂಜಿಸುವುದು ಹಾಲಮ್ಮ, ಮಂಚಮ್ಮ, ಚಿಕ್ಕಮ್ಮ ದೇವಿಯರ ವಿಶೇಷವಾಗಿದೆ. ಈ ದೇವಿಯನ್ನು ಪೂಜಿಸುವ ಪೂಜಾರಿಗಳು ನಾಯಕ ಜನಾಂಗದವರಾಗಿದ್ದಾರೆ.

ಕಲ್ಲಹಳ್ಳಿ ದೇವಸ್ಥಾನ: ಗಾವಡಗೆರೆಯಲ್ಲಿ ಇರುವ ದೇವಾಲಯಗಳಲ್ಲಿ ಕಲ್ಲಹಳ್ಳಿ ದೇವಾಲಯವು ಒಂದಾಗಿದ್ದು, ಈ ದೇವಾಲಯವು ಪಟ್ಟಲದಮ್ಮ ದೇವಾಲಯದ ಎಡಭಾಗದಲ್ಲಿದೆ. ಈ ದೇವಾಲಯಕ್ಕೆ ಕಲ್ಲಹಳ್ಳಿ ದೇವಸ್ಥಾನ ಎಂದು ಕರೆಯಲು ಕಾರಣವೆಂದರೆ ಕಲ್ಲಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದ ನಾಯಕ ಜನಾಂಗದವರು ಹಲವಾರು. ವರ್ಷಗಳ ಹಿಂದೆ ಊರಿನಲ್ಲಿ ಜಗಳ ಮಾಡಿಕೊಂಡು ಕಲ್ಲಹಳ್ಳಿಯನ್ನು ಬಿಟ್ಟು ಗಾವಡಗೆರೆಗೆ ಬಂದು ನೆಲೆಸಿದರು. ಹಾಗೆ ಬರುವ ಸಂದರ್ಭದಲ್ಲಿ ತಾವು ಪೂಜಿಸುತ್ತಿದ್ದ ಮನೆದೇವರುಗಳನ್ನು ತಮ್ಮ ಜೊತೆಯಲ್ಲೆ ತಂದರು. ಆ ಸಂದರ್ಭದಲ್ಲಿ ದೇವಾಲಯ ನಿರ್ಮಿಸಿಕೊಳ್ಳಲು ಪಟ್ಟಲದಮ್ಮ ದೇವಿಯ ದೇವಾಲಯದ ಪಕ್ಕ ಜಾಗ ನೀಡಿ ದೇವಾಲಯ ನಿರ್ಮಿಸಿಕೊಳ್ಳಲು ಗಾವಡಗೆರೆಯ ನಾಯಕ ಜನಾಂಗದವರು ಅವಕಾಶ ಮಾಡಿಕೊಟ್ಟರು. ಕಲ್ಲಹಳ್ಳಿ ದೇವಸ್ಥಾನದಲ್ಲೂ ವಿಶೇಷವಾಗಿ ದೀಪಾವಳಿ ಹಬ್ಬದಂದು ದೇವಿಯ ಹಬ್ಬವನ್ನು ಆಚರಿಸಲಾಗುತ್ತದೆ. ಕಲ್ಲಹಳ್ಳಿಯಿಂದ ವಲಸೆ ಬಂದ ಮನೆತನದ ಎಲ್ಲ ನಾಯಕ ಜನಾಂಗದವರು ಈ ಹಬ್ಬದಲ್ಲಿ ಬಾಳೆಗೊನೆಗಳನ್ನು ತಂದು ದೇವಾಲಯದಲ್ಲಿ ಕಟ್ಟಿ ದೇವಿಗೆ ಪೂಜಿಸುತ್ತಾರೆ. ಒಂದು ವಾರದ ನಂತರ ದೇವಿಗೆ ಎಡೆ ಇಟ್ಟು ಬಾಳೆಗೊನೆಗಳನ್ನು ಮನೆಗೆ ಕೊಂಡೊಯ್ಯುತ್ತಾರೆ.

ರಾಮದೇವರ ದೇವಾಲಯ: ರಾಮದೇವರ ದೇವಾಲಯವನ್ನು ನಾಯಕ ಜನಾಂಗದ ಒಂದು ಮನೆತನ ಪೂರ್ವಿಕರಿಂದಲೂ ಪೂಜಿಸಿಕೊಂಡು ಬರುತ್ತಿದೆ. ರಾಮದೇವರ ದೇವಾಲಯದಲ್ಲಿ ಪ್ರತಿ ಶುಕ್ರವಾರ ೧೨ ಗಂಟೆಯಿಂದ ರಾತ್ರಿ ೧೦ ಗಂಟೆಯವರೆಗೆ ಪೂಜೆ ಸಲ್ಲಿಸಲಾಗುತ್ತದೆ. ಮಿಕ್ಕಂತೆ ಎಲ್ಲ ಹಬ್ಬ ಹರಿದಿನಗಳಲ್ಲಿಯೂ ದೇವಾಲಯದಲ್ಲಿ ಪೂಜೆ ಸಲ್ಲಿಸಲಾಗುತ್ತದೆ.

ವೀರಶೈವ ಮಠ

ಮಠಮಾನ್ಯಗಳು ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತವೆ. ಅಂತಹ ಸಾಮಾಜಿಕ ಗುರುತರ ಜವಾಬ್ದಾರಿಯನ್ನು ತ್ರಿವಿಧ ದಾಸೋಹದ ಮೂಲಕ

‘ಇವನಾರವ ಇವನಾರವ ಎನ್ನದೇ ಇವನಮ್ಮವ ಇವನಮ್ಮವನೆಂದು’ ಸಕಲರಿಗೂ ಒಳಿತನ್ನೇ ಬಯಸುವ ಜ್ಞಾನದೇಗುಲ ಗಾವಡಗೆರೆಯ ‘ಓಂ ಶ್ರೀ ಗುರುಲಿಂಗ ಜಂಗಮದೇವರಮಠ’ ಜಾತಿ ಭೇದಗಳಿಂದ ಮುಕ್ತವಾಗಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಾ ಕಾಲಕ್ಕನುಗುಣವಾಗಿ ಧಾರ್ಮಿಕವಾಗಿ, ಸಾಮಾಜಿಕವಾಗಿ, ವೈಚಾರಿಕವಾಗಿ ಮತ್ತು ಶೈಕ್ಷಣಿಕವಾಗಿ ಪ್ರಗತಿಪರ ಅರಿವು ಮೂಡಿಸಿಕೊಂಡು ಬಂದಿರುವ ಶ್ರೀಮಠ ಈ ಭಾಗದ ಒಂದು ‘ಪುಟ್ಟಮಹಾಮನೆ’ ಎನಿಸಿದೆ.

ಸುಮಾರು ೧೫೦ ವರ್ಷಗಳ ಪ್ರಾಚೀನತೆ ಹೊಂದಿರುವ ಶ್ರೀಮಠ ಹುಣಸೂರು ಮತ್ತು ಕೃಷ್ಣರಾಜನಗರದ ನಡುವೆ ಇರುವ ಗಾವಡಗೆರೆ ಗ್ರಾಮದ ಹೊರವಲಯದಲ್ಲಿದೆ. ಈ ಮಠವು ವೀರಶೈವ ಸಿದ್ಧಾಂತದ ಪರಿಭಾಷೆಗಳಾದ ‘ಗುರು’ ‘ಲಿಂಗ’, ‘ಜಂಗಮ’ ಎನ್ನುವ ಪರಿಭಾಷೆಗಳನ್ನು ತನ್ನ ಹೆಸರನ್ನಾಗಿಸಿಕೊಂಡು ಎರಡು ಶಕ್ತಿದೇವತೆಗಳಾದ ‘ಪಟ್ಟಲದಮ್ಮ’ ಮತ್ತು ಪಿರಿಯಾಪಟ್ಟಲದಮ್ಮ ದೇವತೆಗಳ ನಡುವೆ ಪ್ರತಿಷ್ಠಾಪಿತಗೊಂಡಿದೆ.

ಪೂಜ್ಯ ಶ್ರೀ ನಂಜುಂಡಶಿವಯೋಗಿಗಳು ಶ್ರೀಮಠದ ಮೂಲಪುರುಷರು ಪೂಜ್ಯ ಶ್ರೀಗಳು ಗುರು, ಲಿಂಗ, ಜಂಗಮ ಪ್ರೇಮಿಗಳಾಗಿದ್ದ ಮಹಾನುಭಾವರಾಗಿದ್ದು ಆದ್ದರಿಂದಲೇ ಶ್ರೀಮಠಕ್ಕೆ ಓಂ ಶ್ರೀ ಗುರುಲಿಂಗ ಜಂಗಮ ದೇವರ ಮಠವೆಂದ ಅಭಿದಾನ ಮಾಡಿದರು. ಬಸವತತ್ತ್ವ ಪ್ರೇಮಿಗಳಾಗಿದ್ದ ಪೂಜ್ಯರು ಶರಣ ಧರ್ಮವನ್ನು ಪಾಲಿಸಿಕೊಂಡು ಬಂದು ಸ್ವಾತಂತ್ರ್ಯಪೂರ್ವದಂತಹ ಸಂಕೀರ್ಣ ಕಾಲಮಾನದಲ್ಲೆ ಜಾತಿ ಭೇದಗಳನ್ನು ಮೀರಿ ನಿಂತು ಎಲ್ಲರಿಗೂ ಸಮಾನತೆಯನ್ನು ಕಲ್ಪಿಸಿದವರಾಗಿದ್ದರು.

ಶ್ರೀಮಠದ ಇತಿಹಾಸದಲ್ಲಿ ಶ್ರೀ ನಂಜುಂಡ ಶಿವಯೋಗಿಗಳ ಹೆಸರು ಅಜರಾಮರವಾಗಿದ್ದು ನಿರಾಭಾರಿ ಜಂಗಮರಾಗಿದ್ದ ಶ್ರೀ ನಂಜುಂಡ ಶಿವಯೋಗಿಗಳು ಗಾವಡಗೆರೆಗೆ ಬಂದಿದ್ದು ಈ ಪರಿಸರದ ಒಂದು ಪುಣ್ಯಗಳಿಗೆಯಾಗಿದೆ. ಏಕತಾರಿಯನ್ನು ಮಿಡಿಯುತ್ತಾ ಅವರು ಹಾಡಿದ ಶಿವಗೀತೆಗಳು ಇಲ್ಲಿನ ಜನಮನದಲ್ಲಿ ಶಿವಭಕ್ತಿ ಮೂಡಿಸಿದವು.

ಪ್ರಸ್ತುತ ಶ್ರೀಮಠದ ಪೀಠಾಧಿಪತಿಯಾಗಿ ಶ್ರೀ ನಟರಾಜಸ್ವಾಮಿಗಳು ಮಠವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದಿದ್ದಾರೆ. ಶ್ರೀ ನಟರಾಜಸ್ವಾಮಿಗಳ ಸಂಕಲ್ಪ ಶಕ್ತಿಯ ಬಲದಿಂದ ಮಠವು ಬಹುಮುಖ ಆಯಾಮವನ್ನು ಪಡೆದುಕೊಳ್ಳುತ್ತಿದೆ. ನಂಜುಂಡಶಿವಯೋಗಿಗಳ ಕಾಲದಲ್ಲಿ ಚಿಕ್ಕ ಹೆಂಚಿನ ಮನೆಯಲ್ಲಿದ್ದ ಮಠ ತನ್ನ ರೂಪು ಬದಲಿಸಿಕೊಂಡು ಬೃಹತ್ತಾಗಿ ಬೆಳೆಯಲು ಮೂಲ

ಕಾರಣ ಕರ್ತೃಗಳು. ಶ್ರೀಶ್ರೀಶ್ರೀ ನಟರಾಜಸ್ವಾಮಿಗಳು ಎರಡು ದಶಕಗಳ ಹಿಂದೆ ಮಠ ನೋಡಿದವರು ಈಗಿನ ಬೆಳವಣಿಗೆ ನೋಡಿದರೆ ಆಶ್ಚರ್ಯಚಕಿತರಾಗುತ್ತಾರೆ.



ಓಂ. ಶ್ರೀ ಗುರುಲಿಂಗ ಜಂಗಮದೇವರ ಮಠ

ಮಠದ ಆಶ್ರಯದಲ್ಲಿ ಶ್ರೀ ನಂಜುಂಡಶಿವಯೋಗೀಶ್ವರ ವಿದ್ಯಾಸಂಸ್ಥೆ ಆರಂಭವಾಗಿದ್ದು ಸಂಸ್ಕೃತ ಪಾಠಶಾಲೆ, ಪ್ರಾಥಮಿಕ ಶಾಲೆ, ಪ್ರೌಢಶಾಲೆ ಕೈಗಾರಿಕಾ ತರಬೇತಿ ಕೇಂದ್ರಗಳು ಯಶಸ್ವಿಯಾಗಿ ನಡೆಯುತ್ತಿವೆ. ಇದಕ್ಕೆ ಪೂರಕವಾಗಿ ಎಸ್.ಎನ್.ಎಸ್. ಗೆಳೆಯರ ಬಳಗ ಎಂಬ ಸಂಸ್ಥೆ ಜನ್ಮತಾಳಿ ಕೃಷ್ಣರಾಜನಗರಕ್ಕೂ ತನ್ನ ಶೈಕ್ಷಣಿಕ ನೆರವಿನ ಹಸ್ತವನ್ನು ಚಾಚಿದೆ.

ವಿದ್ಯಾದಾನದೊಂದಿಗೆ ಅನ್ನದಾನದ ಹೊಣೆಯನ್ನು ಶ್ರೀಮಠ ಹೊತ್ತಿದೆ. ಯಾವುದೇ ಜಾತಿ ಭೇದವಿಲ್ಲದೆ ಪ್ರತಿನಿತ್ಯ ೨೦೦ ವಿದ್ಯಾರ್ಥಿಗಳು ಶ್ರೀಮಠದ ದಾಸೋಹದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಈಗ ಬಡವಿದ್ಯಾರ್ಥಿಗಳ ಪರವಾದ ಶ್ರೀಗಳ ಕಾಳಜಿಗೆ ಸಂಕೇತವಾಗಿ ಒಂದು ಸುಸಜ್ಜಿತ ದಾಸೋಹ ಭವನ ನಿರ್ಮಾಣವಾಗಿದೆ. ಈ ದಾಸೋಹ ಭವನ ಕೇವಲ ಅನ್ನದಾನಕ್ಕೆ ಮಾತ್ರ ಸೀಮಿತವಾಗದೆ. ಎಲ್ಲ ಬಗೆಯ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಚಟುವಟಿಕೆಗಳಿಗೂ ಆಶ್ರಯ ತಾಣವಾಗಿದೆ. ಇಲ್ಲಿ 'ತಿಂಗಳಬೆಳಕು' ಎನ್ನುವ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಪರಿಣಿತರನ್ನು ಕರೆಸಿ ಅವರಿಂದ ಉಪನ್ಯಾಸ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತ ಮಠದ ಭಕ್ತರು ಮತ್ತು ವಿದ್ಯಾರ್ಥಿಗಳ ಮನೋವಿಕಾಸಕ್ಕೆ ನೆರವಾಗುತ್ತಿದೆ. ಪ್ರತಿ ತಿಂಗಳ ಎರಡನೆಯ ಶನಿವಾರ ಈ ತಿಂಗಳ ಬೆಳಕು ಧರ್ಮತತ್ವಚಿಂತನೆ ಗೋಷ್ಠಿ ನಡೆಯುತ್ತದೆ.

ಮಠಕ್ಕೆ ಎಲ್ಲಾ ಜನಾಂಗ ಹಾಗೂ ಭಾಷಿಕ ಭಕ್ತರಿದ್ದಾರೆ. ಭಕ್ತರಿಗೆ ಮಠದ ಬಗ್ಗೆ ಇರುವ ಭಕ್ತಿ ಆದರಾಭಿಮಾನಗಳೇ ವಿದ್ಯಾಸಂಸ್ಥೆಗಳ ಅಭಿವೃದ್ಧಿಗೆ ಕಾರಣ ಎಲ್ಲಾ ಜಾತಿ, ಜನಾಂಗದ ಮಕ್ಕಳಿಗೂ ಅನ್ನ, ಅಕ್ಷರ, ವಸತಿ ಸೌಲಭ್ಯ ಕಲ್ಪಿಸಿರುವ ಮಠಕ್ಕೆ ತನ್ನದೇ ಭೂಮಿ ಇಲ್ಲ. ಹಾಗೆಯೇ ಆದಾಯದ ಇತರ ಮೂಲಗಳೂ ಇಲ್ಲ. ಎಲ್ಲವೂ ಭಕ್ತರು ನೀಡುವ ಭಕ್ತಿಯ ಮೂಲಕವೇ ನಡೆಯುತ್ತದೆ.

ಗಾವಡಗೆರೆ ಮಠದಲ್ಲಿ ಆಶ್ರಯ ಪಡೆದು ಓದುತ್ತಿರುವ ಮಕ್ಕಳು ಹಾಸನ, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳ ಗ್ರಾಮೀಣ ಪ್ರದೇಶದ ಮಕ್ಕಳಲ್ಲದೆ ರಾಯಚೂರು, ಹಾವೇರಿ, ಬಳ್ಳಾರಿ ಮುಂತಾದ ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದ ಮಕ್ಕಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಆರ್ಥಿಕ ಸಮಸ್ಯೆಯಿಂದ ಓದು ನಿಲ್ಲಿಸಬೇಕಾಗಿ ಬಂದವರು ಮತ್ತು ಅನಾಥರನ್ನು ಮಠ ಗುರುತಿಸಿ ಕರೆತಂದು ಮಠದಲ್ಲಿ ಆಶ್ರಯ ನೀಡಿ ವಿದ್ಯಾದಾನ ಮಾಡುತ್ತಿದೆ.

ಭಕ್ತರೆ ಮಠದ ಆಸ್ತಿ ಎನ್ನುವ ಶ್ರೀ ನಟರಾಜಸ್ವಾಮಿಗಳು ಭಕ್ತಪ್ರಿಯರು ಮಠಕ್ಕೆ ಬಂದ ಭಕ್ತರು ಸ್ವಲ್ಪ ಹೊತ್ತು ನೆಮ್ಮದಿಯಿಂದ ಮಠದಲ್ಲಿದ್ದು ಮನೆಗೆ ಹೋಗಬೇಕು ಎಂದು ಬಯಸುತ್ತಾರೆ. ಸುಂದರ ಪರಿಸರದಲ್ಲಿರುವ ಮಠ ಜನರಿಗೆ ನೆಮ್ಮದಿ ಮತ್ತು ಶಾಂತಿಯ ತಾಣವಾಗಿದೆ.

ಹೀಗೆ ಹಳ್ಳಿಗಾಡಿನ ಹತ್ತಾರು ಸಮುದಾಯದ ಜನರಿಗೆ ಧಾರ್ಮಿಕ ಮಾರ್ಗದರ್ಶನ ನೀಡುವುದರ ಜೊತೆಗೆ ನೂರಾರು ಮಕ್ಕಳಿಗೆ ಶಿಕ್ಷಣ, ದಾಸೋಹ, ನೀಡುತ್ತಾ ತೆರೆಮರೆಯ ಕಾಯಿಯಂತೆ ಓಂ ಶ್ರೀ ಗುರುಲಿಂಗ ಜಂಗಮ ದೇವರ ಮಠ ತನ್ನ ಸೇವೆ ಸಲ್ಲಿಸುತ್ತಿದೆ.

ಮರಾಠಿ ಮಠ

ಗಾವಡಗೆರೆ ಗ್ರಾಮದಲ್ಲಿ ವೀರಶೈವ ಮಠವಿರುವಂತೆ ಮರಾಠಿ ಜನಾಂಗದ 'ಮಠ'[೧೧]ವು ಸಹಾ ಇದೆ. ಶ್ರೀ ಸಿದ್ಧರಾಮೇಶ್ವರರ ಹೆಸರಿನಲ್ಲಿ ಮಠವನ್ನು ೧೯೪೦ನೇ ಇಸವಿಯಲ್ಲಿ ಗಾವಡಗೆರೆ ಗ್ರಾಮದ ಮರಾಠಿ ಮುಖಂಡರಾದ ಕೃಪ್ಲೋಜಿರಾವ್ ಇನ್ನು ಮುಂತಾದ ಪಟೇಲರು, ಯಜಮಾನರು ಸೇರಿ ಈ ಮಠವನ್ನು ಕಟ್ಟಿದರು. ಈ ಮಠವನ್ನು ಕಟ್ಟಲು ಮೂಲ ಉದ್ದೇಶ ಧ್ಯಾನ, ಭಜನೆ, ಗುರುಸ್ತುತಿ ಮಾಡುವುದರ ಉದ್ದೇಶಕ್ಕಾಗಿ ಮಠ ಕಟ್ಟಲಾಯಿತು. ಮಠಕ್ಕೆ ಯಾವುದೇ ನಿರ್ಧಿಷ್ಟ ಮಠಾಧಿಪತಿಗಳಿಲ್ಲ. ಶ್ರೀಮಠದ ಭಕ್ತರೆಲ್ಲರೂ ಶ್ರೀ ಸಿದ್ಧರಾಮೇಶ್ವರರ ಅನುಯಾಯಿಗಳಾಗಿದ್ದಾರೆ.

---

[೧೧] ಮಠದಲ್ಲಿ ಅನೇಕ ಮರಾಠಿ ಭಾಷೆಯ ಪುಸ್ತಕಗಳಿದ್ದರೂ ಅವೆಲ್ಲ ಹುಳು ತಿಂದು ಹಾಳಾಗಿವೆ. ಕೆಲವೇ ಪುಸ್ತಕಗಳನ್ನು ಮಾತ್ರ ಓದುತ್ತಾರೆ.

ಮಠದಲ್ಲಿ ಕಪ್ಪು ಶಿಲೆಯಲ್ಲಿ ಕೆತ್ತಲಾಗಿರುವ ೨½ ಎತ್ತರದ ಧ್ಯಾನ ಸ್ಥಿತಿಯಲ್ಲಿರುವ ಸುಂದರವಾದ ಸಿದ್ಧರಾಮೇಶ್ವರಮೂರ್ತಿ ಇದೆ. ಈ ಮಠದಲ್ಲಿ ನಡೆಯುವ ಭಜನೆ, ಸ್ತೋತ್ರ, ಹಾಡು ಎಲ್ಲವೂ ಮರಾಠಿ ಭಾಷೆಯಲ್ಲೆ ನಡೆಯುತ್ತದೆ. ಮಠದಲ್ಲಿ ಅನೇಕ ಮರಾಠಿ ಭಾಷೆಯ ಗ್ರಂಥಗಳಿವೆಯಲ್ಲದೆ ಅವುಗಳನ್ನು ಪಠನೆ ಮಾಡಲಾಗುತ್ತದೆ. ಅವುಗಳಲ್ಲಿ ಪ್ರಮುಖವಾದ ಗ್ರಂಥವೆಂದರೆ 'ಸಾರ್ಥ ಶ್ರೀ ಏಕನಾಥಿ ಭಾಗವತ'

- ಭಗವದ್ಗೀತೆ
- ರಾಮಾಯಣ
- ಮರಾಠಿ ದೇವರನಾಮಗಳು
- ಮರಾಠಿ ಭಜನೆ

ಶ್ರೀ ಸಮರ್ಥ ಸದ್ಗುರು ಶ್ರೀ ಸಿದ್ಧರಾಮೇಶ್ವರ ಮಹಾರಾಜರು

ಶ್ರೀ ಸಿದ್ಧರಾಮೇಶ್ವರ ಮಹಾರಾಜರು ಸೊಲ್ಲಾಪುರದ ಪಶ್ಚಿಮಕ್ಕೆ ೧೦ ಮೈಲಿ ದೂರವಿರುವ 'ಪಾತ್ರಿ' ಎಂಬ ಗ್ರಾಮದಲ್ಲಿ ಜನಿಸಿದರು. ಸಿದ್ಧರಾಮೇಶ್ವರರು ಹುಟ್ಟಿದ ಐದನೇ ದಿನಕ್ಕೆ ಸೊಲ್ಲಾಪುರದ ಪ್ರಸಿದ್ಧ ದೈವಿಪುರುಷರಾದ ಸಿದ್ಧರಾಮೇಶ್ವರನು ಅವರ ಅಜ್ಜಿಯ ಸ್ವಪ್ನದಲ್ಲಿ ಬಂದು ಬಾಲಕನಿಗೆ ತನ್ನ ಹೆಸರನ್ನು ಇಡಲು ಹೇಳಿದರಂತೆ. ಆ ಪ್ರಕಾರ ಅಜ್ಜಿಯ 'ಸಿದ್ಧರಾಮಪ್ಪ' ಎಂಬ ಹೆಸರನ್ನಿಟ್ಟಳು. ಸಣ್ಣ ವಯಸ್ಸಿನಲ್ಲಿ ಇವರು ಸೊಲ್ಲಾಪುರದಲ್ಲಿ ಇರುವಾಗಲೆ ಇವರ ಭಕ್ತಿಗೆ ಮೆಚ್ಚಿ 'ಸಿದ್ಧರಾಮೇಶ್ವರ ಮತ್ತು 'ರೇವಣಸಿದ್ಧೇಶ್ವರ'ರು ಬೆಲ್ಲದಲ್ಲಿ ಕಲಸಿದ ಬೇಳೆಯನ್ನು ಪ್ರಸಾದವೆಂದು ಕೊಟ್ಟರು.

ಶ್ರೀ ಸಿದ್ಧರಾಮೇಶ್ವರರ ವಿದ್ಯಾಭ್ಯಾಸ ಸ್ವಲ್ಪಮಟ್ಟಿಗೆ ಆಯಿತು. ಆದರೆ ಚುರುಕುಬುದ್ಧಿಯ ಸಿದ್ಧರಾಮರು ವ್ಯಾಪಾರದಲ್ಲಿ ತೊಡಗಿಸಿಕೊಂಡರು. ಇವರು ವಿಜಾಪುರದ ನಾರಾಯಣದಾಸರವರ ಅಂಗಡಿಯಲ್ಲಿ ಮನೀಮರಾದರು ಆ ಸಮಯದಲ್ಲಿ ಶ್ರೀ ಸಮರ್ಥ 'ಭಾವೂಸಾಹೇಬ'[೧] ಮಹಾರಾಜರು ಭಕ್ತಿಪ್ರಸಾರದ ಕಾರ್ಯಕ್ಕೆ ವಿಜಾಪುರಕ್ಕೆ ಬಂದಿದ್ದ ಸಂದರ್ಭದಲ್ಲಿ ಸದ್ಗುರುವಿನ ಹುಡುಕಾಟದಲ್ಲಿದ್ದ ಸಿದ್ಧರಾಮೇಶ್ವರರು ಅತಿಯಾದ ಆನಂದದಿಂದ ಉಪದೇಶ ಪಡೆಯಲಿಕ್ಕೆ ಹೋದರು. ಭಾವೂ ಸಾಹೇಬರು ನಿಯಮದ ಪ್ರಕಾರ ಗುರುವಾರ ಮತ್ತು ಸೋಮವಾರ ಈ ೯ ದಿನ ಮಾತ್ರ ಉಪದೇಶಕೊಡುವ ದಿನಗಳಾಗಿದ್ದವು. ಸಿದ್ಧರಾಮೇಶ್ವರರು ಶನಿವಾರ ಹೋಗಿದ್ದರು. ಆಗ ಶ್ರೀ ಸಮರ್ಥರು 'ಇವನು ಮಹಾ ಭಾಗ್ಯವಾನ ಪುರುಷನಾಗಿದ್ದು ಇವನಿಂದ ವೇದಾಂತದ

---

[೧] ಭಾವೂಸಾಹೇಬರು ಉಮದಿಯ ದೇಶಪಾಂಡೆಯವರಾದ ಖಂಡೇರಾಯರ ಪುತ್ರರಾಗಿದ್ದು, ಇವರು ಇಂಡಿ ತಾಲ್ಲೂಕಿನ ಹಿಂಚಗೇರಿಯಲ್ಲಿ ಮಠ ಸ್ಥಾಪನೆ ಮಾಡಿದ್ದರು.

ಪರಿಪೂರ್ಣ ಸಿದ್ಧಾಂತವು ಪ್ರಕಟವಾಗುವುದು. ಆದ್ದರಿಂದ ಇವನಿಗೆ ಇಂದೆ ನಾಮಕೊಟ್ಟು, ಇನ್ನು ಮುಂದೆ ಶನಿವಾರವಾದರೂ ನಾಮ ಕೊಡಲಾರಂಭಿಸುತ್ತೇನೆ' ಎಂದು ಉದ್ಗರಿಸಿದರಂತೆ.

ಸಿದ್ಧರಾಮೇಶ್ವರರು ಉಪದೇಶ ತೆಗೆದುಕೊಂಡ ಮೇಲೆ ನಿಷ್ಠೆಯಿಂದ ಪರಮಾರ್ಥ ಮಾಡಿದರು. ಇವರು ಗುರುಗಳ ಅತ್ಯಂತ ಕೃಪಾಪಾತ್ರರಾಗಿದ್ದರಲ್ಲದೆ ಸಾಧಕ ಸಿದ್ಧರಾಮೇಶ್ವರರು ಮುಂಜಾನೆ ಹಾಗೂ ಸಂಜೆಗೆ ಧ್ಯಾನ ಮಾಡಿಯೇ ಊಟ ಮಾಡುತ್ತಿದ್ದರು.

ಶ್ರೀ ಸಿದ್ಧರಾಮೇಶ್ವರರ ಗುರುಭಕ್ತಿಯು ಅಸಾಧ್ಯವಾದುದಾಗಿತ್ತು. ಸಿದ್ಧರಾಮೇಶ್ವರರು ಭಕ್ತಿ ಪ್ರಸಾದದ ಕಾರ್ಯವನ್ನು ಮುಂದೂಡಿ ಧ್ಯಾನ-ಜ್ಞಾನಗಳ ತಳಸೋಸಿ ನೋಡುವುದಕ್ಕಾಗಿ ಏಕಾಂತವಾಸವನ್ನು ಅವಲಂಬಿಸಿದರು. ಆಗ ಅವರು ನಿದ್ರೆ ಊಟಗಳಿಲ್ಲದೆ ದೀರ್ಘ ಕಾಲ ಧ್ಯಾನ ಮಗ್ನರಾಗಿರುತ್ತಿದ್ದರು. ಆ ಸಂದರ್ಭದಲ್ಲಿ ಅವರ ದೇಹವು ಕೃಶವಾಗಿತ್ತು. ಆದರೂ ಧ್ಯಾನದ ಎಲ್ಲ ಸಾಕ್ಷಾತ್ಕಾರಗಳನ್ನು ಪಡೆದರು. ಆ ಪರಿಪಕ್ವ ದೆಶೆಯಲ್ಲಿಯೇ

- ಭಾಗವತ
- ಏಕನಾಥೀ ಭಾಗವತ
- ಯೋಗವಾಸಿಷ್ಟ

ಮುಂತಾದ ಗ್ರಂಥಗಳನ್ನು ಶುದ್ಧ ಬುದ್ಧಿಯಿಂದಲೂ ಗುರುಕೃಪೆಯ ಆಧಾರದಿಂದಲೂ ಪರಿಶೀಲಿಸಿದರು ಮತ್ತು ತಮ್ಮ ಭಕ್ತಿ ರಾಜಯೋಗ, ಜ್ಞಾನ ಅನುಭವಗಳೆಲ್ಲದರ ಸುಂದರ ಸಮನ್ವಯತೆಯಿಂದ ಪರಿಪೂರ್ಣತೆ ಪಡೆದರು.

ಇಂತಹ ಶ್ರೇಷ್ಟ ಆಧ್ಯಾತ್ಮ ಸಿದ್ಧಿ ಸಾಧನೆಯನ್ನು ಮಾಡಿದ ಸಿದ್ದರಾಮೇಶ್ವರ ಮಹಾರಾಜರ ಅನುಯಾಯಿಗಳಿಗೆ ಅನೇಕ ಮರಾಠಿ ಜನಾಂಗದ ಭಕ್ತರು ಅವರನ್ನು ಪೂಜಿಸುತ್ತಾರೆ.

ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ

ಗಾವಡಗೆರೆಯಲ್ಲಿ ಹಿಂದಿನಿಂದಲೂ ನಾಟಕ ಕಲೆ ಬೆಳೆದುಕೊಂಡು ಬಂದಿದೆ. ಇಲ್ಲಿನ ಜನರು ಪ್ರತಿಭಾವಂತರಾಗಿದ್ದು, ಹಬ್ಬ ಹರಿದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಅವುಗಳಲ್ಲಿ ನಾಟಕ ಪ್ರದರ್ಶನವು ಒಂದು ನಾಟಕ ಪ್ರದರ್ಶನಕ್ಕಾಗಿ ಸೀನರಿಗಳನ್ನು ತರಿಸಿ ತಿಂಗಳುಗಟ್ಟಲೆ ತಯಾರಿ ನಡೆಸಿ ನಿಗಧಿತ ದಿನಗಳಂದು ನಾಟಕವಾಡುತ್ತಾರೆ. ಸಾಮಾನ್ಯವಾಗಿ ಈ ಗ್ರಾಮದಲ್ಲಿ ಸಾಮಾಜಿಕ ನಾಟಕಗಳು, ಪೌರಾಣಿಕ ನಾಟಕಗಳನ್ನಾಡುತ್ತಾರೆ. ಹಿಂದೆ ಸ್ತ್ರೀ ಪಾತ್ರಗಳನ್ನು ಪುರುಷರು ಅಭಿನಯಿಸುತ್ತಿದ್ದರು ಕಾರಣ

ಸ್ತ್ರೀಯರು ಹೊರ ಬರಲು ಸಮಾಜದಲ್ಲಿ ಅವಕಾಶವಿರಲಿಲ್ಲ. ಆದರೆ ಇಂದು ಸ್ತ್ರೀಯರ ಪಾತ್ರಗಳನ್ನು ಸ್ತ್ರೀಯರೇ ನಿರ್ವಹಿಸುತ್ತಾರೆ. ಇವರನ್ನು ಬೇರೆಡೆಯಿಂದ ಕರೆಸಲಾಗುತ್ತದೆ. ಇದು ಗ್ರಾಮದಲ್ಲಿನ ಜನತೆಯ ಮನರಂಜಿಸುವ ಮಾಧ್ಯಮವಾಗಿದೆ. ಇಲ್ಲಿನವರು ನಾಟಕ ಅಭ್ಯಾಸಕ್ಕಾಗಿ ಹೊರಗಿನಿಂದ ತರಬೇತುದಾರರನ್ನೇ ಕರೆಸುತ್ತಾರೆ. ಅದರಿಂದ ಮಾರ್ಗದರ್ಶನ ಪಡೆಯುತ್ತಾರೆ. ಪಟ್ಟಲದಮ್ಮ ಜಾತ್ರೆಯಲ್ಲಿ ವರ್ಷಂಪ್ರತಿ ನಾಟಕವಾಡುತ್ತಾರೆ.

ಹಸೆ

ಅತಿ ಸುಂದರವಾದ ಕಲೆ, ಈ ಕಲೆಯು ವಿವಾಹದ ಸಂದರ್ಭಗಳಲ್ಲಿ ಕಂಡುಬರುತ್ತದೆ. ವಿವಾಹದ ದಿನದಂದು ಈ ಹಸೆಯನ್ನು ಬಣ್ಣಗಳಿಂದ ಗೋಡೆಯ ಮೇಲೆ ಬರೆದು ಹಲವು ಬಗೆಯ ಶಾಸ್ತ್ರಗಳನ್ನು ಮಾಡುತ್ತಾರೆ. ಈ ಹಸೆಯು ಬಳ್ಳಿಗಳ, ನವಿಲಿನ, ವಿಧ ವಿಧದ ಹೂಗಳ, ಪ್ರಾಣಿಗಳ ಚಿತ್ರಗಳಿಂದ, ಚಿತ್ತಾರಗಳಿಂದ ಕೂಡಿರುತ್ತದೆ. ಇಂತಹ ಚಿತ್ರಗಳನ್ನು ಮರದ ಮೇಲೆ ಸುಂದರವಾಗಿ ಕೆತ್ತಿರಲಾಗುತ್ತದೆ. ಹಸೆಮಣೆಗಳು ನಿಶ್ಚಿತಾರ್ಥದಿಂದ ಹಿಡಿದು ಮದುವೆ ಮುಗಿಯುವವರೆಗೂ ಬಳಸಲ್ಪಡುತ್ತವೆ. ಹಿಂದೆ ಮದುವೆಗೆಂದೇ ಪ್ರತೀ ಮನೆಗಳಲ್ಲಿಯೂ ಹಸೆಮಣೆಗಳಿರುತ್ತಿದ್ದವು. ಆದರೆ ಇಂದು ಇವುಗಳು ಕ್ರಮೇಣ ಕಣ್ಮರೆಯಾಗಿರುವುದನ್ನು ಕಾಣಬಹುದು. ಆದರೆ ಹಸೆಮಣೆಯಿಲ್ಲದೆ ಮದುವೆ ಮಾಡುವುದಿಲ್ಲ. ತಮ್ಮ ಮನೆಯಲ್ಲಿ ಇಲ್ಲದಿದ್ದರೆ, ಬೇರೆ ಮನೆಗಳಲ್ಲಿಯಾದರೇ ತಂದು ಶಾಸ್ತ್ರಗಳನ್ನು ಮಾಡುತ್ತಾರೆ. ವಿವಾಹ ದಿನದಂದು ಹಸೆಮಣೆಗಳ ಮೇಲೆ ವಧುವರರನ್ನು ಕುಳ್ಳಿರಿಸಿ ನಾನಾ ವಿಧದ ಶಾಸ್ತ್ರಗಳನ್ನು ಮಾಡುತ್ತಾರೆ. ಇಂದಿಗೂ ಸಹಾ ಎಷ್ಟೇ ಶ್ರೀಮಂತರಾದರೂ ಎಷ್ಟೇ ಆಧುನಿಕರಣಕ್ಕೊಳ ಗಾಗಿದ್ದರೂ ಹಸೆ ಮಣೆಯ ಮೇಲೆ ಕಡ್ಡಾಯವಾಗಿ ಕುಳಿತುಕೊಳ್ಳುತ್ತಾರೆ. ಅದಕ್ಕೆ ಸಂಬಂಧಿಸಿದ ಶಾಸ್ತ್ರಾಚರಣೆಗಳನ್ನು ಮಾಡುತ್ತಾರೆ.

ರಂಗೋಲಿ

ಹೆಣ್ಣು ಮಕ್ಕಳಿರುವ ಮನೆಗಳಲ್ಲಿ ಮುಂಜಾನೆಯೇ ಎದ್ದು ಹೊಸಿಲು ಸಾರಿಸಿದ ಮೇಲೆ ಬಾಗಿಲಿಗೆ ರಂಗೋಲಿ ಹಾಕುವುದು ವಾಡಿಕೆ, ಇದು ಭಾರತೀಯ ಸಂಸ್ಕೃತಿಯ ಪ್ರತೀಕ, ಹಬ್ಬ ಹರಿದಿನಗಳು ಬಂದರಂತೂ ಎಲ್ಲಾ ಮನೆಗಳ ಮುಂದೆಯೂ ಬಣ್ಣ-ಬಣ್ಣಗಳಿಂದ ಕೂಡಿದ ರಂಗು-ರಂಗಿನ ರಂಗೋಲಿಗಳನ್ನು ಕಾಣಬಹುದು. ಸ್ವಾತಂತ್ರ್ಯ ದಿನದಂದು ಕೂಡ ಇದೇ ಸಂಭ್ರಮ ಕಂಡುಬರುತ್ತದೆ. ರಂಗೋಲಿ ಹಾಕುವುದೇ ಸಂಭ್ರಮ. ಹೆಣ್ಣು ಮಕ್ಕಳಿಗೆ ಇಂದು ಮನೆಗಳಿಗೆ ಬಣ್ಣ-ಸುಣ್ಣ ಬಳಿಯುವಾಗಲೇ ಪೇಯಿಂಟ್‌ನಿಂದ ಮನೆಯ ಹೊರಭಾಗಕ್ಕೆ

ಮನೆಯೊಳಗಿನ ಗೋಡೆಗಳಿಗೆ ರಂಗೋಲಿಗಳನ್ನು ಬಿಡಿಸುತ್ತಾರೆ. ಕೆಲವರು ಇಂದಿಗೂ ರಂಗೋಲಿಯಲ್ಲಿ ಮನೆಯನ್ನು ಅಲಂಕರಿಸುತ್ತಾರೆ. ಇಂದು ಈ ಪೇಯಿಂಟ್‌ಗಳ ಹಾವಳಿಯಿಂದಾಗಿ ಸ್ತ್ರೀಯರಿಗೆ ತುಂಬಾ ಸಮಯದ ಉಳಿತಾಯವಾಗುತ್ತದೆ. ಆದರೆ ಇದರ ದೋಷವೆಂದರೆ ಎಷ್ಟೋ ಹೆಣ್ಣು ಮಕ್ಕಳಿಗೆ, ಸ್ತ್ರೀಯರಿಗೆ ಈ ಕಲೆ ಬರುವುದೇ ಇಲ್ಲ. ಕೆಲವೊಮ್ಮೆ ಬರುವವರೂ ಮರೆಯುವ ಸಂಭವವಿದೆ.

ರಂಗೋಲಿಗೆ ಪೌರಾಣಿಕ ಮಹತ್ವವಿದೆ. ಒಂದು ಗೆರೆ ಎಳೆದರೂ ರಂಗೋಲಿಯ ಹಿಂದೆ ಲಕ್ಷ್ಮಣ ಭೇಟೆಗೆ ತೆರಳುವಾಗ ಸೀತೆಗೆ ಹಾಕಿದ ಲಕ್ಷ್ಮಣ ರೇಖೆ. ಅದನ್ನು ಸೀತೆ ದಾಟಿದ್ದರಿಂದ ಆಕೆಗೆ ಅಪಾಯ ಒದಗಿತು. ರಂಗೋಲಿ 'ಮಂಡಲ' ಎಂಬ ನಂಬಿಕೆಯಿದೆ. ರಂಗೋಲಿಯನ್ನು ಮನೆ ಮುಂದೆ ಹಾಕಿದರೆ ಯಾವುದೇ ದುಷ್ಟ ಮನೆಯನ್ನು ಪ್ರವೇಶಿಸುವುದಿಲ್ಲವೆಂಬುದು ನಮ್ಮ ಜನಪದರ ನಂಬಿಕೆ. ಆದರೆ ಪಿತೃಪಕ್ಷದಂದು ಮನೆ ಮುಂದೆ ರಂಗೋಲಿ ಹಾಕುವುದಿಲ್ಲ. ಕಾರಣ ಸತ್ತ ಹಿರಿಯರು ಮನೆಯೊಳಗೆ ಬರಲು ತಡೆಯಾಗುತ್ತದೆಂದು.

ಹಚ್ಚೆ

ಇದು ಒಂದು ಜನಪದ ಚಿತ್ರಕಲೆ. ಹಲವಾರು ಹಸಿರು ಸೊಪ್ಪುಗಳ ಮಿಶ್ರಣದಿಂದ ಮಾಡಿದ ರಸವನ್ನು ದೇಹದ ನಾನಾ ಭಾಗಗಳಿಗೆ ಹೊಯ್ದು ಸೂಜಿಯಿಂದ ಚುಚ್ಚುತ್ತಾರೆ. ಹೆಣ್ಣು ಮಕ್ಕಳು ಮುತ್ತೈದೆಯರು ಸೌಂದರ್ಯಕ್ಕಾಗಿ ಕೈ ತೋಳು, ಹಣೆ, ಹುಬ್ಬು ಮುಂತಾದ ಕಡೆಗಳಲ್ಲಿ ಈಗಲೂ ಹಚ್ಚೆ ಹುಯಿಸಿಕೊಳ್ಳುತ್ತಾರೆ. ಇದರಲ್ಲಿ ಹಲವಾರು ಚಿತ್ರಗಳು ಕಂಡುಬರುತ್ತವೆ. ಒಂದೊಂದು ಚಿತ್ರಕ್ಕೂ ಒಂದೊಂದು ವಿಶೇಷತೆ ಇರುತ್ತದೆ. ಉದಾಃ ಹೆಬ್ಬೆರಳಿನ ಕೆಳಗೆ ಮೂರು ಚುಕ್ಕೆ ಹಾಕಿಸಿಕೊಂಡರೆ ಅದನ್ನು ವಲೆಕುಪ್ಪೆ ಎಂದು, ಹಾಗೆ ಹಾಕಿಸಿಕೊಂಡ ಹೆಣ್ಣುಮಕ್ಕಳು ಅಡುಗೆ ಮಾಡಿದರೆ ಅತ್ಯಂತ ರುಚಿಯಾಗಿರುವುದೆಂದು ನಂಬಿಕೆ. ವಿಧವೆಯರು ಹಣೆಗೆ ಕುಂಕುಮ ಇಡದೆ ಇರುವುದರಿಂದ ಹಣೆಯಲ್ಲಿ ಬೊಟ್ಟಿನಂತೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಹಾಗೆಯೇ ಕೈಗಳ ಮೇಲೂ.

ಇತ್ತೀಚೆಗೆ ಯುವಕರು ಸ್ನೇಹ, ಪ್ರೀತಿ ಕುರುಹಾಗಿ ಸೌಂದರ್ಯಕ್ಕಾಗಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಹಚ್ಚೆಯನ್ನು ಬಂಧುಗಳು, ಸ್ನೇಹಿತರು ತಮ್ಮ ನೆನಪು ಉಳಿಯಲೆಂದು ಹಾಕಿಸಬೇಕು. ಹಚ್ಚೆ ಹಾಕಿಸಿಕೊಳ್ಳಲು ಮತ್ತೊಂದು ಬಲವಾದ ಕಾರಣವೆಂದರೆ ತಾವು ಸತ್ತಾಗ ಏನು ಜೊತೆಗೆ ಬರುವುದಿಲ್ಲ ಹಚ್ಚೆ ಮಾತ್ರ ನಮ್ಮೊಂದಿಗೆ ಬರುವುದೆಂಬ ನಂಬಿಕೆ. ಹಿಂದೆ ಹಚ್ಚೆ

ಹಾಕಿಸಿಕೊಳ್ಳದ ಹೆಣ್ಣು ಮಕ್ಕಳು ಹೊರಗಿನಿಂದ ಬಂದ ಹಿರಿಯರಿಗೆ ಕೈಕಾಲಿಗೆ ನೀರು ಕೊಡುವಂತಿರಲಿಲ್ಲವಂತೆ. ಇದನ್ನು ಹಸಿರು ಹುಯಿಸಿಕೊಳ್ಳುವುದು ಎಂತಲೂ ಕರೆಯುತ್ತಾರೆ.

ಉಡುಗೆ ತೊಡುಗೆಗಳು

ಗ್ರಾಮದ ಜನರ ಉಡುಗೆ-ತೊಡುಗೆಗಳು ವಿವಿಧ ಬಗೆಯವು. ಗಂಡಸರು, ಪಂಚೆ, ಶರ್ಟು, ತಲೆಗೆ ಪೇಟ, ನಿಲುವಂಗಿ, ಶಾಲು, ಧರಿಸುತ್ತಾರೆ. ಹೆಂಗಸರು, ಸೀರೆ, ರವಿಕೆ, ದಾವಣಿ ಲಂಗ, ರವಿಕೆ, ಹಾಕಿಕೊಳ್ಳುತ್ತಾರೆ. ಇತ್ತೀಚೆಗೆ ಹುಡುಗರು ಪ್ಯಾಂಟು ಶರ್ಟುಗಳನ್ನು, ಜೀನ್ಸ್ ಪ್ಯಾಂಟ್ ಶರ್ಟುಗಳನ್ನು ಹೆಚ್ಚಾಗಿ ಬಳಸುತ್ತಾರೆ. ಹುಡುಗಿಯರು ಮಿಡಿ, ಚೂಡಿದಾರ್, ಜೀನ್ಸ್ ಬಟ್ಟೆಗಳನ್ನು ಧರಿಸುತ್ತಾರೆ. ಆಧುನಿಕತೆಯಿದ್ದರೂ, ಸೀರೆಯುಡುವ ಹೆಂಗಸರು ಮೈತುಂಬಾ ಸೆರಗು, ತುಂಬುದೋಳು ರವಿಕೆ, ಹಣೆತುಂಬ ಕುಂಕುಮ, ಕೈ ತುಂಬಾ ಬಳೆ, ಕೆನ್ನೆಗೆ ಅರಿಶಿನ ಉಜ್ಜಿಕೊಳ್ಳುವುದೇ ಗ್ರಾಮದ ಜನರ ಸಂಸ್ಕೃತಿಯಾಗಿದ್ದು, ಇದನ್ನು ಇಂದಿಗೂ ಆಚರಿಸುತ್ತಾ ಬಂದಿದ್ದಾರೆ.

ಹೆಂಗಸರು ಹಿಂದೆ ಲೋಲಾಕು, ಗುಂಡಿ ಓಲೆ, ಬುಲಾಕು ಮೂಗು ಬಟ್ಟು, ಡಬಲ್ ಬಾತ್, ಸಿಂಗಲ್ ಬಾತ್, ಒಲೆ, ಡಾಬು ಗೆಜ್ಜೆ ಹಾಕಿಕೊಳ್ಳುತ್ತಿದ್ದರು. ಇಂದು ನೆಕ್‌ಲೇಸ್, ಜುಮುಕಿ, ಹರಳು ಉಂಗುರ ಹೀಗೆ ಗ್ರಾಮದ ಉಡುಗೆ ತೊಡುಗೆಗಳಲ್ಲಿ ಹಲವು ವ್ಯತ್ಯಾಸಗಳಾಗಿರುವುದನ್ನು ನೋಡಬಹುದು.

ಊಟೋಪಚಾರಗಳು

ಅಡುಗೆ ಎಂಬುದು ಒಂದು ಕಲೆ. ಅದು ಅಡುಗೆಯವನ ಕೈಗುಣಕ್ಕೆ ಅನುಗುಣವಾಗಿ ವಿಭಿನ್ನ ರುಚಿಗಳನ್ನು ಪಡೆದುಕೊಳ್ಳುತ್ತದೆ. ಅದು ಪ್ರಾದೇಶಿಕ ಭಿನ್ನತೆಯನ್ನು ಕೂಡ ಪಡೆದುಕೊಂಡಿರುತ್ತದೆ. ಒಂದೊಂದು ಕಡೆಯವರು ತಮ್ಮ ಭೌಗೋಳಿಕ ವೈಶಿಷ್ಟ್ಯತೆ, ಆರ್ಥಿಕ ಸ್ಥಿತಿಗತಿ, ಸಾಮಾಜಿಕ ಸ್ಥಾನಮಾನಗಳಿಗೆ ಅನುಗುಣವಾಗಿ ಬೇರೆ ಬೇರೆ ರೀತಿಯ ಅಡುಗೆ, ಊಟೋಪಚಾರ ಪದ್ಧತಿಯನ್ನು ರೂಢಿಸಿಕೊಂಡಿರುತ್ತಾರೆ. ಗಾವಡಗೆರೆಯಲ್ಲಿಯೂ ಅವರದ್ದೇ ಆದ ಊಟೋಪಚಾರಗಳನ್ನು ಗುರುತಿಸಬಹುದು.

ರಾಗಿಮುದ್ದೆ, ಜೋಳದ ಮುದ್ದೆ, ರೊಟ್ಟಿ, ದೋಸೆ, ಅನ್ನ ಸಾರು, ಪಲ್ಯ, ಹಪ್ಪಳ ಸರ್ವೇ ಸಾಮಾನ್ಯವಾಗಿ ಆಹಾರಗಳಾಗಿವೆ. ಇದರ ಜೊತೆಗೆ ಉಪ್ಪಿಟ್ಟು, ಚಪಾತಿ, ಪೂರಿ, ಚಿತ್ರಾನ್ನ, ಇಡ್ಲಿ ಇತ್ಯಾದಿಗಳು ಬೆಳಗಿನ ತಿಂಡಿಗಳು. ಊಟೋಪಚಾರಗಳ ಮೇಲೂ ಆಧುನಿಕತೆಯ ಪ್ರಭಾವ ಹೆಚ್ಚಾಗಿದೆ. ಮಡಿಕೆಯಲ್ಲಿ ತಯಾರು ಮಾಡುವುದು ಕಾಣಸಿಗದಾಗಿದ್ದು,

ಮನೆ ಮನೆಯಲಕ್ಕೂ ಅನಿಲ ಇಂಧನ, ಪ್ರೆಷರ್ ಕುಕ್ಕರ್‌ಗಳು ಕಂಡುಬರುತ್ತವೆ. ಕಟ್ಟಿಗೆಯಿಂದ ಅಡುಗೆಯನ್ನು ಬೇಯಿಸುವ ಪದ್ಧತಿಯೂ ಇದೆ. ಮುದ್ದೆಯನ್ನು ರಾಗಿ, ಜೋಳ, ಅಕ್ಕಿ, ಇತ್ಯಾದಿ ಹಿಟ್ಟುಗಳಿಂದ ಮಾಡುತ್ತಾರೆ. ತಯಾರಿಸಿದ ಮುದ್ದೆಯನ್ನು ಹಿಟ್ಟು ಎಂದೇ ಕರೆಯುತ್ತಾರೆ. ವ್ಯತ್ಯಾಸ ತಿಳಿಯಲು ಹಸಿಟ್ಟು (ಹಸಿ ಹಿಟ್ಟು) ಬಿಸಿ ಹಿಟ್ಟು ಎಂದು ಬಳಸುತ್ತಾರೆ. ಸಾಂಬಾರನ್ನು ಎಸ್ರು (ಸಾರು) ಎಂದು ಕರೆಯುತ್ತಾರೆ. ಸೊಪ್ಪಿನ ಸಾರು ತರಕಾರಿ ಸಾಂಬಾರು, ಬೇಳೆ ಎಸ್ರು, ಹುಳ್ಳಿಕಾರ, ಹೀಗೆ ವಿವಿಧ ಬೇಳೆ ತರಕಾರಿಗಳನ್ನು ಬಳಸಿ ಸಾರು ಅಥವಾ ಎಸ್ರನ್ನು ಮಾಡುತ್ತಾರೆ.

ಮಾಂಸಹಾರಿಗಳಾದರೆ ಕೋಳಿಸಾರು, ಮಾಂಸದ ಸಾರು ಎಂದು ಮಾಡುತ್ತಾರೆ. ಕೋಳಿ, ಆಡು, ಕುರಿ, ನಳ್ಳಿ, ಮೀನು, ಬೆಕ್ಕು ವೊಟ್ಟೆ ಮುಂತಾದ ಪ್ರಾಣಿ ಪಕ್ಷಿಗಳ ಮಾಂಸದ ಅಡುಗೆ ಸಾರು ಮಾಡುತ್ತಾರೆ. ಮಾಂಸವನ್ನು ಬಾಡು ಎಂದು ಕರೆಯುತ್ತಾರೆ. ಹಣಕಾಸು ವ್ಯವಸ್ಥೆ ಚುರುಕುಗೊಂಡಿರುವುದರಿಂದ ಯಾವಾಗ ಎಂದರೆ ಅವಾಗ ಮಾಡುವ ಸ್ಥಿತಿ ಉಂಟಾಗಿದೆ. ಅನ್ನದಲ್ಲಿ ಚಿತ್ರಾನ್ನ, ಕಿಚಡಿ ಅನ್ನ, ಮೊಸರನ್ನ ಹೀಗೆ ವಿವಿಧ ರೀತಿಯಲ್ಲಿ ಮಾಡುತ್ತಾರೆ.

ಪಿತೃಪಕ್ಷ

ಅವರವರ ಮನೆತನದ ಸಂಪ್ರದಾಯಕ್ಕೆ ತಕ್ಕಂತೆ ಆಚರಿಸುವ ಹಬ್ಬ. ಪ್ರತಿ ವರ್ಷ ಸ್ವರ್ಗದಲ್ಲಿರುವ ಹಿರಿಯರಿಗೆ ಅನ್ನ ಹಾಕಿ ಅವರ ಹೆಸರಿನಲ್ಲಿ ಅನ್ನ ಸಂತರ್ಪಣೆ ಮಾಡುವುದು ನಡೆಯುತ್ತದೆ. ಕೆಲವರು ಮಹಾಲಯ ಅಮಾವಾಸ್ಯೆ. ಕೆಲವರು ಆಯುಧ ಪೂಜೆಯಂದು, ಮತ್ತೆ ಕೆಲವರು ದೀಪಾವಳಿ ಹಬ್ಬದಂದು ಈ ಆಚರಣೆ ಮಾಡುತ್ತಾರೆ. ಇದರಲ್ಲಿ ಮಾಂಸಹಾರಿ, ಸಸ್ಯಾಹಾರಿ ಎಂಬ ಎರಡು ಬಗೆಗಳಿರುತ್ತವೆ. ಅವರವರ ಸಂಪ್ರದಾಯಕ್ಕೆ ಅನುಗುಣವಾಗಿ ಅವುಗಳನ್ನು ಮಾಡುತ್ತಾರೆ.

ಎಲ್ಲಾ ತರಹದ ತಿಂಡಿ, ಊಟವನ್ನು ಎಡೆಗೆ ಇಟ್ಟು ಕಳಸ ಪೂಜಿಸಿ ಹೊಸ ಬಟ್ಟೆ ಹಣ್ಣು ಹಂಪಲುಗಳನ್ನು ಇಟ್ಟು ಪೂಜಿಸುತ್ತಾರೆ. ಸ್ವಲ್ಪ ಹೊತ್ತಿನ ಅನಂತರ ಹಿರಿಯರು ಬಂದು ಉಂಡು ಹೋದರು ಎಂದು ತಿಳಿಯುತ್ತಾರೆ. ಆಮೇಲೆ ನೆಂಟರಿಷ್ಟರೊಂದಿಗೆ ಊಟೋಪಚಾರದಲ್ಲಿ ತೊಡಗುತ್ತಾರೆ.

ಸಂಕ್ರಾಂತಿ ಹಬ್ಬ

ಸಂಕ್ರಾಂತಿ ಹಬ್ಬ ಈ ಗ್ರಾಮದ ಹಬ್ಬಗಳಲ್ಲೊಂದು, ಸುಗ್ಗಿಯ ಹಬ್ಬ ಎಂದೇ ಕರೆಯುವ ಸಂಕ್ರಾಂತಿಯು ಎಳ್ಳು ಬೆಲ್ಲಗಳಿಗೆ ವಿಶೇಷವಾದದ್ದು. ಸೂರ್ಯನು ಮಕರ ಸಂಕ್ರಾಂತಿ ವೃತ್ತದಿಂದ ಕರ್ಕಾಟಕ ವೃತ್ತದ ಕಡೆಗೆ ಚಲಿಸುವ ದಿನದಂದು ಈ ಹಬ್ಬ. ಎಳ್ಳು ಬೆಲ್ಲ, ಕೊಬ್ಬರಿ, ಕಬ್ಬು,

ಇವೆಲ್ಲವುಗಳನ್ನು ಪರಸ್ಪರ ಮನೆ ಮನೆಗೆ ಹಂಚುತ್ತಾರೆ. ಮಕ್ಕಳಿಗೆ ಅಲಂಕಾರ ಮಾಡಿ ಹಸೆಯ ಮೇಲೆ ಕೂರಿಸಿ ಎಳ್ಳು, ಬೆಲ್ಲ, ಇಟ್ಟು ಹರಸುತ್ತಾರೆ. ಇದು ಮಕ್ಕಳ ಭವಿಷ್ಯಕ್ಕೆ ಒಳ್ಳೆಯದೆಂಬ ನಂಬಿಕೆ ಇದೆ.

ಗಾದೆಗಳು

ಯಾವುದೇ ಜನಪದ ಸಮೂಹದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ದೊರೆಯುವ ಜನಪದ ಸಾಹಿತ್ಯ ಪ್ರಕಾರವೆಂದರೆ, ಜನಪದ ಗಾದೆಗಳು ಎಂದರೆ ಆಶ್ಚರ್ಯವೇನೂ ಇಲ್ಲ. ಅವುಗಳ ಸಂಕ್ಷಿಪ್ತತೆ, ಅರ್ಥಪೂರ್ಣತೆ, ಕಲಾತ್ಮಕತೆ, ಲೋಕಾನುಭವ ಹಾಗೂ ಪ್ರಸ್ತುತತೆ ಮೊದಲಾದ ಕಾರಣಕ್ಕೆ ಸಾಮಾನ್ಯ ಬುದ್ಧಿ ಮಟ್ಟದ ವ್ಯಕ್ತಿಯಲ್ಲೂ ಇವು ಕಂಡುಬರುತ್ತವೆ. ಹಾಡು ಹೇಳುವ ಒಳ್ಳೆಯ ದನಿ ಇರಬೇಕು. ಕತೆ ಹೇಳಲು ಒಳ್ಳೆಯ ಕಲ್ಪನಾ ಸಾಮರ್ಥ್ಯವಿರಬೇಕು. ಆದರೆ ಗಾದೆಯ ವಿಚಾರದಲ್ಲಿ ಅಷ್ಟೊಂದು ತಡವರಿಸಬೇಕಾದ ಅಗತ್ಯವಿಲ್ಲ. ಕೆಲವರು ಅಯ್ಯೋ ನಾವು ಹಂಗೆಲ್ಲಾ ಪದ-ಪಾಢ್ಯ, ಗಾದೆ-ಗಂಧ ಕಲೀಲಿಲ್ಲ, ಎಂದರೂ ಕೆಲವು ಸನ್ನಿವೇಶಗಳು ಬಂದಾಗ ತಮಗರಿವಿಲ್ಲದೆಯೇ ಹಲವು ಗಾದೆಗಳನ್ನು ಹೇಳಬಲ್ಲವರಾಗಿರುತ್ತಾರೆ. ಕೆಲವರು ಹೇಳಲು ನಿಪುಣರಾದರೆ, ಕೆಲವರು ಪದ ಹಾಡುವುದರಲ್ಲಿ ಹಾಗೆಯೇ ಕೆಲವರು ಒಗಟುಗಳನ್ನು ಹೇಳುವುದರಲ್ಲಿ ಜಾಣರಾದರೆ ಕೆಲವರು ಒಳ್ಳೆ ಮಾತುಗಾರಿಕೆಯುಳ್ಳವರಾಗಿರುತ್ತಾರೆ. ಒಟ್ಟಿನಲ್ಲಿ ಮನುಷ್ಯನ ಸ್ವಭಾವದಲ್ಲಿ ವೈವಿಧ್ಯತೆ ಬದುಕಿನ ಅನುಭವದಲ್ಲಿ ಸಾಂದ್ರತೆ ಹಾಗೂ ಬಹುಮುಖತೆಗಳಿರುವಾಗ ಗಾದೆಗಳಲ್ಲೂ ಅಂತಹ ವೈವಿಧ್ಯಮಯ ರಚನೆಗಳಿರುವುದು ಸಹಜವಾಗಿದೆ.

೧. ತಾಯಿಗೆ ಆಗದ ಮಗ ಊರಿಗೇ ಆದಾನೇ
೨. ನಾಲ್ಗೆ ಚೆನ್ನಾಗಿದ್ರೆ ಊರೇ ಚೆನ್ನಾಗಿರ್‍ತದ
೩. ತಾಯಿಯನ್ನು ನೋಡಿ ಮಗಳ್ನ ತಕ್ಕಂಬಾ, ಹಾಲ್ನ ನೋಡಿ ಎಮ್ಮೆ ತಕ್ಕಂಬಾ
೪. ಹೇಳ್ಕೊಟ್ಟ ಬುದ್ಧಿ ಕಟ್ಕೊಟ್ಟ ಬುತ್ತಿ ಎಲ್ಗಂಟ ಬಂದದು.
೫. ತಾಯಿ ಇದ್ದರೆ ತವರು. ನೀರಿದ್ದರೆ ಕೆರೆ, ಬಾವಿ
೬. ಊಟ ತನ್ನ ಇಚ್ಛೆ ನೋಟ ಪರರ ಇಚ್ಛೆ
೭. ಹಾಡ್ತಾ ಹಾಡ್ತಾ ರಾಗ, ನರಳ್ತಾ ನರಳ್ತಾ ರೋಗ
೮. ಕುರುಬರೂರಲ್ಲಿ ಗಾಜೆ ಮಾಣಿಕ್ಯ
೯. ಕತ್ತೆ ಮರೀಲಿ ಚೆಂದ, ಅತ್ತೆ ಹೊಸದರಲ್ಲಿ ಚೆಂದ
೧೦. ಕೆಲಸಕ್ಕೆ ಕರಿಬೇಡಿ, ಊಟಕ್ಕೆ ಮರೀಬೇಡಿ
೧೧. ಅಲಲಾ ಅನ್ನೋ ಅಳ್ಳಿಮರ ನಂಬುದ್ರು, ಮಳ್ಳಿ ಹಂಗಿರೋ ಕಳ್ಳಿನ ನಂಬಬಾರ್ದು

೧೨. ಕೀಲು ಸುಳಿ ಎತ್ತು ತಂದರೆ ಕೂರಿಸಿ ಹೋಯ್ತುದ

೧೩. ಹುಚ್ಚಿ ಮದುವೇಲಿ ಉಂಡೋನೆ ಜಾಣ

೧೪. ಮಠದ ಮುದ್ದೆ ಮಾರೀಗುಡಿ ನಿದ್ದೆ

೧೫. ಹಿಟ್ಟು ಹಳಸಿತ್ತು, ನಾಯಿ ಕಾದಿತ್ತು

೧೬. ಹದ್ದು ಹಾರುತ್ತೆ ಅಂತ ಕೆಂಬೂತ ಪುಕ್ಕ ತರ್ಕಂತಂತೆ

೧೭. ಕೇಡುಗಾಲ್ಕೆ ನಾಯಿ ಮೊಟ್ಟೆಯಿಕ್ತಂತೆ

೧೮. ಕೊಡೋದು ಮೂರಕಾಸು, ಕೋಣೆ ತುಂಬಾ ಹಾಸು

೧೯. ಕುಯ್ಯಲಾರದವನಿಗೆ ಕುಡುಗೋಲು ಒಂಭತ್ತು

೨೦. ಮೇಗ್ಲ ಮೋಡ ನೋಡಿ ಸೇದೊ ಬಾವ್ಗೆ ಉಚ್ಚೆ ಹುಯ್ಕೊಡ್ನಂತ

ಒಗಟುಗಳು

ಜನಪದರ ಬದುಕಿನಲ್ಲಿ ಒಗಟು ಬುದ್ಧಿ ಶಕ್ತಿಯನ್ನು ಹೆಚ್ಚಿಸುವ ಕಸರತ್ತು. ಒಗಟು ಜನಪದರಿಗೆ ಅವರ ಬದುಕಲ್ಲಿ ಹಾಸು ಹೊಕ್ಕಾದ ನೂರಾರು ಪರಿಕರ ವಸ್ತು, ಪ್ರಕೃತಿ, ಆಕಾಶ, ಈ ಎಲ್ಲವುಗಳ ಪರಿಚಯ ಸ್ವರೂಪದ ಜ್ಞಾನವನ್ನು ಹೆಚ್ಚಿಸುವ ಕಣಜ, ಮಕ್ಕಳಿಂದ ಮುದುಕರವರೆಗೆ ಒಗಟು ಹೇಳುವುದು, ಬಿಡಿಸುವುದು ಒಂದು ಮನರಂಜನೆಯೂ ಹೌದು. ಕೆಲವೊಮ್ಮೆ ಒಗಟುಗಳು ಸಾರ್ವತ್ರಿಕವಾಗಿದ್ದರೂ ಪ್ರಾದೇಶಿಕವಾಗಿ ಅಲ್ಪ-ಸ್ವಲ್ಪ ಬದಲಾವಣೆಯೊಂದಿಗೆ ಕಂಡುಬರುತ್ತವೆ.

೧. ಮೂಲೆಲಿರೋ ಮುದ್ಕಿಗೆ ಮೈಯೆಲ್ಲಾ ಕಣ್ಣು

- ಜರಡಿ

೨. ಸುತ್ಲೂ ಸುಣ್ಣದ ಗೋಡೆ, ಎಲ್ನೊಂಡಿದ್ರು ತೂತು ಇಲ್ಲ

- ಮೊಟ್ಟೆ

೩. ಹಗ್ಗ ಹಾಸಿದೆ ಗೂಳಿ ಮಲಗಿದೆ

- ಕುಂಬಳಕಾಯಿ

೪. ಹಿಡಿಯಕೆ ಹೋರಿ ಅಲ್ಲ, ಉಡಿಯಕೆ ಹಗ್ಗವಲ್ಲ

- ನಾಗರಹಾವು

೫. ಮಂಗಣ್ಣ, ಮಂಗಣ್ಣ ಅಂಗಿ ಬಿಚ್ಕಂಡ ನುಂಗಣ್ಣ

- ಬಾಳೇಹಣ್ಣು

೬. ಮುಳ್ಗುತ್ತೆ, ತೇಲುತ್ತೆ, ಕರ್ಗುತ್ತೆ

- ಎಲೆ, ಅಡಿಕೆ, ಸುಣ್ಣ

೭. ಸಕ್ಕರೆ ಪುಟ್ಟಿ ಸಿಕ್ಕಿಸಿ ನೋಡು ಜಾವನಕ್ಕೆ ಹೋಗುವೆ, ಬಗ್ಗಿಸಿ ನೋಡು, ಬಂತೋ ಬರಲಿಲ್ಲವೋ ಕೈಯಾರಿ ನೋಡು

– ಬೆಣ್ಣೆ

೮. ಸಂದ್ಗ ಮದ್ವ, ಮಧ್ಯರಾತ್ರಿಗ ಸೊಬ್ನ, ಹೊತ್ನಂತ್ತಕ್ಕೆ ಕೂಸು

– ಹಾಲಿಗೆ ಹೆಪ್ಪು, ಮೊಸರು, ಬೆಣ್ಣೆ

೯. ಮರದೊಳಗೆ ಮರಹುಟ್ಟಿ, ಭೂಚಕ್ರದ ಕಾಯಾಗಿ ತಿನ್ನಬಾರದ ಹಣ್ಣು ರುಚಿಯಾಗಿ

– ತಾಯಿ ಮಗು

೧೦. ಅಕ್ಕನ್ನೊಡೆದರೆ ತಂಗಿಗೆ ಮುಟ್ಟಬೇಕು

– ಪಾವು, ಸೇರು

೧೧. ಸಾವು ಪಯ ತೋಟ ನೂರ ಪಯ ಬೇಲಿ ಒಂದ ಕಲ್ಲೊಡೆದ್ರ ಚಟ್ಟು

– ಕಣ್ಣು

೧೨. ಒಂದ್ ಮಡಿಕೆ ಅದರೊಳಗೊಂದು ಕುಡಿಕೆ, ಕುಡಿಕೆಯೊಳಗೆ ಸಮುದ್ರ, ಸಮುದ್ರ ದೊಳಗೆ ಒಂದು ಶಂಕು

– ತೆಂಗಿನಕಾಯಿ

೧೩. ಅವ್ವ ತಂಟ್ರಿ ಮಗ ಬೋಳ

– ಬ್ಯಾಲದ ಮರ, ಬ್ಯಾಲದ ಕಾಯಿ

೧೪. ಒಂದು ಅಡಿಯ ವಾಹರವ ಮಾಡಿ ಬೆಂದವ ಹಿಡಿತಂದು ಆ ಮನೆಗೆ ಕೂಡಿ ಒಂದೂ ಒತ್ತಿದರೆ ನೂರಾಯಿತು ನೋಡಿ

– ಶಾವಿಗೆ

೧೫. ಕೆರೆ ಮಧ್ಯದಲ್ಲಿ ಮರಹುಟ್ಟಿ ನೀರನ್ನು ಕುಡ್ದು ಬೇರನ್ನು ತಿನ್ನತ್ತ

– ಸೀಮೆಎಣ್ಣೆ ದೀಪ

೧೬. ಮರ ತಿರ್ಗುತ್ತಾ ಹೂ ಛದ್ರುತ್ತಾ

– ರಾಗಿಕಲ್ಲು

೧೭. ಬೆಟ್ಟದ ಮೇಲೆ ರೊಟ್ಟಿ ಸುಟ್ಟು ನಮ್ಮನ್ನು ತಿನ್ನಾರ ನಿಮ್ಮಪ್ನು ತಿನ್ನಾರ

– ಜಾಗಟೆ

೧೮. ಇಬ್ಬರು ಸೂಳೇರೂ ಕಣ್ಣಿಗೆ ಕಪ್ಪಿಲ್ಲದೆ ಕಯ್ ಪಿಯ್ ಅಂತ ಅಳ್ತಿದ್ರು

– ಗಾಡಿಚಕ್ರ

೧೯. ಸರಸರನೆ ಬಂದವ ಸರ್ಪನಲ್ಲ, ಮನೆಗೆ ಬಂದವ ನೆಂಟನಲ್ಲ ಕೈಹಿಡಿದವ ಗಂಡನಲ್ಲ

– ಉಳುವ ಹಗ್ಗ ಆಳು, ಬಳೆಗಾರ

೨೦. ಅತ್ತಿಂದ್ ಇತ್ತಿಂದ್ ಬಂದು ಕುತ್ತಿಗ್ಗೆ ಕೈಹಾಕ್ತರೆ

– ಚಂಬು (ತಪ್ಪಲಿ)

೨೧. ಸಂದ್ಗಂಟ ತಿರ್ಕಂಡ್ ಬಂದು ಮೂರ ಪೈಸ ಜಾಗ ಹಿಡ್ಕಂಡು ಕೂತ್ಗತ್ತು

– ಉಳುಮೆಯ ಹರ್ಕಡ್ಡಿ

ನಂಬಿಕೆಗಳು

ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ಹಲವಾರು ನಂಬಿಕೆಗಳಿರುತ್ತವೆ. ಹಾಗೆಯೇ ಗಾವಡಗೆರೆ ಗ್ರಾಮದಲ್ಲಿಯೂ ಹಲವು ನಂಬಿಕೆಗಳಿರುವುದನ್ನು ಕಾಣಬಹುದು. ನಂಬಿಕೆಗಳು ಜನರ ದಿನ ನಿತ್ಯದ ಜೀವನದಲ್ಲಿ ಹಾಸು ಹೊಕ್ಕಾಗಿರುವುದನ್ನು ಕಾಣಬಹುದು. ಇಲ್ಲಿ ಬಳಕೆಯಲ್ಲಿರುವ ಕೆಲವು ನಂಬಿಕೆಗಳ ಪಟ್ಟಿ ಹೀಗಿದೆ:

೧. ಹೆಣ್ಣು ಮಕ್ಕಳು ಹೊಸಿಲ ಮೇಲೆ ನಿಲ್ಲಬಾರದು, ಕೂರಬಾರದು, ಅಂತೆಯೇ ತಲೆ ದಿಂಬಿನ ಮೇಲೆ ಕೂರಬಾರದು.

೨. ರಾತ್ರಿಯಾದ ಮೇಲೆ ಕಸಗುಡಿಸಿ ಆಚೆಗೆ ಸುರಿಯಬಾರದು.

೩. ಕಸಬರಲಲ್ಲಿ ಯಾರಿಗೂ ಹೊಡೆಯಬಾರದು ಮತ್ತು ಅವುಗಳನ್ನು ಒದ್ದರೆ ನಮಸ್ಕಾರ ಮಾಡಿಕೊಳ್ಳಬೇಕು.

೪. ಮಗು ತೊಟ್ಟಿಲಲ್ಲಿ ಮಲಗಿದ್ದಾಗ ತೊಟ್ಟಿಲ ಕೆಳಗೆ ಕಸಪರಿಕೆ ಇಡುತ್ತಾರೆ.

೫. ತುಂಬಾ ಆಕಳಿಕೆ ಬಂದರೆ ಹತ್ತಿರದವರು ನೆನೆಯುತ್ತಿದ್ದಾರೆ ಎಂದು

೬. ಮುಸ್ಸಂಜೆ ಹೊತ್ತಲ್ಲಿ ಹೆಣ್ಣು ಮಕ್ಕಳು ಮಲಗಬಾರದು, ಹೆಣ್ಣು ಮಕ್ಕಳು ಸಿಳ್ಳೆ ಹೊಡೆಯಬಾರದು.

೭. ವಿಧವೆಯರನ್ನು ಮುಂಡೆಯರು ಎಂದು ಕರೆಯುತ್ತಾರೆ. ಇವರು ಯಾವ ಶುಭ ಕಾರ್ಯಕ್ಕೂ ಮೊದಲಿಗೆ ಪಾಲ್ಗೊಳ್ಳಬಾರದು.

೮. ಮುಸ್ಸಂಜೆ ಹೊತ್ತಲ್ಲಿ ಬಾಗಿಲು ಹಾಕಬಾರದು, ಅದು ಲಕ್ಷ್ಮೀ ಬರುವ ಸಮಯ.

೯. ಬೆಳಿಗ್ಗೆ ಎದ್ದು ಬೆಕ್ಕಿನ ಮುಖ ನೋಡಿದರೆ ಯಾವ ಕೆಲಸವೂ ಆಗುವುದಿಲ್ಲ.

೧೦. ತೆಂಗಿನ ಕಾಯಿಯನ್ನು ಜುಟ್ಟಿಲ್ಲದಂತೆ ಇದ್ದರೆ ಪೂಜೆಗೆ ಬಳಸುವುದಿಲ್ಲ.

೧೧. ಕಾಗೆ ಸದ್ದು ಮಾಡಿದರೆ ಮನೆಗೆ ನೆಂಟರು ಬರುತ್ತಾರೆ.

೧೨. ಕಪ್ಪೆ ವಟಗುಟ್ಟಿದರೆ ಮಳೆಯಾಗುತ್ತದೆ.

೧೩. ಬೆಕ್ಕು ಕಾಲಿನಲ್ಲಿ ಮುಖ ಒರೆಸಿಕೊಳ್ಳುತ್ತಿದ್ದರೆ ಅಡುಗೆ ಒಲೆ ಮೊರೆದರೆ ನೆಂಟರು ಬರುತ್ತಾರೆ.

೧೪. ಪ್ರಯಾಣಕ್ಕೆ ಹೊರಡುವಾಗ ಎಲ್ಲಿಗೆ ಎಂದು ಕೇಳಬಾರದು, ವಿಧವೆಯರು, ಖಾಲಿ ಬಿಂದಿಗೆ ಎದುರಾಗುವುದು ಅಶುಭ.

೧೫. ಕನಸಿನಲ್ಲಿ ಸತ್ತ ವ್ಯಕ್ತಿಗೆ ಆಯಸ್ಸು ಹೆಚ್ಚು

೧೬. ಕನಸಿನಲ್ಲಿ ಹೂವು, ಹಣ್ಣು, ಮುತ್ತೈದೆಯರು ಬೆಂಕಿ, ನೀರು, ಕಾಣಿಸಬಾರದ್ದು ಅದು ಅಶುಭ

ಹೀಗೆ ಗಾವಡಗೆರೆ ಗ್ರಾಮದಲ್ಲಿ ಜನಪದ ಕಲೆಗಳ ಸರಣಿಯನ್ನು ನೋಡಬಹುದು. ಗ್ರಾಮಗಳ ಜನತೆಯ ದಿನನಿತ್ಯದ ಪ್ರತಿಯೊಂದು ಚಟುವಟಿಕೆಯೂ ಜನಪದವೇ ಆಗಿದೆ. ಗ್ರಾಮೀಣ ಜನರ ಬದುಕು ಜನಪದ ಕಲೆಗಳಲ್ಲಿಯೇ ಹಾಸು ಹೊಕ್ಕಾಗಿದೆ. ಹಬ್ಬ-ಹರಿದಿನಗಳಲ್ಲಿ ಮನರಂಜನೆಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಉದಾಃ ನಾಟಕ ಆಡುವುದು, ಜನಪದ ಗೀತೆಗಳನ್ನು ಹಾಡುವುದು, ಕುಸ್ತಿ ಪಂದ್ಯಗಳನ್ನು ದೊಣ್ಣೆ ವರಸೆ ಹೀಗೆ ಮುಂತಾದ ಚಟುವಟಿಕೆಗಳಲ್ಲಿ ತೊಡಗುವುದನ್ನು ಕಾಣಬಹುದು. ಮದುವೆ, ನಿಶ್ಚಿತಾರ್ಥದಂತಹ ಶುಭ ಸಂದರ್ಭಗಳಲ್ಲಿ ಹಿಂದೆ ಹಿರಿಯ ಸ್ತ್ರೀಯರು ಸೋಬಾನೆ ಗೀತೆಗಳನ್ನು ಹಾಡುತ್ತಿದ್ದರು. ಆ ಹಾಡುಗಳ ಮೂಲಕ ಗಂಡು-ಹೆಣ್ಣುಗಳನ್ನು ಜರಿಯುವುದು, ಬೀಗರು ಪರಸ್ಪರ ಹಾಸ್ಯ ಮಾಡುವುದು. ಹೀಗೆ ಗೀತೆಗಳ ಮೂಲಕ ಎಲ್ಲರನ್ನು ರಂಜಿಸುತ್ತಿದ್ದರು. ಆದರೆ ಇಂದು ಈ ಪ್ರತಿಭೆ ಕಣ್ಮರೆಯಾಗಿರುವುದನ್ನು ಕಾಣಬಹುದು. ಅಲ್ಪ ಪ್ರಮಾಣದಲ್ಲಿ ಇದ್ದರೂ ಅವರು ಹಾಡಲು ಹಂಜರಿಯುತ್ತಾರೆ. ಹೀಗೆ ಈ ಗ್ರಾಮದಲ್ಲಿ ಜನಪದ ಕಲೆಯು ಸಂಪೂರ್ಣ ಬಾಡಿ ಹೋಗಿದೆ. ಅಲ್ಲಲ್ಲಿ ಕಂಡುಬರುತ್ತಿರುವುದು ಗಮನಾರ್ಹ.

ಭಾಷೆ

ಭಾಷೆ ಬೆಳೆಯುತ್ತಾ ಹೋದಂತೆ ಪ್ರಾದೇಶಿಕ ಭಿನ್ನತೆಗಳನ್ನು ಬೆಳೆಸಿಕೊಳ್ಳುತ್ತಾ ಮುಂದುವರೆಯುತ್ತದೆ. ಹೀಗೆ ಈ ಭಾಷೆ ಪ್ರಮಾಣಾತ್ಮಕವಾಗಿ ದೂರ ದೂರ ಹೋದಂತೆ ಒಂದು ಭಾಷೆಯ ಜನತೆಯ ಸಂಸ್ಕೃತಿ, ಸಂಪರ್ಕ, ಇನ್ನೊಂದು ಭಾಷೆಯ ಸಂಸ್ಕೃತಿ, ಸಂಪರ್ಕ ಇವುಗಳ ಪ್ರಭಾವದಿಂದ ಭಿನ್ನ ಭಿನ್ನ ರೂಪಧಾರಣೆ ಪಡೆಯುತ್ತದೆ. ಇದು ಜೀವಂತ ಭಾಷೆಯ ಜೀವನಾಡಿ, ಭಾಷೆ ಸಾಮಾಜಿಕ ಕ್ರಿಯೆ. ಜನರ ಜೀವನದ ಜೀವನಾಡಿ. ಇಂತಹ ಭಾಷೆ ಜನರ ಸಂಸ್ಕೃತಿ ಆಚಾರ-ವಿಚಾರ, ಜಾತಿ-ಕುಲ, ವೃತ್ತಿ-ಕಸುಬು, ಶಿಕ್ಷಣ-ಭೌಗೋಳಿಕ ಹಿನ್ನಲೆಗಳ ಕಾರಣದಿಂದ ಊರಿನಿಂದ ಊರಿಗೆ ಜಾತಿಯಿಂದ ಜಾತಿಗೆ ಬೇರೆ ಬೇರೆ ಆಯಾಮ ಪಡೆದುಕೊಳ್ಳುತ್ತದೆ. ಇದು ಉಪಭಾಷಾ ಪ್ರಭೇದಗಳು ಹೆಚ್ಚಾಗಲು ಕಾರಣವಾಗುತ್ತದೆ. ಇದನ್ನು ಗಮನದಲ್ಲಿರಿಸಿಕೊಂಡು ಗಾವಡಗೆರೆ ಗ್ರಾಮದ ಭಾಷೆಯ ಕೆಲವು ವಿಶೇಷತೆಗಳನ್ನು ಪರಿಶೀಲಿಸಬಹುದಾಗಿದೆ. ಗಾವಡಗೆರೆಯಲ್ಲಿ ವಿದ್ಯಾವಂತರು ಬಳಸುವ ಭಾಷೆಗೂ ಅವಿದ್ಯಾವಂತರು ಬಳಸುವ ಭಾಷೆಗೂ ಸಾಕಷ್ಟು ವ್ಯತ್ಯಾಸವಿದೆ. ವಿದ್ಯಾವಂತರದ್ದು ಗ್ರಾಂಥಿಕ

ಸ್ವರೂಪಕ್ಕೆ ಹತ್ತಿರದ ಭಾಷೆಯಾಗಿದೆ. ಆದರೆ ಅವರಲ್ಲಿಯೂ ಕೆಲವೊಮ್ಮೆ ಪ್ರಾದೇಶಿಕತೆ ಕೆಲಸ ಮಾಡುವುದುಂಟು. ಅವಿದ್ಯಾವಂತರಲ್ಲಿ ಸಾಮಾನ್ಯವಾಗಿ 'ಓ' ಕಾರದ ಉಚ್ಚಾರಣೆಯು 'ವ' ಕಾರವಾಗಿ ಉಚ್ಚಾರವಾಗುವುದು. ಸಾಮಾನ್ಯ ಇದು ಕೂಡ ಅವಿದ್ಯಾವಂತರಲ್ಲಿಯೇ ಹೆಚ್ಚು. ಉದಾಹರಣೆಗೆ : ದೋಸೆ–ದ್ವಾಸೆ, ಕೋಟೆ–ಕ್ವಾಟೆ, ಜೋಕೆ–ಜ್ವಾಕೆ ಇದರಂತೆಯೇ 'ಎ' ಕಾರವು 'ಯ' ಕಾರವಾಗಿ ಬಳಸಲ್ಪಡುತ್ತದೆ. ಮೇಲೆ–ಮ್ಯಾಲೆ, ಅದೇಕೆ–ಅದ್ಯಾಕೆ, ಬೇಡ–ಬ್ಯಾಡ ಹೀಗೆ ಬಳಕೆಯಾಗುತ್ತವೆ. ವಿದ್ಯಾವಂತರು ಬಳಸುವುದು 'ಚ' ಕರಾದಿಯ ಪದಗಳು ಅವಿದ್ಯಾವಂತರಲ್ಲಿ 'ಸ'ಕಾರವಾಗಿ ಬಳಕೆಯಾಗುತ್ತದೆ.

ಅಧ್ಯಾಯ ೪

ಗಾವಡಗೆರೆಯ ಭೌಗೋಳಿಕ ಲಕ್ಷಣ

ಗಾವಡಗೆರೆ ಗ್ರಾಮ ಹುಣಸೂರು ತಾಲ್ಲೂಕಿನಲ್ಲಿ ಬರುವ ಪ್ರಮುಖ ಹೋಬಳಿ ಕೇಂದ್ರವಾಗಿದ್ದು, ಹುಣಸೂರಿನಿಂದ ೧೫ ಕಿ.ಮೀ. ಮತ್ತು ಕೆ.ಆರ್. ನಗರದಿಂದ ೭ಕಿ.ಮೀ. ಅಚಿತರದಲ್ಲಿದ್ದು ಕೆ.ಆರ್.ನಗರ ಮತ್ತು ಹುಣಸೂರು ರಸ್ತೆಯ ಮುಖ್ಯ ರಸ್ತೆಯಲ್ಲಿದೆ.

ಗಾವಡಗೆರೆಯ ಭೂಭಾಗದಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣು ಹೆಚ್ಚಾಗಿ ಕಂಡುಬರುತ್ತದೆ. ಗಾವಡಗೆರೆಯಲ್ಲಿ ಒಟ್ಟು ೭೬೧ ಕುಟುಂಬಗಳು ವಾಸವಾಗಿದ್ದು. ಗ್ರಾಮದ ಒಟ್ಟು ಜನಸಂಖ್ಯೆ ೩೨೫೪ ಆಗಿದ್ದು ಅದರಲ್ಲಿ ಪುರುಷರ ಸಂಖ್ಯೆ ೧೬೮೯ ಆದರೆ ಸ್ತ್ರೀಯರ ಸಂಖ್ಯೆ ೧೬೪೯ ಆಗಿದೆ. ಗಾವಡಗೆರೆಯ ಬಹುಪಾಲು ಜನ ರೈತರಾಗಿದ್ದು, ನೆಮ್ಮದಿಯಿಂದ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಗ್ರಾಮಕ್ಕೆ ಹಾರಂಗಿ ಕಾಲುವೆ ನೀರಾವರಿ ವ್ಯವಸ್ಥೆ ಇದ್ದು ಇದನ್ನು ಅವಲಂಬಿಸಿ ಯಾವುದೇ ಬೆಳೆ ಬೆಳೆಯುವುದಿಲ್ಲ. ಕೊಡಗು ಜಿಲ್ಲೆಗೆ ಸ್ವಲ್ಪ ಹತ್ತಿರವಾದ್ದರಿಂದ ಸಾಕಷ್ಟು ಮಳೆ ಬೀಳುತ್ತದೆ. ಹಾಗಾಗಿ ಇಲ್ಲಿನ ವ್ಯವಸಾಯ ಮಳೆ ಆಶ್ರಿತವಾದುದಾಗಿದೆ.

ಗಾವಡಗೆರೆಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ ತಂಬಾಕು, ಹತ್ತಿ, ರಾಗಿ, ಕಡಲೆಕಾಯಿ, ಹಲಸಂದೆ ಪ್ರಮುಖವಾದವುಗಳಾಗಿವೆ. ಗಾವಡಗೆರೆ ಪರಿಸರದಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ಬೇವು, ಹಲಸು, ಮಾವು, ಗೊಬ್ಬಳಿ, ಬಿಲ್ವಾರ, ಪ್ರಮುಖವಾದುದಾಗಿವೆ.

ಗಾವಡಗೆರೆ ಗ್ರಾಮ ೭೬೧ ಕುಟುಂಬದ ಗ್ರಾಮವಾದ್ದರಿಂದ ಊರು ವಿಶಾಲವಾಗಿ ಹರಡಿಕೊಂಡಿದೆ. ಹೆಚ್ಚಿನ ಮನೆಗಳು ಸಣ್ಣ ಹೆಂಚಿನಿಂದ ಕಟ್ಟಲ್ಪಟ್ಟಿದ್ದರೆ ಮಂಗಳೂರು ಹೆಂಚಿನ ಮನೆಗಳು ಸಾಕಷ್ಟಿವೆ. ಇತ್ತೀಚೆಗೆ ೧೦ ವರ್ಷದಿಂದ ಈಚೆಗೆ ಆರ್.ಸಿ.ಸಿ. ಮನೆಗಳು ಕಟ್ಟಲ್ಪಟ್ಟಿವೆ.

ಗಾವಡಗೆರೆ ಹೋಬಳಿ ಕೇಂದ್ರವಾದ್ದರಿಂದ ಇದರ ಸುತ್ತ ಇರುವ ಹಳ್ಳಿಗಳೆಂಧರೆ ಹುಲ್ಯಾಳು, ತೊಂಡಾಳು, ಕೆರೆಯೂರು, ಚಿಕ್ಕಾಡಿಗನಹಳ್ಳಿ ಕಳ್ಳಿಕೊಪ್ಪಲು, ಮನುಗನಹಳ್ಳಿ ಮಂಚಬಾಯನಹಳ್ಳಿ ಪ್ರಮುಖವಾದವುಗಳಾಗಿವೆ.

ಗಾವಡಗೆರೆ ಗ್ರಾಮದಲ್ಲಿ ಕೆರೆ ನೀರಾವರಿಯನ್ನು ಅವಲಂಬಿಸಿ ಭತ್ತದ ಬೆಳೆಯನ್ನು ಬೆಳೆಯುತ್ತಾರೆ. ಹಾರಂಗಿ ನಾಲೆಯಿಂದ ಬಿಟ್ಟ ನೀರನ್ನು ಕೆರೆಯಲ್ಲಿ ಶೇಖರಿಸಿ ವರ್ಷಕ್ಕೊಂದು ಫಸಲು ಬೆಳೆ ತೆಗೆಯುತ್ತಾರೆ.

ಗಾವಡಗೆರೆ ಮಲೆನಾಡಿನ ಸೆರಗಾದ ಹುಣಸೂರಿಗೆ ಹತ್ತಿರವಾದ್ದರಿಂದ ಸಾಕಷ್ಟು ಪ್ರಮಾಣದ ಮಳೆ ಬೀಳುತ್ತದೆ.

ಗಾವಡಗೆರೆಯಲ್ಲಿ ನಿರ್ಧಿಷ್ಟ ಪಂಗಡದ ಕೇರಿಗಳು ಪ್ರತ್ಯೇಕವಾಗಿವೆ. ನಾಯಕ ಜನಾಂಗದವರು ಒಂದೆಡೆ ನೆಲೆಸಿದ್ದು ಮರಾಠಿಗರ ಮನೆಗಳು ಪ್ರತ್ಯೇಕವಾಗಿವೆ. ಇತ್ತೀಚೆಗೆ ಗ್ರಾಮ ಬೆಳೆಯುತ್ತಿದ್ದು ಎಲ್ಲ ಜನಾಂಗದವರು ತಮ್ಮ ಅನುಕೂಲಕ್ಕೆ ತಕ್ಕ ಕಡೆ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಗಾವಡಗೆರೆಯಲ್ಲಿ ವಾಣಿಜ್ಯ ಬೆಳೆಯಾದ ತಂಬಾಕು ಬೆಳೆಯನ್ನು ರೈತರ ಯತೇಚ್ಛವಾಗಿ ಬೆಳೆಯುತ್ತಾರೆ. ಹೋಬಳಿ ಕೇಂದ್ರವಾಗಿರುವುದರಿಂದ ಕೃಷಿ ಇಲಾಖೆ ಸಹಾ ಇದೆ.

ಗಾವಡಗೆರೆ ಗ್ರಾಮದಲ್ಲಿ ಒಂದು ಕೆರೆಯಿದ್ದು ೫೦ ಎಕರೆ ವಿಶಾಲವಾಗಿದೆ. ಗಾವಡಗೆರೆ ಗ್ರಾಮವು ಮಾದರಿ ಗ್ರಾಮದ ಹಲವು ಲಕ್ಷಣಗಳನ್ನು ಹೊಂದಿದೆ. ಹಾಲು ಉತ್ಪಾದಕರ ಸಹಕಾರಿ ಸಂಘ, ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಗನವಾಡಿ ಕೇಂದ್ರ ಮಾಧ್ಯಮಿಕ ಶಾಲೆ, ೧. ಖಾಸಗಿ ಪ್ರೌಢಶಾಲೆ, ಸರ್ಕಾರಿ ಪ್ರೌಢಶಾಲೆ, ಟಿ.ಎಸ್.ಸುಬ್ಬರಾವ್ ಪದವಿ ಪೂರ್ವ ಕಾಲೇಜು, ಗ್ರಂಥಾಲಯ, ಗ್ರಾಮ ಪಂಚಾಯಿತಿ, ರೈತಸೇವಾ ಸಹಕಾರ ಬ್ಯಾಂಕ್, ವಿಜಯ ಬ್ಯಾಂಕ್, ನ್ಯಾಯಬೆಲೆ ಅಂಗಡಿ, ವಿದ್ಯಾರ್ಥಿ ನಿಲಯ ಸಮುದಾಯ ಭವನ, ದೂರವಾಣಿ ವಿನಿಮಯ ಕೇಂದ್ರ, ಸಮುದಾಯ ಭವನವನ್ನು ಒಳಗೊಂಡಿದೆ. ೬೦ ರಿಂದ ೬೫ ರಷ್ಟು ಸ್ತ್ರೀ ಸ್ವ ಸಹಾಯ ಸಂಘಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಒಂದೊಂದು ಸಂಘವು ದೇವರ ಹೆಸರಿನಲ್ಲಿ ಕರೆಯಲ್ಪಟ್ಟು ಕಾರ್ಯ ನಿರ್ವಹಿಸುತ್ತವೆ. ಗಾವಡಗೆರೆ ಗ್ರಾಮದಲ್ಲಿ ೧೫ ರಿಂದ ೨೦ ದೇವಾಲಯಗಳಿದ್ದು ಇಲ್ಲಿನ ಜನ ಹೆಚ್ಚು ದೈವೀಭಕ್ತರಾಗಿದ್ದಾರೆ. ಈಶ್ವರ ದೇವಾಲಯ, ಪಟ್ಟಲದಮ್ಮ ದೇವಾಲಯ, ಪಿರಿಯಾಪಟ್ಟಲದಮ್ಮ ದೇವಾಲಯ, ವಿಠೋಬ, ಮಾರಮ್ಮ ಮಹದೇಶ್ವರ ದೇವಾಲಯ, ಬೆಟ್ಟದಚುಕ್ಕಿ ದೇವಾಲಯ, ಮಂಚಮ್ಮ ದೇವಾಲಯ, ಹಾಲಮ್ಮ ದೇವಾಲಯ ಪ್ರಮುಖವಾದವುಗಳಾಗಿವೆ.

ಗ್ರಾಮದಲ್ಲಿ ಸಾಮಾನ್ಯವಾಗಿ ಶೇ. ೯೦ರಷ್ಟು ಮನೆಗಳು ವಿದ್ಯುಚ್ಛಕ್ತಿ ವ್ಯವಸ್ಥೆಯನ್ನು ಹೊಂದಿದೆ. ಭಾಗ್ಯಜ್ಯೋತಿ ಕುಠೀರಜ್ಯೋತಿ ಸೌಲಭ್ಯಗಳನ್ನು ಹೊಂದಿರುವ ಕುಟುಂಬಗಳಿವೆ. ಗ್ರಾಮದಲ್ಲಿ ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ನಿಗಮದ ಉಪಕೇಂದ್ರವಿದೆ. ಊರಿನ ಎಲ್ಲಾ ಬೀದಿ ದೀಪಗಳಲ್ಲಿ ಬೀದಿ ದೀಪಗಳಿದ್ದು, ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. ಕುಡಿಯುವ ನೀರಿನ ಪೂರೈಕೆಗಾಗಿ ೨ ನೀರಿನ ಟ್ಯಾಂಕ್‌ಗಳಿವೆ.

ಅಧ್ಯಾಯ ೫

ಊರಿನ ಜನಸಂಖ್ಯೆ

ಗಾವಡಗೆರೆ ಗ್ರಾಮದಲ್ಲಿರುವ ವಿವಿಧ ಜಾತಿಯಾಧಾರಿತ ಜನಾಂಗಗಳು

ಧರ್ಮ ಎಂಬುದು ಮಾನವ ಜೀವನದ ವಿಶಿಷ್ಟ ಅನುಭವ ಅದು ಮಾನವನ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಸಾಗುತ್ತದೆ. ಜೀವನವನ್ನು ಮಾನವೀಯ ನೆಲೆಯಲ್ಲಿರುವಂತೆ ನಿರ್ದೇಶಿಸುತ್ತದೆ. ಅದಕ್ಕೆ ಹಿಂದೂ, ಮುಸ್ಲಿಂ, ಕ್ರೈಸ್ತ ಎಂಬ ಯಾವ ಹೆಸರೂ ಇಲ್ಲ. ಈ ಸಮಾಜದಲ್ಲಿ ಧರ್ಮದಿಂದ ಪ್ರಭಾವಿತವಾಗಿದ್ದು ಯಾವುದೂ ಇಲ್ಲ. ಶಿಕ್ಷಣ, ಆಡಳಿತ, ರಾಜಕೀಯ, ಆರೋಗ್ಯ, ವಿಜ್ಞಾನ, ಸಾಮಾಜಿಕ ಮತ್ತು ವೈಯಕ್ತಿಕ ಜೀವನ ಮುಂತಾದ ಎಲ್ಲವೂ ಇದರ ಪ್ರಭಾವಕ್ಕೊಳಗಾಗಿವೆ. ಭಾರತವು ವೈವಿದ್ಯಮಯ ನಾಡು. ಇಲ್ಲಿನ ಭಾಷೆ, ನೆಲ, ಜಲ, ಸಂಸ್ಕೃತಿ, ಸಂಪ್ರದಾಯ ಪರಿಸರ ಎಲ್ಲವೂ ವೈವಿಧ್ಯಮಯ. ಅದೇ ಇಲ್ಲಿಯ ಚೆಲುವು, ಇತಿಹಾಸ ಪೂರ್ವ ಕಾಲದಿಂದಲೂ ಭಾರತದ ಈ ಮಣ್ಣಿನಲ್ಲಿ ಹತ್ತು ಹಲವು ಧರ್ಮಗಳು ಹುಟ್ಟಿಕೊಂಡು ಬೆಳೆದಿವೆ. ಸಹಿಷ್ಣುತೆ ನಮ್ಮ ಜನರ ಉಸಿರಾಗಿದೆ.

ವೈದಿಕ ಸಂಪ್ರದಾಯದ ಕಾಲದಿಂದಲೂ ಭಾರತೀಯ ಸಮಾಜದಲ್ಲಿ ವಿವಿಧ ಜಾತಿ ಸಮುದಾಯಗಳು ಹುಟ್ಟಿ ಬೆಳೆದು ಬಂದಿವೆ. ಮೊದಲು ಜನರು ಅನುಸರಿಸುತ್ತಿದ್ದ ಕಸುಬುಗಳಿಗೆ ಅನುಗುಣವಾಗಿ ಜಾತಿ ವ್ಯವಸ್ಥೆ ಹುಟ್ಟಿಕೊಂಡಿತು. ವೇದ, ಉಪನಿಷತ್ತು, ಸಂಸ್ಕೃತ, ಯಜ್ಞಯಾಗಾದಿಗಳನ್ನು ಮಾಡುವವರು ಬ್ರಾಹ್ಮಣರು, ದೇಶ ರಕ್ಷಣೆಗಾಗಿ ಹೋರಾಡುವವರನ್ನು ಕ್ಷತ್ರಿಯರೆಂದು, ವ್ಯಾಪಾರ ಮಾಡುವ ವರ್ತಕರನ್ನು ವೈಶ್ಯರೆಂದು, ಉಳಿದವರು ಕೆಳವರ್ಗ. ಈ ಮೇಲಿನ ಮೂರು ವರ್ಗದವರ ಸೇವೆ ಸಲ್ಲಿಸುವವರನ್ನು ಶೂದ್ರರೆಂಬ ಶ್ರೇಣೀಕೃತ ಸಮಾಜ ವ್ಯವಸ್ಥೆ ಅಸ್ಥಿತ್ವದಲ್ಲಿತ್ತು. ಈ ವ್ಯವಸ್ಥೆಯಿಂದ ಕವಲೊಡೆದ ಸಾವಿರಾರು ಜಾತಿ ವರ್ಗಗಳನ್ನು ಇಂದಿನ ಸಮಾಜದಲ್ಲಿ ನೋಡಬಹುದು. ಪ್ರತಿಯೊಂದು ಜಾತಿ ವ್ಯವಸ್ಥೆಗೆ ಅವರದೇ ಆದ ದೇವರುಗಳಿರುವುದು ಕಂಡುಬರುತ್ತದೆ. ಕರ್ನಾಟಕವನ್ನು ಧರ್ಮಗಳ ನೆಲೆವೀಡು, ಸಾಮ್ರಾಜ್ಯಗಳ ಮಾತೆ ಸಂಸ್ಕೃತಿಯ ತೂಗುದೊಟ್ಟಿಲು ಎಂದು ಹೇಳಿದರೆ ತಪ್ಪಾಗಲಾರದು. ಜೈನ, ಭೌದ್ಧ, ವೀರಶೈವ, ವೈಷ್ಣವ ಮುಂತಾದ ಧರ್ಮಗಳು ನಮ್ಮ ನಾಡಿನಲ್ಲಿ ವೈಭವಯುತವಾಗಿ ಮೆರೆದಿವೆ.

ಒಂದು ಗ್ರಾಮದ ಬದುಕನ್ನು ಅವಲೋಕಿಸಿದಾಗ ಪರಸ್ಪರರ ಒಡಂಬಡಿಕೆಯ ಹೊಂದಾಣಿಕೆಯನ್ನು ರೂಪಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಆಯಗಾರನಿಂದ ಊರ

ಗೌಡನವರೆಗೆ ಪರಸ್ಪರರಲ್ಲಿ ವಿವಿಧ ರೀತಿಯ ಸಾಂಸ್ಕೃತಿಕ ಸಂಬಂಧ ಇತ್ತು. ಭೂಮಿ ಒಕ್ಕಲಿಗನದಾದರೂ ಅದರಲ್ಲಿ ಪಾಲಿತ್ತು. ಕನ್ನಡ ಸಾಹಿತ್ಯಕ್ಕೆ ಧರ್ಮವೇ ತಳಹದಿ, ಬೆನ್ನೆಲುಬು.

ಜೈನ, ವೀರಶೈವ, ಬ್ರಾಹ್ಮಣ, ಧರ್ಮಗಳು ತಮ್ಮ ತಮ್ಮ ಧಾರ್ಮಿಕ ಚೌಕಟ್ಟಿನಲ್ಲಿ ಸಾಹಿತ್ಯ ನಿರ್ಮಿಸಿದರೂ ಗ್ರಾಮೀಣ ಜನರ ಬದುಕಿನ ಜನಪದ ಧರ್ಮದ ಪರಂಪರೆಯನ್ನು ಮಾನವ ಸಂಸ್ಕೃತಿಯ ಉದಾತ್ತ ಅಂಶಗಳನ್ನು ಹೊರತುಪಡಿಸಲಾಗುವುದಿಲ್ಲ.

ಸಾಹಿತ್ಯಕ್ಕೆ ಧರ್ಮ ಪ್ರೇರಕ ಶಕ್ತಿಯಾಯಿತು. ಧರ್ಮದ ಪ್ರಚಾರಕ್ಕೆ ಸಾಹಿತ್ಯ ಪೂರಕ ಶಕ್ತಿಯಾಯಿತು. ಗ್ರಾಮದ ಜಾತಿ ಸಮುದಾಯಗಳು ವಿವಿಧ ಧರ್ಮಕ್ಕೆ ಜನರ ಜೀವನ ವಿಧಾನಗಳು ಮತ್ತು ಅವರು ನಿರ್ವಹಿಸುತ್ತಿರುವ ವೃತ್ತಿ. ಕಸುಬುಗಳ ಬಗ್ಗೆ ನೋಡುವುದಾದರೆ, ಗ್ರಾಮದಲ್ಲಿ ಹಲವಾರು ಜಾತಿ ಸಮುದಾಯಗಳಿವೆ. ಒಂದೊಂದು ಜಾತಿ ಸಮುದಾಯಗಳು ಪ್ರತ್ಯೇಕವಾದ ಬೀದಿಗಳಲ್ಲಿ ವಾಸಿಸುತ್ತಾರೆ. ಇತ್ತೀಚೆಗೆ ಬೇರೆ ಬೇರೆ ಜಾತಿಯವರು ಒಂದೇ ಬೀದಿಗಳಲ್ಲಿ ವಾಸಿಸುವುದನ್ನು ನೋಡಬಹುದಾಗಿದೆ.

ಗಾವಡಗೆರೆ ಗ್ರಾಮ ಒಂದು ಹೋಬಳಿಯಾಗಿರುವುದರಿಂದ ಇಲ್ಲಿ ಅನೇಕ ಜಾತಿಯಾಧಾರಿತ ಜನಾಂಗಗಳು ವಾಸವಾಗಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ವಾಸವಾಗಿರುವ ಜನಾಂಗಗಳೆಂದರೆ

೧. ನಾಯಕರು	೫. ಪರಿಶಿಷ್ಟ ಜಾತಿ	೯. ಬ್ರಾಹ್ಮಣರು
೨. ಮರಾಠಿಗಳು	೬. ಮತಾಲೆಗಳು	೧೦. ಮುಸಲ್ಮಾನರು
೩. ಕುಂಬಾರರು	೭. ನಾಯಿಂದರು	೧೧. ವಿಶ್ವಕರ್ಮ
೪. ಮಡಿವಾಳರು	೮. ಲಿಂಗಾಯಿತರು	

ನಾಯಕರು: ಗಾವಡಗೆರೆ ಗ್ರಾಮದಲ್ಲಿ ಬಹುಸಂಖ್ಯೆಯಲ್ಲಿ ವಾಸವಾಗಿರುವ ಜನರೆಂದರೆ ನಾಯಕ ಜನಾಂಗ ಅಥವಾ ಪರಿಶಿಷ್ಟ ವರ್ಗದವರು. ಇವರ ಮೂಲ ಕಸುಬು ವ್ಯವಸಾಯವಾಗಿದೆ. ಆರ್ಥಿಕವಾಗಿ ಅಷ್ಟೇನು ಸಬಲರಲ್ಲದ ಈ ಜನ ಹೆಚ್ಚು ಕಲಿತವರಲ್ಲ. ಇತ್ತೀಚಿನ ೧೦ ವರ್ಷಗಳಲ್ಲಿ ಆಧುನಿಕತೆಯ ಪ್ರಭಾವದಿಂದ ಸ್ವಲ್ಪ ಇವರ ಜೀವನಶೈಲಿಯಲ್ಲಿ ಬದಲಾವಣೆಯಾಗಿದೆ. ನಾಯಕ ಜನಾಂಗದವರನ್ನು 'ತೊರೇರು' ಎಂಬ ಪದದಿಂದಲೂ ಕರೆಯಲಾಗುತ್ತದೆ. ಈ ಜನರು ಗಾವಡಗೆರೆಯಮ್ಮನ ವರ ಪಡೆದು ಕಾಡಿಗೆ ಹಂದಿ ಬೇಟೆಗೆ ಹೋಗುವುದು ಪರಂಪರಾಗತವಾಗಿ ನಡೆದುಕೊಂಡು ಬಂದ ವಾಡಿಕೆ. ವರ್ಷಕ್ಕೆ ಹಲವಾರು ಬಾರಿ ಬೇಟೆಗೆ ಹೋಗಿ ಕಾಡುಹಂದಿ ಬೇಟೆಯಾಡಿ ತರುತ್ತಾರೆ. ಹೀಗೆ ಬೇಟೆಯಾಡಿ ತಂದ

ಹಂದಿಯನ್ನು ತಮಟೆ ಬಾರಿಸುತ್ತಾ ಊರಿಗೆ ತಂದು ಹಿಂದಿನಿಂದ ನಡೆದುಕೊಂಡ ಬಂದ ಪದ್ಧತಿಯಂತೆ ಒಂದು ಮನೆಯ ಮುಂದೆ ಅದನ್ನು ಬಲಿಕೊಡುತ್ತಾರೆ. ಸೆರೆಸಿಕ್ಕ ಹಂದಿಯನ್ನು ಭರ್ಜಿಯಿಂದ ತಿವಿದು ಕೊಂದು ತಂದಿದ್ದರು ಅದನ್ನು ಮತ್ತೆ ಬಲಿ ಕೊಡುವುದು ವಾಡಿಕೆ. ನಂತರ ಬೇಟೆಗೆ ಹೋದ ಎಲ್ಲ ಜನರು ಆ ಹಂದಿಯ ಮಾಂಸವನ್ನು ಭಾಗ ಮಾಡಿಕೊಳ್ಳುತ್ತಾರೆ. ಈ ಜನಾಂಗದವರು ಕಾಡುಹಂದಿ ಮಾಂಸವನ್ನು ತಿನ್ನುತ್ತಾರೆ ವಿನಹ ಸಾಮಾನ್ಯ ಹಂದಿ ಮಾಂಸವನ್ನು ಬಳಸುವುದಿಲ್ಲ.

ನಾಯಕ ಜನಾಂಗದವರಿಗೆ ಗ್ರಾಮದೇವತೆಯಾದ ಗಾವಡಗೆರೆಯಮ್ಮನನ್ನು ಕಂಡರೆ ಅತಿಯಾದ ಭಕ್ತಿ ಮತ್ತು ನಂಬಿಕೆ. ಮನೆಯ ಮಕ್ಕಳ ಮದುವೆ ನಿಶ್ಚಯವು ದೇವಿಯ ವರವನ್ನೆ ಕೇಳಿ ನಿಶ್ಚಯಿಸುತ್ತಾರೆ. ಊರಲ್ಲಿ ಯಾವುದೇ ಹಬ್ಬ ಹರಿದಿನಗಳಾಗಲಿ ಒಂದೆಡೆ ಪಂಚಾಯ್ತಿ ಸೇರಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಹಾಗೆಯೇ ಊರಿನಲ್ಲಾಗುವ ಯಾವುದೇ ವ್ಯಾಜ್ಯಗಳನ್ನು ನ್ಯಾಯ ತೀರ್ಮಾನದ ಮೂಲಕ ಪಂಚಾಯಿತಿಯಲ್ಲೆ ಇತ್ಯರ್ಥಗೊಳಿಸಿಕೊಳ್ಳುತ್ತಾರೆ.

ನ್ಯಾಯ ಪಂಚಾಯ್ತಿ ಸೇರಿದಾಗ ಆ ಸಭೆಗೆ ಮನೆಗೆ ಒಬ್ಬ ವ್ಯಕ್ತಿಯಂತೆ ಹಾಜರಾಗಲೇಬೇಕು. ಇಲ್ಲದಿದ್ದಲ್ಲಿ ದಂಡ ವಿಧಿಸುವರು. ದೇವರನ್ನು ಹೊಳೆಗೆ ತೆಗೆದುಕೊಂಡು ಹೋದಾಗಲೂ ಮನೆಗೊಬ್ಬರಂತೆ ಬರಲೇಬೇಕು.

ನಾಯಕ ಜನಾಂಗದವರು ಬಿಡುವಿನ ವೇಳೆಯಲ್ಲಿ ಮೊಲದ ಬೇಟೆಯನ್ನು ಆಡುತ್ತಾರೆ. ನಾಯಕ ಜನಾಂಗದ ಜನ ವಿವಾಹ ಸಂಬಂಧಗಳನ್ನು ಬೆಳೆಸುವಲ್ಲಿ ತಮ್ಮತಮ್ಮಲ್ಲೇ ಸಂಬಂಧ ಬೆಳೆಸುವುದರಿಂದ ಶೇ. ೫೦ರಷ್ಟು ಭಾಗ ಮದುವೆಗಳಲ್ಲಿ ವಧು-ವರರಿಬ್ಬರು ಅದೇ ಗ್ರಾಮದ ಸಂಬಂಧಿಗಳಾಗಿರುತ್ತಾರೆ. ವ್ಯವಸಾಯವನ್ನಲ್ಲದೆ ಕುರಿ, ಮೇಕೆ, ಸಾಕಾಣಿಕೆ, ಹೈನುಗಾರಿಕೆಯನ್ನು ತಮ್ಮ ಕೃಷಿಯಲ್ಲಿ ಅಳವಡಿಸಿಕೊಂಡಿದ್ದಾರೆ. ವ್ಯವಸಾಯದಲ್ಲಿ ಹತ್ತಿ, ತಂಬಾಕು, ಕಡಲೆಕಾಯಿ ಇವರು ಬೆಳೆಯುವ ಪ್ರಮುಖ ಬೆಳೆಗಳಾಗಿವೆ.

ಈ ಜನಾಂಗದವರು ಮೂಲತಃ ಮಾಂಸಾಹಾರಿಗಳಾಗಿದ್ದು ಕುರಿ, ಮೇಕೆ, ಕೋಳಿ ಮಾಂಸವನ್ನು ತಿನ್ನುತ್ತಾರೆ. ಇವರು ಆಚರಿಸುವ ಪ್ರಮುಖ ಹಬ್ಬಗಳೆಂದರೆ ಗ್ರಾಮದೇವತೆಯಾದ ಗಾವಡಗೆರೆಯಮ್ಮ ಜಾತ್ರೋತ್ಸವ ಮತ್ತು ಪಿತೃಪಕ್ಷದಲ್ಲಿ ಆಚರಿಸುವ ಪಿತೃಪಕ್ಷ ಪ್ರಮುಖವಾದವು. ಪಿತೃಪಕ್ಷದಲ್ಲಿ ಅನೇಕ ಸಿಹಿತಿಂಡಿಗಳನ್ನಲ್ಲದೆ ಮಾಂಸದ ಅಡುಗೆ ಮಾಡಿ ತಮ್ಮ ಪಿತೃಗಳಿಗೆ ಎಡೆ ಇಡುತ್ತಾರೆ. ನಾಯಕ ಜನಾಂಗದವರು ಭಾಷಿಕವಾಗಿ ಕನ್ನಡ ಭಾಷೆಯನ್ನು ಬಿಟ್ಟರೆ ಯಾವುದೇ ಭಾಷೆಯನ್ನು ಮಾತನಾಡುವುದಿಲ್ಲ.

ಮಡಿವಾಳರು (ಅಗಸರು) : ಗಾವಡಗೆರೆಯಲ್ಲಿ ೨೦-೩೦ ಮಡಿವಾಳ ಮನೆತನಗಳು ಇವೆ. ಇವರು ಗಾವಡಗೆರೆ ಮಾತ್ರವಲ್ಲದೆ ಸುತ್ತಮುತ್ತಲ ಗ್ರಾಮಗಳಲ್ಲಿನ ಮಡಿವಾಳಿಕೆಯನ್ನು ಮಾಡುತ್ತಾರೆ. ಊರಿನಲ್ಲಿ ನಡೆಯುವ ಎಲ್ಲ ದೇವತಾಕಾರ್ಯಗಳಲ್ಲಿ ಇವರ ಪಾತ್ರ ಪ್ರಮುಖವಾದುದಾಗಿದೆ. ದೇವರ ಉತ್ಸವಗಳಲ್ಲಿ ಪಂಜಿನ ಆರತಿಯನ್ನು ನೆಲಕ್ಕೆ ಮಡಿ ಬಟ್ಟೆಯನ್ನು ಹಾಸುತ್ತಾರೆ. ದೇವರ ಉತ್ಸವಗಳಲ್ಲಿ ಇವರು ಮಡಿ ಹಾಸಿದ ನಂತರವೆ ದೇವರ ಉತ್ಸವ ಮೂರ್ತಿಗಳ ವಾನ್ಯಗಳನ್ನು ಅದರ ಮೇಲೆ ಇಡುವುದು. ಕೆಲವರಿಗೆ ಈ ಮಡಿ ಹಾಸವು ವೃತ್ತಿ ವಂಶಪಾರಂಪರ್ಯವಾಗಿ ಬೆಳೆದುಬಂದಿದೆ. ಮತ್ತೆ ಕೆಲವರು ಇಸ್ತ್ರೀ ಅಂಗಡಿಗಳನ್ನು ಇಟ್ಟಿದ್ದರೆ ಕೆಲವು ಮಂದಿ ವ್ಯವಸಾಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 'ಪಿರಿಯಾಪಟ್ಟಣದಮ್ಮ' ದೇವಿಯನ್ನು ಈ ಜನಾಂಗದವರು ಪೂಜಿಸುವುದು ವಿಶೇಷವಾಗಿದೆ.

ಪರಿಶಿಷ್ಟ ಜಾತಿ : ಗಾವಡಗೆರೆ ಗ್ರಾಮದಲ್ಲಿ ಪರಿಶಿಷ್ಟ ಜಾತಿಯವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಪರಿಶಿಷ್ಟ ಜಾತಿಯ ಪಂಗಡಗಳಾದ

೧. ಎಡಗೈ ೨. ಬಲಗೈ

ಈ ಎರಡು ಪಂಗಡದ ಜನರು ಇಲ್ಲಿ ವಾಸವಾಗಿದ್ದಾರೆ. ಎಡಗೈನವರಿಗಿಂತ ಬಲಗೈ ಜನ ಸಾಕಷ್ಟು ಮಂದಿ ಇದ್ದಾರೆ. ಆರ್ಥಿಕವಾಗಿ ಅಷ್ಟೇನು ಸಬಲರಲ್ಲದ ಈ ಜನ ಕೂಲಿನಾಲಿ ಮಾಡಿ ತಮ್ಮ ಜೀವನ ಸಾಗಿಸುತ್ತಾರೆ. ಈ ಜನಾಂಗದಲ್ಲಿ ಹೆಚ್ಚಿನ ಮಂದಿಗೆ ತಮ್ಮದೆ ಜಮೀನು ಆಸ್ತಿ ಎಂಬುದಿಲ್ಲ. ಮರಾಠಿಗರ ಜಮೀನುಗಳನ್ನು ವಾರಕ್ಕೆಂದು ಪಡೆದು ಅದರಲ್ಲಿ ವ್ಯವಸಾಯ ಮಾಡುತ್ತಾರೆ. ಇತ್ತೀಚೆಗೆ ಆಧುನಿಕತೆ ಪ್ರಭಾವದಿಂದ ಕೆಲವರು ಸ್ವಲ್ಪಮಟ್ಟಿನ ವಿದ್ಯಾಭ್ಯಾಸ ಮಾಡಿದ್ದಾರೆ. ಕೆಲವು ಸರ್ಕಾರಿ ಸವಲತ್ತುಗಳನ್ನು ಪಡೆದು ಸ್ವಲ್ಪಮಟ್ಟಿನ ಅಭಿವೃದ್ಧಿ ಕಂಡಿದ್ದಾರೆ. ಈ ಜನಾಂಗದವರಿಗೆ ಸಣ್ಣದೊಂದು ಮಾರಿಗುಡಿಯನ್ನು ಬಿಟ್ಟರೆ ಯಾವುದೇ ದೇವಾಲಯಗಳು ಇಲ್ಲ. ಗ್ರಾಮದಲ್ಲಿರುವ ಎಲ್ಲ ಉತ್ಸವಗಳಲ್ಲಿ ಭಾಗಿಯಾಗಿ ಇವರು ಪೂಜೆ ಸಲ್ಲಿಸುತ್ತಾರೆ. ಗಾವಡಗೆರೆಯಮ್ಮನ ಜಾತ್ರೆಯಲ್ಲಿ ಕುಳವಾಡಿ ಮನೆಯಿಂದ ಎಡೆ ತರಲೇಬೇಕು ಎಂಬುದು ಪ್ರತೀತಿ. ಈ ಎಡೆಯನ್ನು ದೇವಿಗೆ ಸಮರ್ಪಿಸುವ ಬದಲು ದೇವಾಲಯದ ಪಕ್ಕದಲ್ಲಿರುವ ಚಿಕ್ಕಗುಡಿಗಳಲ್ಲಿರುವ ಮೂರ್ತಿಗಳಲ್ಲಿ ಎಡೆ ಇಡುತ್ತಾರೆ. ಮಾದಿಗ ಜನಾಂಗಕ್ಕೆ ಈ ಆಚರಣೆ ಪರಂಪರಾಗತವಾಗಿ ಉಳಿದು ಬೆಳೆದು ತಮಟೆ ಬಾರಿಸುತ್ತಾರಲ್ಲದೆ ಗ್ರಾಮದಿಂದ ಇವರಿಗೆ ಇಂತಿಷ್ಟು ಎಂದು ವರ್ಷಕ್ಕೆ ಹಣ ನೀಡುತ್ತಾರೆ. ಉತ್ಸವಗಳಲ್ಲಿ ಪ್ರತಿ ಮನೆಯಲ್ಲೂ ಚಂದಾ ವಸೂಲಿ ಮಾಡುತ್ತಾರೆ. ಓಕುಳಿ ಹಬ್ಬ ೧೫ ದಿನಗಳು ಇರುವ ಹಾಗೆ ಬಸವೇಶ್ವರ ದೇವಾಲಯದ ಮುಂದೆ ಸಂಜೆ ೬ ರಿಂದ ರಾತ್ರಿ ೧೦ ಗಂಟೆಯವರೆಗೆ ತಮಟೆ ಬಾರಿಸುವುದು

ಇವರ ಕರ್ತವ್ಯವಾಗಿದೆ. ಕನ್ನಡವನ್ನು ಬಿಟ್ಟರೆ ಬೇರೆ ಯಾವ ಭಾಷೆಯನ್ನು ಈ ಜನ ಮಾತನಾಡುವುದಿಲ್ಲ.

ಕುಂಬಾರ: ಕುಂಬಾರರ ಅನೇಕ ಮನೆತನಗಳು ಗಾವಡಗೆರೆಯಲ್ಲಿವೆ. ಮಡಿಕೆ ಒಲೆ, ಗಣೇಶ, ಗೌರಿಯ ಮೂರ್ತಿಗಳನ್ನು ಮಾಡುತ್ತಾರೆ. ಕೆಲವು ವರ್ಷಗಳ ಹಿಂದೆ ಸಣ್ಣ ಹೆಂಚುಗಳನ್ನು ಸದಾ ತಯಾರಿಸುತ್ತಿದ್ದರು. ಇತ್ತೀಚೆಗೆ ಬೇಡಿಕೆ ಕಡಿಮೆಯಾದ್ದರಿಂದ ಹೆಂಚುಗಳನ್ನು ತಯಾರಿಸುತ್ತಿಲ್ಲ. ಗಾವಡಗೆರೆಯಲ್ಲಿರುವ ಕುಂಬಾರ ಜನಾಂಗದಲ್ಲಿ ಕೆಲವು ಮಂದಿ ಬೃಹತ್ ಗಣಪತಿ ವಿಗ್ರಹಗಳನ್ನು ಮಾಡುವ ಕುಶಲಗಾರರು ಇದ್ದಾರೆ. ಆಧುನಿಕತೆಯ ಗಂಧಗಾಳಿ ಬೀಸಿದ್ದರ ಪರಿಣಾಮ ಮಡಿಕೆ, ಮಣ್ಣಿನ ಒಲೆಗೆ ಬೇಡಿಕೆ ಕಡಿಮೆಯಾದ ಕಾರಣ ಕೆಲವು ಮಂದಿ ಬೇರೆ ವೃತ್ತಿಗಳನ್ನು ಅನುಸರಿಸಿ ತಮ್ಮ ಜೀವನ ನಡೆಸುತ್ತಿದ್ದಾರೆ. ಮರಾಠಿಗರು ಶಿರಿಯಾಳ ಹಬ್ಬ ಮಾಡುವಾಗ ಕುಂಬಾರರನ್ನು ಕರೆಸಿ ಶಿರಿಯಾಳನ ಮೂರ್ತಿಯನ್ನು ಮಣ್ಣಿನಲ್ಲಿ ಮಾಡಿಸುತ್ತಾರೆ.

ನಾಯಿಂದರು: ಗಾವಡಗೆರೆ ಗ್ರಾಮದಲ್ಲಿ ನಾಯಿಂದರು ಸಾಕಷ್ಟು ಮಂದಿ ಇದ್ದು ಗಾವಡಗೆರೆ ಸುತ್ತಮುತ್ತಲ ಕೆಲವು ಗ್ರಾಮದಲ್ಲಿ ಕ್ಷೌರಿಕರು ಇಲ್ಲದ ಕಾರಣ ಸಾಕಷ್ಟು ಊರಿನ ಜನಗಳು ಕ್ಷೌರಕ್ಕಾಗಿ ಈ ಜನಾಂಗವನ್ನೇ ಅವಲಂಬಿಸಿದ್ದಾರೆ. ಇವರಲ್ಲಿ ಕೆಲವರು ಮಂಗಳ ವಾದ್ಯಗಳನ್ನು ನುಡಿಸುತ್ತಾರೆ. ಈ ನಾಯಿಂದರು ಕನ್ನಡ ಭಾಷೆಯಲ್ಲೇ ಮಾತನಾಡುತ್ತಾರೆ. ಬೇರೆ ಯಾವ ಭಾಷೆಯು ಈ ಜನಗಳಿಗೆ ಬರುವುದಿಲ್ಲ.

ಗಾಣಿಗರು: ಗಾವಡಗೆರೆಯಲ್ಲಿ ೧೦ ಗಾಣಿಗರ ಮನೆತನಗಳಿದ್ದು ಹಿಂದೆ ಇವರು ಗಾಣಗಳನ್ನಿಟ್ಟುಕೊಂಡು ಎಣ್ಣೆ ತೆಗೆದುಕೊಡುತ್ತಿದ್ದರು. ಆಧುನಿಕ ಪ್ರಭಾವದಿಂದ ಇವರು ಗಾಣಗಳನ್ನು ಮುಚ್ಚಿದ್ದಾರಲ್ಲದೆ ವ್ಯವಸಾಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಗಾಣಿಗರು ಕನ್ನಡ ಭಾಷೆ ಮಾತನಾಡುತ್ತಾರೆ. ಬೇರೆ ಯಾವ ಭಾಷೆ ಈ ಜನಗಳಿಗೆ ಬರುವುದಿಲ್ಲ.

ಲಿಂಗಾಯತ: ಲಿಂಗಾಯಿತರ ಒಟ್ಟು ೧೫ ಕುಟುಂಬಗಳು ಈ ಗ್ರಾಮದಲ್ಲಿವೆ. ಊರಿನ ಬಸವೇಶ್ವರ ಮತ್ತು ಮಹದೇಶ್ವರ ದೇವಾಲಯಗಳ ಪೂಜೆ ಪುನಸ್ಕಾರಗಳು ಪರಂಪರಾಗತವಾಗಿ ಇವರಿಗೆ ಉಳಿದುಕೊಂಡು ಬಂದಿವೆ. ಶಿವರಾತ್ರಿ, ಗೌರಿ ಹಬ್ಬಗಳನ್ನು ಹೆಚ್ಚು ವಿಜೃಂಭಣೆಯಿಂದ ಆಚರಿಸುತ್ತಾರೆ. ಗೌರಿ ಹಬ್ಬದಲ್ಲಿ ಬಳೆಮಲಾರವನ್ನು ಪೂಜಿಸಿ ಮುತ್ತೈದೆಯರಿಗೆ, ಮನೆಗೆ ಕರೆದು ಫಲ ತಾಂಬೂಲ ನೀಡಿ ಗೌರಿ ಬಳೆ ತೊಡಿಸುತ್ತಾರೆ. ಮನೆಯಲ್ಲಿ ಗೌರಿಯನ್ನು ಕೂರಿಸಿ ಮೊರದ ಬಾಗಿನ ನೀಡುತ್ತಾರೆ.

ಶಿವರಾತ್ರಿಯಲ್ಲಿ ಹೆಣ್ಣು ಮಕ್ಕಳಿಗೆ ವಸ್ತ್ರ ಬೆಲ್ಲಕ್ಕೆ ಎಂದು ಹೊಸ ಸೀರೆ, ಶಿವದಾರ, ವಸ್ತ್ರ ಹಬ್ಬಕ್ಕೆ ಬೇಕಾದ ಎಲ್ಲ ದಿನಸಿ ಸಾಮಾನುಗಳನ್ನು ಉಡುಗೊರೆಯಾಗಿ ನೀಡುತ್ತಾರೆ.

ಬ್ರಾಹ್ಮಣರು: ಗಾವಡಗೆರೆಯಲ್ಲಿ ಒಂದೇ ಒಂದು ಬ್ರಾಹ್ಮಣ ಕುಟುಂಬವಿದೆ. ಈ ಕುಟುಂಬವು ಈ ಗ್ರಾಮದಲ್ಲಿ ಕಳೆದ ೭೦ ವರ್ಷಗಳಿಂದ ವಾಸವಾಗಿದೆ. ಈ ಕುಟುಂಬದಲ್ಲಿನ ವ್ಯಕ್ತಿಗಳು ಗಾವಡಗೆರೆ ಸುತ್ತಮುತ್ತಲಿನ ಎಲ್ಲ ಗ್ರಾಮಗಳ ಪುರೋಹಿತಿಕೆಯನ್ನು ಮಾಡುತ್ತಾರೆ. ಮದುವೆ, ಮುಂಜಿ, ಶ್ರಾದ್ಧ, ಪುಣ್ಯ, ಹೋಮ, ಹವನ, ಪಕ್ಷ ಎಲ್ಲ ಕಾರ್ಯಗಳಿಗೂ ಇವರೇ ಪುರೋಹಿತಿಕೆಯನ್ನು ಮಾಡುತ್ತಾರೆ.

ಒಕ್ಕಲಿಗರು: ಗಾವಡಗೆರೆ ಗ್ರಾಮದ ಒಂದು ವಿಶೇಷತೆಯೆಂದರೆ ಈ ಗ್ರಾಮದಲ್ಲಿ ಒಂದೇ ಒಂದು ಗೌಡ ಅಥವಾ ಒಕ್ಕಲಿಗ ಸಮುದಾಯದ ಕುಟುಂಬವೂ ಇಲ್ಲದಿರುವುದು. ಮುಖ್ಯ ಹೋಬಳಿ ಕೇಂದ್ರವಾಗಿದ್ದರೂ ಯಾವುದೇ ಕುಟುಂಬ ಇಲ್ಲಿ ನೆಲಸಿಲ್ಲ. ಆದರೆ ಗಾವಡಗೆರೆ ಸುತ್ತಮುತ್ತಲಿನ ಎಲ್ಲ ಹಳ್ಳಿಗಳಲ್ಲಿ ಒಕ್ಕಲಿಗ ಜನಾಂಗದವರಿದ್ದಾರೆ. ಬೇಸಾಯ ಮಾಡಲು ಉತ್ತಮ ಜಮೀನು ಇದ್ದರೂ ಒಕ್ಕಲಿಗರು ಇಲ್ಲಿ ಇಲ್ಲದಿರುವುದು ಆಶ್ಚರ್ಯದ ಸಂಗತಿಯಾಗಿದೆ.

ಮುಸಲ್ಮಾನರು: ಮುಸಲ್ಮಾನರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿದ್ದರೂ ಬೇರೆಡೆಯಿಂದ ವಲಸೆ ಒಂದು ವಾಸವಾಗಿರುವ ೫ ಕುಟುಂಬಗಳು ಇಲ್ಲಿವೆ. ಇವರು ಪ್ರಾರ್ಥನೆ ಮಾಡಲು ಪ್ರತ್ಯೇಕವಾದ ಪ್ರಾರ್ಥನಾ ಮಂದಿರವನ್ನು ಹೊಂದಿಲ್ಲವಾದರೂ, ಹಬ್ಬ ಹರಿದಿನಗಳಲ್ಲಿ ಕೆ.ಆರ್.ನಗರ ಅಥವಾ ಹುಣಸೂರಿಗೆ ಹೋಗಿ ಪ್ರಾರ್ಥನೆ, ನಮಾಜ್ ಮಾಡಿ ಬರುತ್ತಾರೆ. ಇಲ್ಲಿದ್ದ ಮುಸಲ್ಮಾನ ಅಜ್ಜಿಯೊಂದು ಮದ್ದು ಹಾಕಿದವರಿಗೆ ಔಷಧಿಯನ್ನು ನೀಡುತ್ತಿತ್ತು. ಇತ್ತೀಚೆಗೆ ಆ ಅಜ್ಜಿ ತೀರಿಕೊಂಡಿದೆ. ಆದರೆ ಆ ಅಜ್ಜಿ ನೀಡುತ್ತಿದ್ದ ಮದ್ದನ್ನು ಅವರ ಸೊಸೆ ಕಲಿತು ಅಜ್ಜಿ ಮಾಡುತ್ತಿದ್ದ ಕಾಯಕವನ್ನು ಮುಂದುವರೆಸುತ್ತಿದ್ದಾರೆ. ಹೀಗೆ ಜನಪದ ಔಷಧಿಯೊಂದರ ಉಳಿವು ಮತ್ತು ಬೆಳವಣಿಗೆ ಮುಂದುವರೆದುಕೊಂಡು ಹೋಗುತ್ತಿದೆ. ಜನಪದರ ಒಂದು ನಂಬಿಕೆ ಎಂದರೆ ತಾವು ನೀಡುವ ಔಷಧಿಯ ಮೂಲವನ್ನು ಹೇಳಿದರೆ ಔಷಧಿಯಿಂದ ಗುಣಮುಖವಾಗುವುದಿಲ್ಲ ಮತ್ತು ಅವರ ಔಷಧಿಯ ಗುಣ ನಾಶವಾಗುತ್ತದೆ ಎಂಬುದಾಗಿದೆ. ಆದರೆ ಅಜ್ಜಿ ತನ್ನ ಸೊಸೆಗೆ ಆ ವಿದ್ಯೆಯನ್ನು ಧಾರೆ ಎರೆದು ಉಳಿಸಿ ಹೋಗಿದ್ದಾರೆ.

ಗಾವಡಗೆರೆ ಗ್ರಾಮದ ಜನಸಂಖ್ಯೆ

ಗಾವಡಗೆರೆ ಗ್ರಾಮ ಒಂದು ಹೋಬಳಿ ಕೇಂದ್ರವಾಗಿದ್ದು ಗ್ರಾಮದಲ್ಲಿ ಒಟ್ಟು ೭೬೧ ಕುಟುಂಬಗಳಿವೆ. ಗ್ರಾಮದ ಒಟ್ಟು ಜನಸಂಖ್ಯೆ ೩೫೨೮. ಅದರಲ್ಲಿ ಪುರುಷರ ಸಂಖ್ಯೆ ೧೬೦೯

ಹಾಗೆಯೇ ಸ್ತ್ರೀಯರ ಸಂಖ್ಯೆ ೧೬೪೯ ಪ್ರಸ್ತುತ ಸಮಾಜದಲ್ಲಿ ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಮಕ್ಕಳೆಂದರೆ ಕೀಳಾಗಿ ಕಾಣುವ ಮನೋಭಾವದಿಂದ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದ್ದು ಲಿಂಗಾನುಪಾತದಲ್ಲಿ ಸ್ತ್ರೀಯರಿಗಿಂತ ಪುರುಷರೆ ಹೆಚ್ಚಿರುವ ಸಂದರ್ಭದಲ್ಲಿ ಗಾವಡಗೆರೆಯಲ್ಲಿ ವಿಶೇಷವಾಗಿ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವಿಭಕ್ತ ಕುಟುಂಬಗಳು ಕಡಿಮೆ ಪ್ರಮಾಣದಲ್ಲಿದ್ದ ಶೇ. ೮೦ಭಾಗ ವಿಭಕ್ತ ಕುಟುಂಬಗಳೆ ಆಗಿವೆ.

ವಿಶ್ವಕರ್ಮ

ಗಾವಡಗೆರೆಯಲ್ಲಿ ಒಟ್ಟು ೧೫ ವಿಶ್ವಕರ್ಮ ಮನೆತನಗಳಿವೆ. ಇವರು ಮೂಲತಃ ಸಸ್ಯಾಹಾರಿಗಳಾಗಿದ್ದು ಇವರನ್ನು ಚಿನ್ನ-ಬೆಳ್ಳಿ ಆಚಾರಿಗಳು ಎಂದು ಕರೆಯಲಾಗುತ್ತದೆ. ಈ ಜನಾಂಗದವರಲ್ಲಿ ೨ ಕುಟುಂಬಗಳು ಆಭರಣ ಮಾಡುವ ಕಾಯಕದಲ್ಲಿ ತೊಡಗಿಕೊಂಡಿದ್ದಾರೆ. ಒಂದು ಕುಟುಂಬ ಮದುವೆಗೆ ಅಗತ್ಯವಾದ ಬಾಸಿಂಗ ಮಾಡುವ ಕೆಲಸವನ್ನು ಮಾಡುತ್ತಾರೆ. ಈ ಜನಾಂಗದವರು ಜನಿವಾರ ಧರಿಸುತ್ತಾರಲ್ಲದೆ. ಲಿಂಗವನ್ನು ಧರಿಸುತ್ತಾರೆ.

ಈಡಿಗ

ಗಾವಡಗೆರೆ ಗ್ರಾಮ ಒಂದು ಹೋಬಳಿ ಕೇಂದ್ರವಾಗಿದ್ದರೂ ಒಂದೂ ಈಡಿಗ ಜನಾಂಗದ ಕುಟುಂಬವಿಲ್ಲ. ಎಲ್ಲಿ ಈಡಿಗರು ವಾಸವಾಗಿರುತ್ತಾರೊ ಅಲ್ಲಿನ ಜನ ಕುಡಿತದ ಚಟಕ್ಕೆ ಒಳಗಾಗಿರುತ್ತಾರೆ ಎಂಬುದು ಹಳೆಯ ಮಾತು. ಆದರೆ ಇತ್ತೀಚೆಗೆ ಆಧುನಿಕವಾಗಿ ಬಾರ್ ಸಂಸ್ಕೃತಿಯಿಂದ ಕುಡಿತದ ಚಟಕ್ಕೆ ಎಲ್ಲರೂ ಒಳಗಾಗುತ್ತಿದ್ದಾರೆ.

ಕುರುಬರು

ಕುರುಬ ಜನಾಂಗ ಕರ್ನಾಟಕದಲ್ಲಿ ವಾಸವಾಗಿರುವ ಪ್ರಮುಖ ಜನಾಂಗವಾಗಿದೆ. ಆದರೆ ಗಾವಡಗರೆಯಲ್ಲಿ ಒಂದೆ ಒಂದು ಕುರುಬ ಜನಾಂಗದ ಕುಟುಂಬವಿಲ್ಲ ಪಕ್ಕದ ಗ್ರಾಮಗಳಾದ ಬಿಳಿಗೆರೆ ಮಾರಗೌಡನಹಳ್ಳಿ, ಕಳ್ಳಿಕೊಪ್ಪಲು ಗ್ರಾಮಗಳಲ್ಲಿ ಕುರುಬ ಜನಾಂಗದವರು ವಾಸವಾಗಿದ್ದಾರೆ. ಆದರೆ ಕೇವಲ ೯ ಕಿ.ಮೀ. ಅಂತರದಲ್ಲಿರುವ ಗಾವಡಗೆರೆಯಲ್ಲಿ ಒಂದು ಕುಟುಂಬವು ಇಲ್ಲದಿರುವುದು ಆಶ್ಚರ್ಯ.

ಮಠಾಲೆಗಳು

ಗಾವಡಗೆರೆ ಗ್ರಾಮದಲ್ಲಿ ಮಠಾಲೆ ಜನಾಂಗದವರ ೨೦ ಕುಟುಂಬಗಳು ವಾಸವಾಗಿವೆ. ಮಠಾಲೆ ಜನಾಂಗದವರು ಮರಾಠಿ ಮಾತನಾಡುತ್ತಾರೆ. ಆದರೆ ಮರಾಠಿ ಮತ್ತು ಮಠಾಲೆ

ಜನಾಂಗದವರ ನಡುವೆ ವಿವಾಹ ಸಂಬಂಧ ಬೆಳೆಸುವುದಿಲ್ಲ. ಕಾರಣವೆಂದರೆ ಮರಾಠಿಗರು ಕ್ಷತ್ರಿಯರಾದರೆ ಮರಾಲೆಗಳು ದರ್ಜಿಗಳಾಗಿದ್ದಾರೆ. ಆದರೂ ಇವರ ಭಾಷೆ, ಆಚಾರ-ವಿಚಾರ, ಹಬ್ಬ ಹರಿದಿನಗಳಲ್ಲಿ ಸಾಕಷ್ಟು ಸಾಮ್ಯಗಳಿವೆ. ಮರಾಲೆಗಳು ಮರಗೆಮ್ಮ ದೇವಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಮರಾಲೆಗಳಲ್ಲಿ ಸಾಕಷ್ಟು ಮಂದಿ ದರ್ಜಿ ಕೆಲಸವನ್ನು ಮಾಡಿದರೆ ಮಿಕ್ಕ ಕೆಲವರು ವ್ಯವಸಾಯ ಮತ್ತು ವ್ಯಾಪಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ವ್ಯವಸಾಯ

ಭಾರತ ಒಂದು ಗ್ರಾಮ ಸಮಾಜವಾಗಿದ್ದು ಶೇ. ೭೫ರಷ್ಟು ಜನ ತಮ್ಮ ಜೀವನಕ್ಕಾಗಿ ವ್ಯವಸಾಯವನ್ನೆ ಅವಲಂಬಿಸಿದ್ದಾರೆ. ಹಾಗೆಯೇ ರೈತ ದೇಶದ ಬೆನ್ನೆಲುಬು ಸಹಾ ಆಗಿದ್ದಾನೆ. ಗಾವಡಗೆರೆಯಲ್ಲಿನ ಶೇ. ೭೫ ಭಾಗದಷ್ಟು ಜನ ಕೃಷಿಯಿಂದ ತಮ್ಮ ಜೀವನ ನಡೆಸುತ್ತಿದ್ದಾರೆ. ಇಲ್ಲಿನ ಪ್ರಮುಖ ಬೆಳೆಗಳೆಂದರೆ ಹತ್ತಿ, ತಂಬಾಕು, ಕಡಲೆಕಾಯಿ, ರಾಗಿ, ಹಲಸಂದೆ, ಎಳ್ಳು, ಅವರೆ, ಪ್ರಮುಖವಾದವುಗಳಾಗಿವೆ.

ತಂಬಾಕು

ಗಾವಡಗೆರೆಯಲ್ಲಿ ತಂಬಾಕು ಬೆಳೆಯನ್ನು ವಾಣಿಜ್ಯ ಬೆಳೆಯಾಗಿ ಬೆಳೆಯಲಾಗುತ್ತದೆ. ಗಾವಡಗೆರೆಯಿಂದ ೧೦ ಕಿ.ಮೀ. ದೂರದಲ್ಲಿ ಕಟ್ಟೆ ಮಳಲವಾಡಿಯಲ್ಲಿ ಡಿ.ದೇವರಾಜ ಅರಸು ತಂಬಾಕು ಹರಾಜು ಮಂಡಳಿ ಇರುವುದರಿಂದ ರೈತರಿಗೆ ಆರ್ಥಿಕವಾಗಿ ಇದರಿಂದ ಸಾಕಷ್ಟು ಲಾಭ ಇದೆ. ಗಾವಡಗೆರೆಯಲ್ಲಿ ಮುಖ್ಯವಾಗಿ ವರ್ಜಿನಿಯಾ ತಳಿಯ ತಂಬಾಕನ್ನು ಬೆಳೆಯಲಾಗುತ್ತದೆ. ವಿಶ್ವ ಮಾರುಕಟ್ಟೆಯಲ್ಲಿ ಈ ತಂಬಾಕಿಗೆ ಹೆಚ್ಚಿನ ಬೇಡಿಕೆ ಇದೆ. ಈ ತಂಬಾಕು ಬೆಳೆಯಲು ಹೆಚ್ಚಿನ ಶ್ರಮ ವಹಿಸಬೇಕಾಗುತ್ತದೆ. ಮೊದಲು ಮಾರ್ಚ್ ತಿಂಗಳಲ್ಲಿ ಸಸಿ ಮಡಿಗಳನ್ನು ಮಾಡಿ ಬೀಜ ಹಾಕಿ ನಂತರ ೩ ತಿಂಗಳು ಬಿಟ್ಟು ಆ ಸಸಿಗಳನ್ನು ನಾಟಿ ಮಾಡಲಾಗುತ್ತದೆ. ಅದಕ್ಕೆ ವಿಶೇಷವಾಗಿ ಗೊಬ್ಬರ ನೀಡಿ ಪೋಷಣೆ ಮಾಡಲಾಗುತ್ತದೆ. ಸಸಿ ಬೆಳೆದು ತಂಬಾಕಿನ ಎಲೆ ಹಸಿರು ಬಣ್ಣದಿಂದ ಹಳದಿ ಬಣ್ಣಕ್ಕೆ ತಿರುಗಿದಾಗ ಆ ಎಲೆಯನ್ನು ಶೇಖರಿಸಿ ದೊಡ್ಡ ಕೋಲುಗಳಿಗೆ ಸುತ್ತಲಿ ದಾರದಿಂದ ಹೂವು ಪೋಣಿಸುವಂತೆ ಪೋಣಿಸಿ ಇದನ್ನು ಬೇಯಿಸಿ ಹದ ಮಾಡಲು ವಿಶೇಷವಾಗಿ ಕಟ್ಟಿರುವ ಬ್ಯಾರನ್‌ಗಳಿಗೆ ಏರಿಸಲಾಗುತ್ತದೆ. ನಂತರ ಒಲೆಗಳಿಂದ ಸೌದೆ ಹಾಕಿ ಬೆಂಕಿ ಹಚ್ಚಿ ಶಾಖ ಕೊಟ್ಟು ಎಲೆಯನ್ನು ಬೇಯಿಸಿ ಒಂದೆಡೆ ಶೇಖರಿಸಿದ ನಂತರ ವಿವಿಧ ವರ್ಗಗಳಾಗಿ ವಿಂಗಡಿಸಿ ಬೇಲ್ ಮಾಡಿ ಮಾರುಕಟ್ಟೆಗೆ ಬಿಡಲಾಗುತ್ತದೆ. ಒಂದು ಕೆ.ಜಿ.

ಉತ್ತಮ ತಂಬಾಕಿಗೆ ೬೫ ರಿಂದ ೭೫ರೂ. ಬೆಲೆ ನೀಡಿ ಮಂಡಳಿ ಖರೀದಿ ಮಾಡುತ್ತದೆ. ಈ ಬೆಳೆಗೆ ಯತೇಚ್ಛ ಪ್ರಮಾಣದಲ್ಲಿ ಸೌದೆ ಬೇಕಾಗಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಅರಣ್ಯ ನಾಶವಾಗುತ್ತಿದೆ.

ಪಶುಸಂಗೋಪನೆ

ಗಾವಡಗೆರೆಯಲ್ಲಿ ಸಾಕಷ್ಟು ಮಂದಿ ಪಶುಸಂಗೋಪನೆಯನ್ನು ತಮ್ಮ ಕಸುಬನ್ನಾಗಿ ಆಧಾರವಾಗಿ ಮಾಡಿಕೊಂಡಿದ್ದಾರೆ. ಗಾವಡಗೆರೆಯಲ್ಲಿ ಹಾಲು ಉತ್ಪಾದಕರ ಸಂಘದ ಸುವ್ಯಸ್ಥಿತ ಕಟ್ಟಡವನ್ನು ಕಟ್ಟಲಾಗಿದೆ. ಗಾವಡಗೆರೆ ಮಾತ್ರವಲ್ಲದೆ ಸುತ್ತಮುತ್ತಲಿನ ಗ್ರಾಮಸ್ಥರು ಇಲ್ಲಿಗೆ ಹಾಲು ಮಾರಾಟ ಮಾಡುತ್ತಾರೆ. ಪಶುಸಂಗೋಪನೆ ಗ್ರಾಮೀಣ ನಿರುದ್ಯೋಗಿ ಯುವಕರಿಗೆ ಒಂದು ವರದಾನವಾಗಿದೆ. ಇತ್ತೀಚೆಗೆ ಪಶುಸಂಗೋಪನೆ ಒಂದು ಆರ್ಥಿಕ ಕ್ಷೇತ್ರವಾಗಿ ಕೆಲವು ಹಳ್ಳಿಗಳಲ್ಲಿ ಪರಿಣಮಿಸುತ್ತಿದೆ.

ಶಿಕ್ಷಣ

ಗಾವಡಗೆರೆಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸವಲತ್ತು ಹೊಂದಿರುವುದರಿಂದ ಶೈಕ್ಷಣಿಕವಾಗಿ ಮುಂದುವರೆದಿದೆ. ಸರ್ಕಾರಿ ಮಾಧ್ಯಮಿಕ ಶಾಲೆ, ಟಿ.ಎಸ್.ಸುಬ್ಬರಾವ್ ಸರ್ಕಾರಿ ಸಂಯುಕ್ತ ಪದವಿಪೂರ್ವ ಕಾಲೇಜು, ಶ್ರೀ ನಂಜುಂಡ ಶಿವಯೋಗಿಗಳ ಪ್ರೌಢಶಾಲೆ, ಕೈಗಾರಿಕಾ ತರಬೇತಿ ಸಂಸ್ಥೆಗಳು ಇಲ್ಲಿರುವ ಶಿಕ್ಷಣ ಸಂಸ್ಥೆಗಳಾಗಿವೆ. ಪದವಿ ಹಂತಕ್ಕೆ ತಾಲ್ಲೂಕು ಕೇಂದ್ರಗಳಾದ ಕೆ.ಆರ್.ನಗರ ಮತ್ತು ಹುಣಸೂರು ಪಟ್ಟಣಕ್ಕೆ ಹೋಗಿ ವಿದ್ಯಾಭ್ಯಾಸ ಪಡೆಯಬೇಕು. ಗ್ರಾಮದಲ್ಲಿ ಸಾಕಷ್ಟು ಮಂದಿ ವಿದ್ಯಾವಂತರಾಗಿದ್ದು, ಪದವೀಧರರು ಸಾಕಷ್ಟಿದ್ದಾರೆ.

ಧ್ಯಾನ ತಪಸ್ಸುಗಳ ಮಹತ್ವಗಳನ್ನರಿಯಲು ಶಾಶ್ವತ ಮೌಲ್ಯಗಳ ಸ್ವರೂಪವನ್ನು ಮನದಟ್ಟು ಮಾಡಿಕೊಳ್ಳಲು ಹಬ್ಬ ಹರಿದಿನಗಳು ನಿಮಿತ್ತವಾದವು. ಮಾನವರ ಅಸುರೀ ಗುಣಗಳ ಸ್ವಚ್ಛಂದ ವರ್ತನೆಗೆ ಅವು ನಿಯಂತ್ರಣ ಯಂತ್ರಗಳಾದದ್ದು ಉಂಟು. ಒಟ್ಟಿನಲ್ಲಿ ಅವು ತಾತ್ಕಾಲಿಕವಾಗಿದ್ದರೂ ಮಾನವನ ಯಾಂತ್ರಿಕ ಜೀವನಕ್ಕೆ ರಸದರ್ಶನ ಮಾಡಿಸುವ ಅವನ ಅವಿರತವಾದ ದುಡಿಮೆಗೆ ವಿಶ್ರಾಂತಿ ನೀಡುವ ಅವನ ದಿನ-ದಿನದ ಗೋಳಿಗೆ ವಿರಾಮವೇರ್ಪಡಿಸುವ ಒಟ್ಟಿನಲ್ಲಿ ಅವನ ಮನಸ್ಸಿಗೆ ಶಾಂತಿ ಸಮಾಧಾನಗಳನ್ನೊದಗಿಸುವ ಅಮೂಲ್ಯ ಸಾಧನಗಳಾಗಿವೆ.

ಈ ಸಂದರ್ಭದಲ್ಲಿ ಒಬ್ಬರನ್ನೊಬ್ಬರು ಕಾಣುವ ಕಾತುರತೆ ಹಬ್ಬಕ್ಕಿಂತ ಹೆಚ್ಚು ಮಹತ್ವದ್ದಾದರೂ ಹಬ್ಬ ಅಂಥದೊಂದು ಶುಭ ಸಂದರ್ಭವನ್ನು ತಂದು ಕೊಡುತ್ತದೆ. ಹಬ್ಬಗಳ ಮೂಲೋದ್ದೇಶಗಳೇನೇ ಇರಲಿ. ಅವುಗಳ ಸಾಂಸ್ಕೃತಿಕ ಪ್ರಯೋಜನವನ್ನಾಗಲಿ ಸಾಮಾಜಿಕ ಸಾರ್ಥಕತೆಯನ್ನಾಗಲೀ ಅಲ್ಲಗಳೆಯುವಂತಿಲ್ಲ. ಮನುಷ್ಯ ಚೇತನ ಊರ್ಧ್ವಮುಖವಾಗಲು ಅವನ ಶೀಲ ವರ್ತನೆಗಳು ಉತ್ತಮಗೊಳ್ಳಲು, ಸಮಾಜದಲ್ಲಿ ಐಕ್ಯ ಭಾವನೆ ಕುದುರಲು, ನಾಡಿನಲ್ಲಿ ಶಾಂತಿ ನೆಲೆಗೊಳ್ಳಲು ದೇಶಭಕ್ತಿ ಹುಟ್ಟಿಸಲು ಅವು ಅತ್ಯಾವಶ್ಯಕವಾಗಿವೆ. ಜೊತೆಗೆ ಹಬ್ಬಗಳು ಅವು ದುಡಿಮೆಯ ಶ್ರಮವನ್ನು ಬಾಳಿನ ಬೇಸರನ್ನು ಪರಿಹರಿಸಿ ಮನುಷ್ಯನ ಮನಸ್ಸಿಗೆ ಆನಂದವನ್ನುಂಟು ಮಾಡುವ ಸಾಧನಗಳು ಆಗಿವೆ. ಹಬ್ಬ ಮಾಡುವುದರಿಂದ ಮನೆಮಠಗಳು ಸ್ವಚ್ಛಗೊಳ್ಳುತ್ತವೆ. ''ಧಯ್ಯ ದೇವರು ಮನೆ ಸೇರಾಕಿಲ್ಲ ಗೆಯ್ಯುಕ್ಕಾದ್ರೂ ಕೈ ಕಾಲ ಗಟ್ಟಿ ಬ್ಯಾಡ್ವ ದೇವ್ರು ಕಿತ್ಕಂಬುಡ್ತಾನೆ'' ಸ್ವರ್ಗದಲ್ಲಿ ನಮ್ಮ ಹರೀಕರು ಹೀಗೆ ಇವೆಲ್ಲಾ ಬಂದು ಪೀಡಿಸುತ್ತವೆ ಎಂದು ಒಂದು ಬಗೆಯ ಭೀತಿಯೂ ಕಾರಣವಾಗುತ್ತದೆ. ಮುಖ್ಯವಾಗಿ ಈ ಗ್ರಾಮದಲ್ಲಿ ಆಚರಿಸುವ ಹಬ್ಬಗಳೆಂದರೆ–ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ನಾಗರಪಂಚಮಿ, ಷಷ್ಠಿ, ಆಯುಧಪೂಜೆ, ದೀಪಾವಳಿ ಮುಂತಾದವುಗಳು.

ಚಂದ್ರಮಾನ ಯುಗಾದಿ

ವಿಂಧ್ಯ ಪರ್ವತದ ದಕ್ಷಿಣಕ್ಕಿರುವ ಜನರು ಮುಖ್ಯವಾಗಿ ಕರ್ನಾಟಕ ಮತ್ತು ಆಂಧ್ರದವರು ಆಚರಿಸುವ ಯುಗಾದಿ ಚಂದ್ರಮಾನ ವರ್ಷದ ಮೊದಲನೆಯ ದಿನ. ಚಂದ್ರನ ಗತಿಗೆ ಅನುಗುಣವಾದ ಕಾಲಗಣನೆಗೆ ಚಂದ್ರಮಾನವೆಂದು ಹೆಸರು. ಭಾರತದ ಕೆಲವು ಭಾಗದ ಜನರು ಸೌರಮಾನ ಯುಗಾದಿಯನ್ನು ಆಚರಿಸುತ್ತಾರೆ. ಚಂದ್ರ ಮೂಡದ ದಿವಸ ಅಮವಾಸ್ಯೆ, ಎರಡು ಅಮಾವಾಸ್ಯೆಗಳ ನಡುವೆ ಒಂದು ಚಂದ್ರಮಾನ ಮಾಸ, ಸಾಮಾನ್ಯವಾಗಿ ೩೦ ದಿನಗಳಿಗೊಮ್ಮೆ ಅಮವಾಸ್ಯೆ ಬರುತ್ತದೆ. ಚಂದ್ರಮಾನ ವರ್ಷದ ೧೨ ತಿಂಗಳುಗಳ ಪೈಕಿ ಮೊದಲನೆಯದಾದ ಚೈತ್ರ ಶುಲ್ಕ ಪಕ್ಷದ ಪಾಡ್ಯವ ದಿನದಂದು ಚಂದ್ರಮಾನ ಯುಗಾದಿಯನ್ನು ಆಚರಿಸಲಾಗುತ್ತದೆ.

ಯುಗಾದಿ ಮೊಟ್ಟಮೊದಲ ಹಬ್ಬ. ಯುಗದ ಆದಿ ಹಿಂದೂ ಪಂಚಾಗದ ಪ್ರಕಾರ ಹೊಸ ವರ್ಷದ ಆರಂಭ. ಈ ಹಬ್ಬ ಹೊಸ ಸಂವತ್ಸರವನ್ನು ತರುತ್ತದೆ. ಆದುದರಿಂದ ಈ ಹಬ್ಬವನ್ನು ಸಡಗರದಿಂದ ಆಚರಿಸುವರು. ಈ ದಿನ ಸಂತೋಷವಾಗಿದ್ದರೆ, ವರ್ಷವಿಡೀ ಸಂತೋಷ ನೆಲೆಸುವುದೆಂದು ನಂಬಿಕೆ. ಈ ಹಬ್ಬದ ಸಂದರ್ಭದಲ್ಲಿ ಮರಗಿಡಗಳೆಲ್ಲವೂ ಚಿಗುರುತ್ತವೆ. ಎಲ್ಲೆಡೆಯೂ ಮಾವು, ಬೇವು, ಮರಗಳು ಹೂ ಬಿಟ್ಟು ಕಂಪನ್ನು ಸೂಸುತ್ತಿರುತ್ತವೆ.

ಹಬ್ಬದ ಹಿಂದಿನ ದಿನವೇ ಜನರೆಲ್ಲರೂ ಮಾವಿನ ತೋಪಿಗೆ ಹೋಗಿ, ಮಾವಿನ ಹಾಗೂ ಬೇವಿನ ಸೊಪ್ಪುಗಳನ್ನು ತರುತ್ತಾರೆ. ಮರುದಿನ ಬೆಳಿಗ್ಗೆ ಎಣ್ಣೆ ಅಭ್ಯಂಜನ ಮಾಡಿ, ಹೊಸ ಬಟ್ಟೆ ಧರಿಸಿ ದೇವರಿಗೆ ಕೈ ಮುಗಿದು ಬೇವು ಬೆಲ್ಲ ಸೇವಿಸುವುದು ವಾಡಿಕೆ. ಇದು ಬಾಳಿನ ಸಿಹಿ ಕಹಿಗಳನ್ನು ಸಮನಾಗಿ ಹಂಚಿಕೊಳ್ಳುವಂತೆ ಶಕ್ತಿ ನೀಡಲೆಂದು ದೇವರನ್ನು ಪೂಜಿಸುತ್ತಾರೆ. ಬೇವಿನಲ್ಲಿ ರೋಗ ನಿವಾರಕ ಅಂಶಗಳಿರುವುದರಿಂದಲೂ ಇದನ್ನು ಸೇವಿಸುವ ಸಂಪ್ರದಾಯ ಬಂದಿರಬಹುದು ಎಂಬ ಅಭಿಪ್ರಾಯವಿದೆ. ಶಿಷ್ಟರು ಹೀಗೆ ಆಚರಿಸಿದರೆ ಜನಪದರು ಬೆಳಿಗ್ಗೆ ಎದ್ದು ಸ್ನಾನ ಮಾಡುತ್ತಾರೆ. ಎಣ್ಣೆ ಸ್ನಾನ ಎಂಬುದು ಅವರ ಪಾಲಿಗೆ ಬಂದಿಲ್ಲ. ಆದರೆ ಹೊಸ ಬಟ್ಟೆಯನ್ನು ತೊಡುತ್ತಾರೆ. ಅಂದು ಕೆಲವರ ಮನೆಗಳಲ್ಲಿ ನೇಗಿಲಿನ ಹೊಸ ಸಾಧನಗಳನ್ನು ಇಟ್ಟು ಪೂಜೆ ಮಾಡುತ್ತಾರೆ.

ಯುಗಾದಿ ಪ್ರಶಸ್ತ ದಿನವೆಂದು ಹೊನ್ನಾರು ಕಟ್ಟುವ ಸಂಪ್ರದಾಯವಿದೆ. ಹೊನ್ನಾರು ಎಂದರೆ ಶುಭದ ಆರು, ಬೇಸಾಯದ ಕೆಲಸವನ್ನು ಹೊಸ ವರ್ಷವೆಂದೆ ನವೀಕರಿಸಿಕೊಳ್ಳುವ ಪರಿ ಇದಾಗಿದೆ.

ಪಂಚಾಂಗ ಶ್ರವಣ ಮಾಡಿ ಆ ವರ್ಷ ಮಳೆ-ಬೆಳೆಗಳ ಫಲಗಳನ್ನು ತಿಳಿಸಲಾಗುತ್ತದೆ. ಯುಗಾದಿಯಲ್ಲಿ ಚಂದ್ರನನ್ನು ನೋಡಿದರೆ ಪುಣ್ಯಕರವೆಂಬ ನಂಬಿಕೆಯಿದೆ. ಚಂದ್ರನನ್ನು ನೋಡಿ ಮಳೆ-ಬೆಳೆಗಳನ್ನು ತಿಳಿದುಕೊಳ್ಳಲಾಗುತ್ತದೆ. ಚಂದ್ರದರ್ಶನ ಮಾಡುವಾಗ ಚಂದ್ರ ಸಮವಾಗಿದ್ದರೆ ಎಲ್ಲಾ ಕಡೆಯೂ ಸಮೃದ್ಧವಾಗಿ ಮಳೆಯಾಗುತ್ತದೆ ಎಂದೂ ಸ್ವಲ್ಪ ಓರೆಯಾಗಿದ್ದರೆ, ಯಾವ ಕಡೆ ಎತ್ತರವಾಗಿರುತ್ತದೆ ಆ ಕಡೆ ಮಳೆಯಾಗುತ್ತದೆ ಎಂಬ ನಂಬಿಕೆಯೂ ಇದೆ. ಈ ಹಬ್ಬವು ನವದಂಪತಿಗಳಿಗಂತು ಹೊಸ ವರುಷ ವಿಶೇಷವಾಗಿರುತ್ತದೆ. ಈ ಕಾಲದಲ್ಲಿ ಗಂಡು-ಹೆಣ್ಣುಗಳಿಗೆ ಕಂಕಣ ಬಲ ಕೂಡಿ ಬಂದು ಹೊಸ ವರ್ಷದ ಆಗಮನದಂತೆ ಹೊಸ ಹೊಸ ಬಾಂಧವ್ಯ, ಬೆಸುಗೆ, ಆರಂಭವಾಗುತ್ತದೆ. ವಿವಾಹಗಳು ನೆರವೇರುತ್ತವೆ.

ಯುಗಾದಿಯಂದು ವಿಶೇಷವಾಗಿ ಹೋಳಿಗೆ ಹುಳಿ ಅನ್ನ ಪಾಯಸ ಮುಂತಾದ ವಿವಿಧ ಭಕ್ಷ್ಯ ಭೋಜನಗಳನ್ನು ತಯಾರಿಸಿ ಎಲ್ಲರೂ ಒಂದೆಡೆ ಕುಳಿತು ಸಂತೋಷದಿಂದ ಊಟ ಮಾಡುತ್ತಾರೆ. ಕೆಲವರು ದೇವಸ್ಥಾನಗಳಿಗೆ ಹೋಗಿ ಪೂಜೆ ಮಾಡಿಕೊಂಡು ಬರುತ್ತಾರೆ. ಹಬ್ಬದ ದಿನ ಸಿಹಿ ಅಡುಗೆ ಸೇವಿಸಿದರೂ ಮರು ದಿವಸ "ವರ್ಷದೊಡಕು" ಎಂದು ಆಚರಿಸುತ್ತಾರೆ. ದೇವರ ಹೆಸರಿನಲ್ಲಿ ಪ್ರಾಣಿ ಬಲಿಕೊಟ್ಟು ಮಾಂಸದ ಊಟವನ್ನು ತಯಾರಿಸಿ ಸತ್ತ ಹಿರಿಯರಿಗೆ ಎಡೆಯಿಕ್ಕುವ ಪದ್ಧತಿಯಿದೆ. ಮನೆಯಲ್ಲಿ ನೆಂಟರಿಷ್ಟರೂ ಸೇರಿ ಸಂತೋಷದಿಂದ ಊಟ ಮಾಡುತ್ತಾರೆ. ವಿಶೇಷ ಊಟದೊಂದಿಗೆ ವಿನೋದದ ಆಟಗಳೂ ಸ್ಪರ್ಧೆಗಳೂ ನಡೆಯುತ್ತವೆ.

ಗೌರಿಗಣೇಶ ಹಬ್ಬ

ಶ್ರಾವಣ ಮಾಸ ಹಬ್ಬಗಳ ಆಗಮನದ ಸಂಕೇತ ಹಬ್ಬಗಳ ಸಾಲೇ ಒಟ್ಟೊಟ್ಟಾಗಿ ಬರುತ್ತವೆ. ಮಂಗಳಗೌರಿ ಪೂಜೆ ಮುಂತಾದವು ಬರುತ್ತವೆ. ಒಟ್ಟನಲ್ಲಿ ಗೌರಿಯನ್ನು ಪೂಜಿಸದ ಹೆಣ್ಣು ಮಕ್ಕಳೇ ಇಲ್ಲ. ಗೌರಿಯು ಮನೆಮಗಳೆಂದು ವರ್ಷಕ್ಕೊಮ್ಮೆ ಬರುವಳೆಂದು ಆದರದಿಂದ ಹೆಣ್ಣು ಮಕ್ಕಳನ್ನು ಕರೆಸಿ, ಹೊಸ ಬಟ್ಟೆ, ಅರಿಶಿನ ಕುಂಕುಮ ಮೊದಲಾದ ಮಂಗಳ ದ್ರವ್ಯಗಳನ್ನೆಲ್ಲಾ ತೊಡಿಸಿ ಸಂತೋಷದಿಂದ ಗೌರಿಹಬ್ಬ ಆಚರಿಸುತ್ತಾರೆ. ಈ ಹಬ್ಬಕ್ಕೆ ವಿಶೇಷವಾದ ಮಹತ್ವವನ್ನು ನೀಡುತ್ತಾರೆ. ಏಕೆಂದರೆ ಈ ಹಬ್ಬಕ್ಕೆ ಪೌರಾಣಿಕವಾದ ಕಾರಣವಿದೆ. ಗೌರಿಹಬ್ಬಕ್ಕೆಂದು ಸಾಮಾನ್ಯವಾಗಿ ಪ್ರತಿ ಮನೆಯಲ್ಲೂ ಹೊಸ ಬಟ್ಟೆಯನ್ನು ಹೆಣ್ಣು ಮಕ್ಕಳಿಗೆ ತರುತ್ತಾರೆ. ಸೀರೆಯನ್ನು ತರಲಾಗದವರು ರವಿಕೆ ಬಟ್ಟೆಯನ್ನಾದರೂ ತಂದು ಉಡುಗೊರೆಯಾಗಿ ನೀಡುತ್ತಾರೆ. ಅದರಲ್ಲೂ ಆ ವರ್ಷ ಮದುವೆಯಾದ ಹೆಣ್ಣು ಮಗಳಿದ್ದರೆ ಗೌರಿ ಹಬ್ಬ ಹೆಚ್ಚು ವಿಶೇಷವಾಗಿರುತ್ತದೆ. ಪೂಜೆ ಮಾಡಿಸುವುದು, ಬಾಗಿನ ಕೊಡಿಸುವುದು ಆಕೆಯಿಂದಲೇ ಭಾದ್ರಪದ ಮಾಸದ ಅಮಾವಾಸ್ಯೆಯ ನಂತರ ೩ನೇ ದಿನಕ್ಕೆ ಗೌರಿಹಬ್ಬ ಬರುತ್ತದೆ. ಹಬ್ಬದಲ್ಲಿ ಹೆಣ್ಣು ತೌರಿಗೆ ಹೋಗಲು ಹೆಚ್ಚು ಉತ್ಸಾಹವಿರುತ್ತದೆ. ದಿನವಿಡೀ ದುಡಿದ ದುಡಿಮೆಯಿಂದ ಅವಳು ರೋಸಿ ಹೋಗಿ ಗೌರಿ ಹಬ್ಬ ಎಂದಿಗೆ ಬಂದೀತು ಎಂದು ದಿನಗಳನ್ನು ಎಣಿಸುತ್ತಿರುತ್ತಾಳೆ. ಆಗಲಾದರೂ ತನ್ನ ಗಂಡ ತೌರಿಗೆ ಕಳುಹಿಸುತ್ತಾನೆ ಎಂಬ ಭರವಸೆ ಬೇರೂರಿರುತ್ತದೆ. ನಾಲ್ಕು ದಿನ ತೌರಿನಲ್ಲಿ ಹಾಯಾಗಿ ಇದ್ದು ಬರಬಹುದು ಎಂಬ ಇಚ್ಛೆ ಹೆಣ್ಣು ಮಕ್ಕಳಿಗೆ ಇರುತ್ತದೆ.

ಗೌರಿ ವಿಗ್ರಹವನ್ನು ಪೂಜೆಗಿಟ್ಟು ಪೂಜೆ ಮಾಡುವ ಪದ್ಧತಿ ಎಲ್ಲಾ ಕಡೆಯಲ್ಲೂ ಇದೆ, ಕೆಲವು ಊರುಗಳಲ್ಲಿ ವಿಶೇಷತೆಯಿಂದ ಗೌರಿಯನ್ನು ತಂದು ಪೂಜಿಸುತ್ತಾರೆ. ಸಾಮಾನ್ಯವಾಗಿ ಗೌರಮ್ಮನನ್ನು ತರುವವರು ಗಂಡಸರು. ಗೌರಿಯನ್ನು ತರುವ ದಿವಸ ಅವರು ಮನೆಯಲ್ಲಿ ಸ್ನಾನ ಮಾಡಿ ದೇವರ ಪೂಜಾ ಸಾಮಗ್ರಿ ತೆಗೆದುಕೊಂಡು ಕೆರೆಗೆ ಹೋಗುತ್ತಾರೆ. ಅಲ್ಲಿ ಮತ್ತೊಮ್ಮೆ ನೀರಿನಲ್ಲಿ ಒಂದು ಅರಿಶಿನದ ಬಟ್ಟೆಯನ್ನು ಎಡಗೈಯಲ್ಲಿ ಹಿಡಿದುಕೊಂಡು ಮುಳುಗಿ ಮಣ್ಣನ್ನು ತೆಗೆದುಕೊಂಡು ಬಂದು ಅದರಲ್ಲೇನಿದೆ ಎಂದು ನೋಡುತ್ತಾರೆ. ಮಣ್ಣಿನಲ್ಲೆ ಬಳೆ ಚೂರು ಸಿಕ್ಕಿದರೆ, ಗೌರಮ್ಮ ಬಳೆ ತಂದಳೆಂದೂ ಕಾಗೆ ಬಂಗಾರ ಸಿಕ್ಕಿದರೆ ಬೆಳ್ಳಿ ತಂದಳೆಂದು ನುಣೂಪಾದ ಮಣ್ಣು ಸಿಕ್ಕಿದರೆ ಅರಿಶಿನ ತಂದಳೆಂದೂ, ಕಡ್ಡಿ ಚೂರು ಸಿಕ್ಕಿದರೆ ಬರಲು ತಂದಲೆಂದೂ ತಿಳಿಯುತ್ತಾರೆ. ಕಡ್ಡಿ ಚೂರು ಸಿಕ್ಕಿದರೆ ಅಮಂಗಳವೆಂದು ಭಾವಿಸುತ್ತಾರೆ.

ಗೌರಮ್ಮನಿಗೆ ಪೂಜೆ ಆರತಿ ಮಾಡಿದ ನಂತರ 'ಗೌರಿದಾರ' ಎಂದು ಬಲಗೈಗೆ ದಾರದ ಎಳೆಯನ್ನು ಕಟ್ಟಿಸಿಕೊಳ್ಳುತ್ತಾರೆ. ಎಲೆ ಅಡಿಕೆ, ತೆಂಗಿನಕಾಯಿ, ಹಣ್ಣುಗಳನ್ನು ಇಟ್ಟು ದಕ್ಷಿಣೆ ಸಹಿತ ಪುರೋಹಿತರಿಗೆ ಕೊಟ್ಟು ಅವರಿಂದ ಆಶೀರ್ವಾದ ಪಡೆಯುತ್ತಾರೆ. ಗೌರಮ್ಮನಿಗೆ ಆರತಿ ಮಾಡುವಾಗ ಹಾಡು ಹೇಳುವವರು ಹಾಡು ಹೇಳುತ್ತಾರೆ. ಪೂಜೆ ಮುಗಿದ ಮೇಲೆ ಒಂದು ಕಡೆ ಕುಳಿತುಕೊಂಡು ಎಲೆ, ಅಡಿಕೆ, ಹಣ್ಣುಗಳನ್ನು ಇಟ್ಟುಕೊಂಡು ಅಲ್ಲಿ ಬಂದಿರುವ ಮುತ್ತೈದೆಯರಿಗೆ ಕೊಟ್ಟು, ಚಿಕ್ಕವರು ದೊಡ್ಡವರಿಂದ ಆಶೀರ್ವಾದ ಪಡೆಯುತ್ತಾರೆ. ಕೆಲವರು ತಮ್ಮ ಮನೆಯಲ್ಲಿಯೇ ಗೌರಿಯನ್ನು ಕೂರಿಸಿ ಪೂಜೆ ಮಾಡುತ್ತಾರೆ. ಇಚ್ಛೆಯುಳ್ಳವರು ಬಾಗಿನ ಕೊಡುತ್ತಾರೆ. ಗೌರಿ ಹಬ್ಬದಂದು ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ದಿನ ನಿತ್ಯದ ಅಡಿಗೆ ಜೊತೆಗೆ ಒಬ್ಬಟ್ಟು, ಹುಳಿ ಅನ್ನ ಮಾಡುತ್ತಾರೆ.

ಗೌರಿ ಹಬ್ಬ ಬಂದಿತೆಂದರೆ ಚೌತಿಯೆಂದು ಗಣೇಶನ ಹಬ್ಬವೂ ಬಂದಿತೆಂದರ್ಥ. ಕೆಲವು ಸಾರಿ ಗೌರಿ ಗಣೇಶನ ಹಬ್ಬಗಳು ಒಂದೇ ದಿನ ಬರುತ್ತದೆ. ಕೆಲವು ಸಲ ಗೌರಿ ಹಬ್ಬ ಆದ ಮಾರನೇ ದಿನವೇ ಗಣೇಶನ ಹಬ್ಬವಿರುತ್ತದೆ. ಗಣೇಶನ ಹಬ್ಬವನ್ನು ದೇಶಾದ್ಯಂತ ವೈಭವದಿಂದ ಆಚರಿಸುತ್ತಾರೆ. ಊರಿನ ಬೀದಿ ಬೀದಿಗಳಲ್ಲಿ ಗಣೇಶನನ್ನು ಕೂರಿಸುತ್ತಾರೆ. ಕೆಲವರು, ತಮ್ಮ ಮನೆಯಲ್ಲೇ ಗಣಪತಿ ಕೂರಿಸಿ ಪೂಜಿಸುತ್ತಾರೆ. ಗಣಪತಿಗೆ ಪ್ರಿಯವಾದ ಮೋದಕ ಪದಾರ್ಥಗಳನ್ನು ಮಾಡಿ ದೇವರ ಪೂಜೆಗೆ ನೈವೇದ್ಯಕ್ಕೆ ಇಡುತ್ತಾರೆ. ಮನೆಯಲ್ಲಿ ಗಣಪತಿಯನ್ನು ಕೂರಿಸಿದ್ದರೆ ಮೂರು ದಿವಸಕ್ಕೆ ವಿಸರ್ಜಿಸುತ್ತಾರೆ. ಬೀದಿ ಬೀದಿಗಳಲ್ಲಿ ಗಣಪತಿಯನ್ನು ಕೂರಿಸಿ, ಪ್ರತಿದಿನವೂ ಗಣಪತಿಗೆ ಆರತಿ ಮಾಡಿ ಪ್ರಸಾದ ವಿನಿಯೋಗ ಮಾಡುತ್ತಾರೆ.

ಗಣಪತಿಯನ್ನು ಕೂರಿಸುವ ಸ್ಥಳದಲ್ಲಿ ಪ್ರತಿದಿನವೂ ಮನರಂಜಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಗಣಪತಿಯನ್ನು ವಿಸರ್ಜಿಸುವ ದಿನ ವಿವಿಧ ಪುಷ್ಪ ಅಲಂಕಾರಗಳಿಂದ ಮತ್ತು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಿ ಬೀದಿ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಊರಿನ ಯುವಕರು ಮಕ್ಕಳು ಎಲ್ಲರೂ ಒಟ್ಟಾಗಿ ಸೇರಿ ವಿಸರ್ಜಿಸುತ್ತಾರೆ. ಗಣೇಶನ ಹಬ್ಬದ ದಿನ ಕಡೇ ಪಕ್ಷ ೫ ಗಣೇಶನ ವಿಗ್ರಹವನ್ನಾದರೂ ನೋಡಬೇಕು ಎಂಬ ನಂಬಿಕೆ ಇದೆ. ೧೦೧ ಗಣಪತಿಯನ್ನು ನೋಡಿ ಹರಕೆ ಹೊತ್ತರೆ ಇಷ್ಟಾರ್ಥ ಸಿದ್ಧಿಸುತ್ತದೆ ಎಂಬ ನಂಬಿಕೆಯೂ ಇದೆ. ವಿಘ್ನವಿನಾಶಕ ಗಣಪತಿಗೆ ಅಕ್ಷತೆ ಹಾಕಿ, ಇಪ್ಪತ್ತೊಂದು ನಮಸ್ಕಾರ ಹಾಕುವ ಪದ್ಧತಿ ರೂಢಿಯಲ್ಲಿದೆ.

ದೀಪಾವಳಿ

ಕಾರ್ತಿಕ ಮಾಸದಲ್ಲಿ ಬರುವ ಹಬ್ಬ ದೀಪಾವಳಿ ಕತ್ತಲಿನಿಂದ ಬೆಳಕಿಗೆ ಕರೆತರುವ ಹಬ್ಬ. ಬೆಳಕಿನ ಹಬ್ಬ, ನರಕ ಚತುರ್ದಶಿ, ಅಮಾವಾಸ್ಯೆ ದಿನ ಮತ್ತು ಬಲಿಪಾಡ್ಯಮಿ. ಈ ಮೂರು ದಿನಗಳಂದು ದೀಪಾವಳಿಯನ್ನು ಆಚರಿಸಲಾಗುತ್ತದೆ. ನಾರಾಯಣನು ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸಲು ಹತ್ತು ಅವತಾರಗಳನ್ನೆತ್ತಿದ್ದಾನೆ. ನರಕ ಚತುರ್ದಶಿಯೆಂದು ಶ್ರೀ ಕೃಷ್ಣ ಪರಮಾತ್ಮನು ನರಕಾಸುರನನ್ನು ಕೊಂದು ೧೬೦೦೦ ಜನರನ್ನು ಬಿಡುಗಡೆ ಮಾಡಿದನು. ಇದರ ಪ್ರತೀಕವಾಗಿ ನರಕ ಚತುರ್ದಶಿಯನ್ನು ಆಚರಿಸಲಾಗುತ್ತದೆ. ಅಂದು ಶ್ರೀ ಕೃಷ್ಣ ಪರಮಾತ್ಮನನ್ನು ಶ್ರದ್ಧಾ ಭಕ್ತಿಗಳಿಂದ ಪೂಜಿಸುತ್ತಾರೆ. ಅಮವಾಸ್ಯೆಯಂದು ನೀರು ತುಂಬುವ ಹಬ್ಬ, ಹಬ್ಬಕ್ಕೆ ಬೇಕಾದ ಸಿದ್ಧತೆ ಮಾಡುತ್ತಾರೆ. ಧನಲಕ್ಷ್ಮಿ ಪೂಜೆಯನ್ನು ಮಾಡುತ್ತಾರೆ. ಮನೆಯಲ್ಲಿ ಧನಲಕ್ಷ್ಮಿ ಪೂಜೆಯನ್ನು ವಿಶೇಷವಾಗಿ ಪೂಜಿಸುತ್ತಾರೆ. ಒಳ್ಳೆಯದಾಗಲೆಂದು ಕಾಮಧೇನುವನ್ನು ಪೂಜಿಸುತ್ತಾರೆ. ಹಸು ಕರುಗಳಿಗೆ ಬಣ್ಣ ಹಚ್ಚಿ ಸಿಂಗರಿಸಿ ಚೆಂಡೂವಿನ ಹಾರವನ್ನು ಹಾಕಿ ಅಲಂಕರಿಸುತ್ತಾರೆ. ಹಸುವಿಗೆ ಬೆಲ್ಲ ಅಕ್ಕಿ ಬಾಳೆ ಹಣ್ಣುಗಳನ್ನು ತಿನ್ನಿಸಿ ಉಳಿದುದನ್ನು ಪ್ರಸಾದವೆಂದು ಸ್ವೀಕರಿಸುತ್ತಾರೆ. ಬಲಿಪಾಢ್ಯಮಿ ಮುಂಜಾನೆ ಎಲ್ಲರೂ ಎಣ್ಣೆ ಸ್ನಾನ ಮಾಡಿ ಬಲಿಂದ್ರನನ್ನು ಪೂಜಿಸಿ ಗುರು-ಹಿರಿಯರಿಂದ ಆಶೀರ್ವಾದ ಪಡೆದುಕೊಳ್ಳುತ್ತಾರೆ. ನಾರಾಯಣ, ವಾಮನ ಅವತಾರ ತಾಳಿ ಅಹಂಕಾರಿಯಾಗಿದ್ದ ಬಲೀಂದ್ರ ದೊರೆಯನ್ನು ಮೂರು ಹೆಜ್ಜೆ ಇಡುವಷ್ಟು ಜಾಗ ಕೇಳಿ ಆಕಾಶ ಭೂಮಿಗಳೆರಡನ್ನು ಎರಡು ಪಾದಗಳಲ್ಲಿ ಮುಚ್ಚಿ ಮೂರನೇ ಹೆಜ್ಜೆಯನ್ನು ದೊರೆ ಬಲಿಚಕ್ರವರ್ತಿಯ ತಲೆಯ ಮೇಲಿಟ್ಟು ಅವನನ್ನು ಪಾತಾಳಕ್ಕೆ ತುಳಿದು ದುಷ್ಟರನ್ನು ಸಂಹರಿಸಿ ಶಿಷ್ಟರನ್ನು ರಕ್ಷಿಸಿದನು. ಇದರ ಸಂಕೇತವಾಗಿ ಬಲಿಪಾಡ್ಯಮಿಯನ್ನು ಆಚರಿಸಲಾಗುತ್ತದೆ. ಎಲ್ಲಾ ಕಷ್ಟ ಪರಿಹಾರವಾಗಲೆಂದು ಬೇಡಿ ಕತ್ತಲನ್ನು ಹೋಗಲಾಡಿಸಿ ಬೆಳಕನ್ನು ತರಲು ಎಲ್ಲರ ಮನೆಯಲ್ಲಿ ದೇವಾಲಯಗಳಲ್ಲಿ ಹಣತೆಗಳನ್ನು ಹಚ್ಚಲಾಗುತ್ತದೆ. ಬೀದಿ-ಬೀದಿಗಳಲ್ಲಿ ಕಿರಿಯರು ಹಿರಿಯರು, ಎಲ್ಲರೂ ಸೇರಿ ಪಟಾಕಿಗಳನ್ನು ಸಿಡಿಸಿ ಸಂಭ್ರಮದಿಂದ ದೀಪಾವಳಿಯನ್ನು ಆಚರಿಸುತ್ತಾರೆ. ಕಾರ್ತಿಕ ಮಾಸ ಮುಗಿಯುವವರೆಗೂ ಎಲ್ಲಾ ದೇವಾಲಯಗಳಲ್ಲೂ ದೀಪೋತ್ಸವ, ವಿಶೇಷ ಪೂಜೆಗಳು ನಡೆಯುತ್ತವೆ.

ಮಹಾ ಶಿವರಾತ್ರಿ

ಫೆಬ್ರವರಿ-ಮಾರ್ಚ್ ತಿಂಗಳಿನಲ್ಲಿ ಬರುವ ಹಬ್ಬ. ಇದು ಶಿವನನ್ನು ಪೂಜಿಸುವ ಹಬ್ಬವಾಗಿದೆ. ಈ ದಿನದಂದು ಶಿವನು ಇಡೀ ದಿನವೆಲ್ಲಾ ನಿದ್ರಿಸುವನೆಂದು ಆತನನ್ನು ಭಕ್ತರು ಕಾಯುವರೆಂದು ನಂಬಿಕೆ ಇದೆ. ಜೀವನ ಪೂರ್ತಿ ನಮ್ಮನ್ನು ರಕ್ಷಿಸುವ, ಕಾಪಾಡುವ

ಭಗವಂತನನ್ನು ಭಕ್ತರಾದ ಜನರು ಒಂದು ದಿನ ಅವನನಿದ್ರೆಗೆ ಅವಕಾಶ ಮಾಡಿಕೊಟ್ಟು ಅನ್ನ ಆಹಾರಗಳನ್ನು ತ್ಯಜಿಸಿ ಉಪವಾಸ ಮಾಡುವ ಮೂಲಕ ಅವನ ನಿದ್ರೆಗೆ, ವಿಶ್ರಾಂತಿಗೆ ಅನುವು ಮಾಡಿಕೊಡುವುದಾಗಿದೆ. ಈ ದಿನದಂದು ಮುಂಜಾನೆ ಎದ್ದು ಸ್ನಾನ ಮುಗಿಸಿ ಶಿವನನ್ನು ಬಿಲ್ವಪತ್ರೆ, ತುಂಬೆ ಹೂ, ವಿವಿಧ ಪುಷ್ಪಗಳನ್ನು ಹಾಕಿ ಭಕ್ತಿಯಿಂದ ಪೂಜಿಸುತ್ತಾರೆ.

ಈ ಹಬ್ಬವನ್ನು ವೀರಶೈವರು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಅವರು ಇಷ್ಟ ಲಿಂಗಕ್ಕೆ ಬಿಲ್ಪ ಪತ್ರೆ, ತುಂಬೆ ಹೂ ಹೀಗೆ ವಿವಿಧ ಪತ್ರಗಳಿಂದ ಪೂಜಿಸುತ್ತಾರೆ. ಶಿವನ ದೇವಾಲಯಗಳಿಗೆ ಹೋಗುತ್ತಾರೆ. ಇಡೀ ದಿನ ಉಪವಾಸ ಜಾಗರಣೆ ಇರುತ್ತಾರೆ. ಊರಿನಲ್ಲಿ ವಿವಿಧೆಡೆ ದೇವಸ್ಥಾನಗಳಲ್ಲಿ ಹರಿಕಥೆ, ಭಜನೆಗಳನ್ನು ಏರ್ಪಡಿಸಿರುತ್ತಾರೆ. ಅಲ್ಲಿಗೆ ಇಷ್ಟವಿರುವವರು ಹೋಗಿ ರಾತ್ರಿಯಿಡೀ ಶಿವನನ್ನು ಆರಾಧಿಸುತ್ತಾ, ಧ್ಯಾನಿಸುತ್ತಾ ಕಾಲ ಕಳೆಯುತ್ತಾರೆ. ಮಾರನೇ ದಿನ ಬೆಳಿಗ್ಗೆ ಸ್ನಾನ ಮುಗಿಸಿ ವಿವಿಧ ದೇವಾಲಯಗಳಿಗೆ ಹೋಗಿ ಶಿವನನ್ನು ನೋಡಿ, ಆರಾಧಿಸಿ, ಪ್ರಸಾದ ಸ್ವೀಕರಿಸಿ ಬರುತ್ತಾರೆ.

ನಾಗರಪಂಚಮಿ

ಶ್ರಾವಣ ಮಾಸದ ಪಂಚಮಿಯಂದು ನಾಗರ ಪಂಚಮಿ ಹಬ್ಬ. ಇದು ಉತ್ತರ ಕರ್ನಾಟಕದಲ್ಲಿ ಸೋದರ ಸೋದರಿಯರ ಬಾಂಧವ್ಯವನ್ನು ವೃದ್ಧಿಗೊಳಿಸುವ ಹಬ್ಬವಾಗಿದೆ. ಸೋದರರು ತಮ್ಮ ಸೋದರಿಯರಿಗೆ ಬಳೆ ತೊಡಿಸಿಕೊಳ್ಳಲು ಹಣ ನೀಡುವರು. ನಾಗರ ಪಂಚಮಿಗಾಗಿಯೇ ಬೀದಿ ಬೀದಿಗಳಲ್ಲಿ ಉಯ್ಯಾಲೆ ಕಟ್ಟುವರು. ಹೆಣ್ಣು ಮಕ್ಕಳೆಲ್ಲಾ ಒಂದಾಗಿ ಜೋಕಾಲಿ ಕಟ್ಟುವರು. ದಕ್ಷಿಣ ಕರ್ನಾಟಕ ಮತ್ತು ಕರಾವಳಿಗಳಲ್ಲಿ ನಾಗರ ಪಂಚಮಿಯಂದು ವಿಶೇಷವಾಗಿ ನಾಗರ ಪ್ರತಿಮೆಯನ್ನು ಹುತ್ತವನ್ನು ಪೂಜೆ ಮಾಡಲಾಗುತ್ತದೆ. ನಾಗದೇವರು ಶಿವನ ಶಿರದ ಮೇಲಿರುವುದರಿಂದ ವಿಶೇಷವಾಗಿ ಭಯ ಭಕ್ತಿಗಳಿಂದ ಪೂಜಿಸುತ್ತಾರೆ.

ಅಂದು ಎಲ್ಲರೂ ಸ್ನಾನ ಮಾಡಿ ಮಡಿಯಿಂದ ಮನೆಯಲ್ಲಿ ನಾಗರ ಪ್ರತಿಮೆಗೆ ಪೂಜೆ ಸಲ್ಲಿಸಿ ಹುತ್ತದ ಬಳಿಗೆ ಹೋಗಿ ಹುತ್ತವನ್ನು ಪೂಜೆ ಮಾಡಿ ಹುತ್ತಕ್ಕೆ ಹಾಲೆರೆಯುತ್ತಾರೆ. ಇದನ್ನು ತನಿಯೆರೆಯುವುದು ಎನ್ನುತ್ತಾರೆ. ಹುತ್ತಕ್ಕೆ ಅಥವಾ ನಾಗರ ವಿಗ್ರಹಕ್ಕೆ ಹಾಲು ಬಿಟ್ಟು ಪೂಜಿಸಿ ಒಪ್ಪತ್ತು ಊಟ ಬಿಡುತ್ತಾರೆ. ನಾಗರ ಪಂಚಮಿಯನ್ನು ಕೆಲವರು ಮಾತ್ರ ಮಾಡುತ್ತಾರೆ. ಮಾಡದೆ ಉಳಿದವರು ಷಷ್ಠಿ ಹಬ್ಬದಂದು ಇದೇ ಆಚರಣೆ ಮಾಡುತ್ತಾರೆ.

‘ಕಲ್ಲ ನಾಗರ ಕಂಡರೆ ಹಾಲನೆರೆವರಯ್ಯ ದಿಟ ನಾಗರ ಕಂಡರೆ ಕೊಲ್ಲು ಕೊಲ್ಲೆಂಬರಯ್ಯ’ ಎಂಬ ‘ಬಸವಣ್ಣನವರ’ ನುಡಿ ವಾಸ್ತವವಾದರೂ ನಾಗರ ಹಾವಿನ ಬಗೆಗಿನ

ಭಯ–ಭಕ್ತಿ ಸಾರ್ವತ್ರಿಕವಾದುದು. ನಾಗರ ಹಾವನ್ನು ಹೊಡೆದರೆ ಅದು ದ್ವೇಷ ಸಾಧಿಸುತ್ತದೆ. "ನಾಗರ ದೋಷ" ಉಂಟಾಗಿ ಸರ್ಪಸುತ್ತು ಉಂಟಾಗುತ್ತದೆ. ಕೆಲವರಿಗೆ ಕುರುಡು ತನವೂ ಬರಬಹುದು ಮಕ್ಕಳಿಲ್ಲದಂತಾಗಬಹುದು ಎಂಬ ವ್ಯಾಪಕ ಭಯವೇ ಇದಕ್ಕೆ ಕಾರಣ. ಇದರ ನಿವಾರಣೆಗಾಗಿ ನಾಗರಕ್ಕೆ ಹರಸಿಕೊಂಡು, ಹುತ್ತಕ್ಕೆ ಪೂಜೆ ಮಾಡಿ ತನಿಯೆರೆದುಕೊಂಡು ಬಂದು ಆ ಮಣ್ಣನ್ನು ಗಾಯಕ್ಕೆ ಸವರುತ್ತಾರೆ. ದೊಡ್ಡ ದೋಷವಿದ್ದರೆ ಅಶ್ವತ್ಥ ಜಗಲಿ ಕಟ್ಟಿಸುತ್ತಾರೆ. ಅದಾಗದವರು ತಮ್ಮ ಹೊಲಗಳಲ್ಲಾದರೂ ನಾಗರ ಕಲ್ಲು ಹಾಕಿಸಿ ವರ್ಷ ವರ್ಷ ಪೂಜಿಸುತ್ತಾರೆ.

ಈ ಎಲ್ಲಾ ಹಬ್ಬಗಳ ಜೊತೆಗೆ ಗಾವಡಗೆರೆ ಗ್ರಾಮದಲ್ಲಿ ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಗಾಂಧಿ ಜಯಂತಿ ಈ ಮುಂತಾದವುಗಳನ್ನು ಶಾಲಾ ಕಾಲೇಜು ಸಂಘ ಸಂಸ್ಥೆಗಳು ಆಚರಿಸುತ್ತವೆ.

ಅಧ್ಯಾಯ ೩

ಮರಾಠಿ ಜನಾಂಗ

ಗಾವಡಗೆರೆ ಗ್ರಾಮ ಇತಿಹಾಸದ ಹಿನ್ನೆಲೆಯುಳ್ಳ ಗ್ರಾಮವಾಗಿದೆ. ಇಲ್ಲಿ ಮರಾಠಿ ಜನ ಹೇಗೆ ಬಂದರು? ಇದು ಎಲ್ಲರಿಗೂ ಅಚ್ಚರಿ ತರಿಸುವ ಪ್ರಶ್ನೆಯಾಗಿದೆ. ಹುಣಸೂರಿಗೆ ಹೋಗುವ ದಾರಿಯಲ್ಲಿ ಕಟ್ಟೆಮಳಲವಾಡಿ ಎಂಬ ಗ್ರಾಮ ಇದೆ. ಇಲ್ಲಿ ಹಿಂದೆ ಕೋಟೆ ಇದ್ದು ಅಲ್ಲಿ ಖಂಡೋಜಿರಾವ್ ಎಂಬ ಪಾಳೇಗಾರ ಇದ್ದ ಮತ್ತು ಇವನು ದಿವಾನನೂ ಕೂಡ ಆಗಿದ್ದನೆಂದು ಹೇಳುತ್ತಾರೆ. ಆದರೆ ಎಲ್ಲಿ ಎಂಬುದಕ್ಕೆ ಯಾವುದೇ ದಾಖಲೆಗಳಿಲ್ಲ. ಈತ ತನ್ನ ಸಂಗಡಿಗರೊಡನೆ ಹಿಂದೆ ಕಾಡಾಗಿದ್ದ ಈ ಗ್ರಾಮಕ್ಕೆ ಬೇಟೆಗಾಗಿ ಬಂದ ಸಮಯದಲ್ಲಿ ಪೊದೆಯಲ್ಲಿದ್ದ ಮೊಲ ಬೇಟೆ ನಾಯಿಯನ್ನೆ ಅಟ್ಟಿಸಿ ಬಂದಿತು. ಎಲ್ಲರಿಗೂ ಆಶ್ಚರ್ಯವಾಗಿ ಇದು ವೀರರು ವಾಸಿಸುವ ಸ್ಥಳ, ಇಲ್ಲಿ ನಾವೇಕೆ ವಾಸಮಾಡಬಾರದೆಂದು ಈ ತೀರ್ಮಾನಕ್ಕೆ ಎಲ್ಲರೂ ಅನುಮೋದಿಸಿದರು. ಇದೇ ಸ್ಥಳದಲ್ಲಿ ಹಿಂದೆ ಗಾವುಡ ಎಂಬ ಜನಾಂಗ ಅಲ್ಲಲ್ಲಿ ವಾಸವಾಗಿದ್ದರು. ಈ ಕಾರಣದಿಂದಲೇ ಈ ಗ್ರಾಮಕ್ಕೆ ಗಾವಡಗೆರೆ ಎಂಬ ಹೆಸರು ಬಂದಿರಬೇಕೆಂಬ ನಂಬಿಕೆ.

೧೭ನೇ ಶತಮಾನದ ಆದಿಯಲ್ಲಿ ಮರಾಠ ಜನ ಈ ಗ್ರಾಮಕ್ಕೆ 'ಖಂಡೋಜಿರಾವ್' ಎಂಬ ಪಾಳೇಗೌಡನ ಜೊತೆ ಬಂದಿರಬಹುದು. ಛದ್ರಪತಿ ಶಿವಾಜಿ ಮಹಾರಾಜರು ದಕ್ಷಿಣ ಭಾರತದ ಕಡೆ ತಮ್ಮ ರಾಜ್ಯವನ್ನು ವಿಸ್ತರಿಸಿದರು. ದಕ್ಷಿಣದ ತಂಜಾವೂರಿನ ತನಕ ಇವರ ರಾಜ್ಯ ವಿಸ್ತಾರಗೊಂಡಿತು. ರಾಜ್ಯ ವಿಸ್ತರಣೆಯ ಸಮಯದಲ್ಲಿ ಸೈನ್ಯದಲ್ಲಿ ಮುಂದುವರೆಯಲು ಅಪೇಕ್ಷೆಪಡದವರು ಅಲ್ಲಲ್ಲಿ ತಮಗೆ ಅನುಕೂಲವಾದ ಸ್ಥಳಗಳಲ್ಲಿ ಬೇರೆ ಉದ್ಯೋಗಗಳನ್ನು ಮಾಡಿಕೊಂಡು ಇರಲು ಶಿವಾಜಿ ಮಹಾರಾಜರು ಅನುಮತಿಯನ್ನು ನೀಡಿದರು. ಈ ಅನುಮತಿಯ ಜೊತೆಗೆ ಕೆಲವು ನೀತಿ ನಿಯಮಗಳನ್ನು ಸಹ ಮಾಡಿದರು. ಯಾರು ಎಲ್ಲೇ ನೆಲೆಸಿರಲಿ ಅಲ್ಲಿ ಅಷ್ಟ (ಎಂಟು) ಗ್ರಾಮಗಳಿರಬೇಕು. ಅಲ್ಲಿ ಒಬ್ಬ ಹಿರಿಯ ವ್ಯಕ್ತಿ ಯಜಮಾನನಾಗಿರಬೇಕು. ಗ್ರಾಮದ ಆಡಳಿತವನ್ನು ಅವನು ನಡೆಸಿಕೊಂಡು ಹೋಗಬೇಕು. ಗ್ರಾಮದಿಂದ ಬರುವ ಆದಾಯವನ್ನು ಗ್ರಾಮದ ಅಭಿವೃದ್ಧಿಗಾಗಿ ಖರ್ಚು ಮಾಡಬೇಕು ಎಂಬ ನಿಯಮಗಳನ್ನು ಹಾಕಿದರು.

ಈಗಲೂ ಮರಾಠಿ ಜನ ವಾಸಮಾಡುವ ಅಷ್ಟಗ್ರಾಮಗಳು ಗಾವಡಗೆರೆ ಸುತ್ತಮುತ್ತ ಕಂಡುಬರುತ್ತವೆ. ಆ ಗ್ರಾಮಗಳೆಂದರೆ;

೧. ಗಾವಡಗೆರೆ	೪. ಮಾರಗೌಡನಹಳ್ಳಿ	೭. ಮಂಚನಾಯಕನಹಳ್ಳಿ
೨. ಹುಲ್ಯಾಳು	೫. ಮನುಗನಹಳ್ಳಿ	೮. ಚಿಕ್ಕಾಡಿಗನಹಳ್ಳಿ
೩. ಮುಳ್ಳೂರು	೬. ಬಿಳಿಗೆರೆ	

ಗಾವಡಗೆರೆ ಗ್ರಾಮದ ಆದಿಮನೆಗೆ 'ದಿವಾನ್‌ವಾಡ' ಎಂದು ಹೆಸರು. ಖಂಡೋಜಿರಾವ್‌ಕದಂ ಎಂಬ ಪಾಳೇಗಾರ ಹಿಂದೆ ದಿವಾನನೂ ಕೂಡ ಆಗಿದ್ದುದರಿಂದ ಈ ಮನೆಗೆ ದಿವಾನ್‌ವಾಡ ಎಂಬ ಹೆಸರು ಬಂದಿರಬೇಕು.

೧೯೧೪ ರಿಂದ ೧೯೧೯ರವರೆಗೆ ಇಂಗ್ಲೆಂಡ್ ಮತ್ತು ಜರ್ಮನಿ ನಡುವೆ ನಡೆದ ಮೊದಲನೇ ಮಹಾಯುದ್ಧದಲ್ಲಿ ಇಲ್ಲಿಯ ಕೆಲವು ಮರಾಠ ಜನ ಭಾಗವಹಿಸಿದ್ದರು.

ಗಾವಡಗೆರೆ ಗ್ರಾಮದ ವಿಶೇಷವೆಂದರೆ ಇಲ್ಲಿರುವ ಮರಾಠ ಜನ ಹಾಗೂ ಇತರೆ ಎಲ್ಲಾ ಜನಾಂಗದವರೆಲ್ಲರೂ ಜೊತೆಗೂಡಿ ಭಕ್ತಿಭಾವದಿಂದ ಅನ್ಯೂನ್ಯವಾಗಿ ಗ್ರಾಮದೇವತೆ ಮತ್ತು ಇತರೆ ಹಬ್ಬ ಹರಿದಿನಗಳನ್ನು ಆಚರಿಸುತ್ತಾರೆ.

ಮರಾಠಿ ಜಾತಿ ಒಂದೆ ಆದರು ಅದರಲ್ಲೂ ಕೆಲವು ಪಂಗಡ ಮತ್ತು ವಂಶಸ್ಥರುಗಳಿದ್ದಾರೆ. ಈ ಜನಾಂಗದ ವಿಶೇಷತೆಯೆಂದರೆ ಒಂದೆ ಪಂಗಡ ಮತ್ತು ಕುಲದಲ್ಲಿ ಮದುವೆ ಮಾಡುವುದಿಲ್ಲ. ಉದಾಹರಣೆ ಕದಂ ವಂಶಸ್ಥರು ಕದಂ ವಂಶಸ್ಥರಲ್ಲೇ ಇರುವ ಹೆಣ್ಣುಮಕ್ಕಳನ್ನು ಕೊಡುಕೊಳ್ಳುವಿಕೆ ಸಂಬಂಧದ ಮೂಲಕ ವಿವಾಹ ಮಾಡಿಕೊಳ್ಳುವುದಿಲ್ಲ. ಕಾರಣ ಅವರು ಸಹೋದರ ಸಂಬಂಧಿಗಳು ಎನ್ನುವ ಕಾರಣದಿಂದ ಆದರೆ ಕದಂ ಪವಾರ್, ಕದಂಘಾಟ್ಕೆ. ಈ ರೀತಿ ಬೇರೆ ವಂಶಸ್ಥರೊಂದಿಗೆ ವಿವಾಹ ನೆರವೇರಿಸುತ್ತಾರೆ.

ಮರಾಠಿಗಳಲ್ಲಿರುವ ಪ್ರಮುಖ ವಂಶಸ್ಥರೆಂದರೆ;

೧. ಕದಂ	೬. ಸೂರ್ಯವಂಶೆ	೧೧. ಕಾಟ್ಕರ್	೧೬. ಪಡತಾರೆ
೨. ಬೋಬಡೆ	೭. ಪವಾರ್	೧೨. ಚೌಹ್ವಾಣ್	೧೭. ಜಗತಾಪ್
೩. ಕಾಳಿಂಗೆ	೮. ಬೋರೆ	೧೩. ನಿಂಬಾಳ್ಕರ್	೧೮. ಬೋಧೆ
೪. ಶಿಂಧೆ	೯. ಮೌನೆ	೧೪. ಬರ್ಗೆ	೧೯. ಇಂಡಲ್ಕರ್
೫. ಘಾಟ್ಕೆ	೧೦. ಕಾಟೆ	೧೫. ಪವಾರ್	೨೦. ಕ್ಷೀರಸಾಗರ್

ಈ ಎಲ್ಲ ವಂಶಸ್ಥರು ಗಾವಡಗೆರೆ ಸುತ್ತಮುತ್ತಲಿರುವ ೮ ಹಳ್ಳಿಗಳಲ್ಲಿ ವಾಸವಾಗಿದ್ದಾರೆ.

ಮರಾಠಿ ಜನಾಂಗದ ಆಚರಣೆಗಳು

ಋತುಮತಿಯಾದಾಗಿನ ಆಚರಣೆಗಳು

ಋತುಮತಿಯಾದಾಗ ಮೊದಲು ಸ್ನಾನ ಮಾಡಿಸಿ ನಂತರ ಗೋಧಿ, ಕೊಬ್ಬರಿ, ಎಲೆ, ಅಡಿಕೆ ಹೂವುಗಳಿಂದ ಉಡಿ ತುಂಬುತ್ತಾರೆ. ನಂತರ ಹಲಸಿನ ಎಲೆಯಲ್ಲಿ ಹೊಲೆದ ಊಟದ ಎಲೆಯಲ್ಲಿ ಕಿಚಡಿ, ಅನ್ನ, ಎಳ್ಳಿನ ಕಡುಬನ್ನು ಬಡಿಸುತ್ತಾರೆ. ಋತುಮತಿಯಾದ ಹೆಣ್ಣುಮಗಳೊಂದಿಗೆ ಬಂದು ಮಗುವನ್ನು ಊಟಕ್ಕೆ ಕೂರಿಸುತ್ತಾರೆ. ಏಕೆಂದರೆ ಆ ಹುಡಗಿಗೆ ಮಕ್ಕಳ ಭಾಗ್ಯ ಬರಲಿ ಎಂಬ ಕಾರಣದಿಂದ ನಂತರ ಸೋದರ ಮಾವನ ಮನೆಯಿಂದ ಉಡಿ ತುಂಬುತ್ತಾರೆ. ತದನಂತರ ಬೇರೆ ಸಂಬಂಧಿಕರು ಇದೆ ಪದ್ಧತಿ ಆಚರಿಸಿ ಮಾಡಲು ತುಂಬುತ್ತಾರೆ. ಋತುಮತಿಯಾದ ಹೆಣ್ಣಿನ ಮನೆಯವರಿಗೆ ಮತ್ತು ಅವರ ದಾಯಾದಿಗಳಿಗೆ ೧೨ ದಿನಗಳ ಸೂತಕ ಇರುತ್ತದೆ. ಇವರು ಬ್ರಾಹ್ಮಣರನ್ನು ಕರೆಯಿಸಿ ೧೨ನೇ ದಿನಕ್ಕೆ ಪುಣ್ಯ, ಪೂಜೆ ಮಾಡಿಸುವುದರ ಮೂಲಕ ಸೂತಕ ಕಳೆಯುತ್ತಾರೆ. ನಂತರ ಋತುಮತಿಯಾದ ೩ ರಿಂದ ೫ ತಿಂಗಳವರೆಗೆ ಪತ್ಯೆಯಲ್ಲಿ ಇಟ್ಟಿರುತ್ತಾರೆ. ೩ ತಿಂಗಳಿಗೆ ಮನೆಯಲ್ಲಿ ಅನುಕೂಲವಿದ್ದರೆ ನೆಂಟರಿಷ್ಟರಿಗೆ ಆಹ್ವಾನಿಸಿ ವಿಜ್ರುಂಭಣೆಯಿಂದ ಆರತಿಶಾಸ್ತ್ರ ಮಾಡುತ್ತಾರೆ.

ಮರಾಠಿ ಜನಾಂಗದ ಮದುವೆಗಳು

ಮರಾಠಿ ಜನಾಂಗದ ಮದುವೆಗಳಲ್ಲಿ ಮರಾಠಿ ಭಾಷಿಕರು ತಮ್ಮದೆ ಆದ ವಿಶಿಷ್ಟ ಸಂಸ್ಕೃತಿ ಆಚರಣೆಗಳ ಮೂಲಕ ಮದುವೆ ಸಮಾರಂಭವನ್ನು ನೆರವೇರಿಸುತ್ತಾರೆ. ಮರಾಠಿಗರಲ್ಲಿ ಒಂದೆ ವಂಶದ ಹೆಣ್ಣು-ಗಂಡುಗಳಿಗೆ ಮದುವೆ ನಿಶ್ಚಯ ಮಾಡುವುದಿಲ್ಲ. ಕಾರಣ ಅವರದು ಸೋದರ ಸಂಬಂಧ ಎಂಬ ಕಾರಣಕ್ಕಾಗಿ, ಮದುವೆಯಲ್ಲಿ ಅವರು ದೇವರ ಕಾರ್ಯ ಮಾಡುತ್ತಾರೆ.


ಮರಾಠಿಗರಲ್ಲಿ ತಮ್ಮ ತಮ್ಮ ಮನೆದೇವರುಗಳನ್ನು ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ ಮುಂತಾದ ಲೋಹಗಳಿಂದ ಮಾಡಿಸಿ ಪೂಜೆ ಸಲ್ಲಿಸುತ್ತಾರಲ್ಲದೆ ಮನೆಯಲ್ಲಿ ಮೊದಲ ಮಗನ ಮದುವೆ ನಿಶ್ಚಯವಾದಾಗ ದೇವರಕಾರ್ಯವನ್ನು ಮಾಡುತ್ತಾರೆ. ಈ ಕಾರ್ಯದಲ್ಲಿ ಪ್ರಾಣಿ ಬಲಿ ನೀಡುತ್ತಾರಲ್ಲದೆ ನೆಂಟರಿಷ್ಟರಿಗೆ ಕರೆದು ಆಚರಿಸುತ್ತಾರೆ. ಈ ಕಾರ್ಯವನ್ನು ಮದುವೆಗೆ ಮೊದಲು ಅಥವಾ ನಂತರವೂ ನಡೆಸಬಹುದು. ಕೆಲವರು ತಮ್ಮ ಅನುಕೂಲಕ್ಕೆ ತಕ್ಕಂತೆ ದೇವರ ಕಾರ್ಯ ಮಾಡುತ್ತಾರೆ.

ವಿವಾಹ ನಿಶ್ಚಯವು ವಧುವಿನ ಮನೆಯಲ್ಲಿ ನೆರವೇರುತ್ತದೆ. ಮರಾಠಿ ಜನಾಂಗದ ಮದುವೆಯು ೨ ದಿನದ ಆಚರಣೆಯಾಗಿದೆ. ವರನ ಮನೆಯಿಂದ ವಧುವಿಗೆ ೫ ಸೀರೆಗಳನ್ನು ತರುತ್ತಾರೆ.

- ❖ ಚಪ್ಪರಕ್ಕೆ
- ❖ ಹಳದಿಶಾಸ್ತ್ರಕ್ಕೆ
- ❖ ಧಾರಾಮಹೋತ್ಸವಕ್ಕೆ
- ❖ ಸುರುಮುಖ ಎಂದರೆ ಹುಡುಗಿಯನ್ನು ಹುಡುಗನ ಮನೆಗೆ ಕರೆದುಕೊಂಡು ಮನೆ ತುಂಬಿಸಿಕೊಳ್ಳುವ ಸಂದರ್ಭದಲ್ಲಿ
- ❖ ವರನ ಮನೆಯಲ್ಲಿ ನೆರವೇರಿಸುವ ಪೂಜೆಗೆ ಒಂದು ಸೀರೆ

ಮದುವೆ ೧೫ ದಿನ ಮೊದಲು ವಧು-ವರರಿಗೆ ಅವರವರ ಸಂಬಂಧಿಕರು ಪ್ರತಿದಿನ ಹಳದಿಸ್ನಾನ ಮಾಡಿಸುತ್ತಾರೆ. ಸ್ನಾನದ ನಂತರ ಸಿಹಿ ಅಡಿಗೆ ಮಾಡಿ ಊಟ ಬಡಿಸುತ್ತಾರೆ. ಚಪ್ಪರದ ದಿನ ಮಾತ್ರ ಸೋದರ ಮಾವನ ಮನೆಯಲ್ಲಿ ಹಳದಿ ಸ್ನಾನ ಮಾಡಿ ಊಟ ಮುಗಿಸಿದ ನಂತರ ಮದುವೆ ಮನೆಗೆ ಹೋಗುತ್ತಾರೆ.

ಮರಾಠಿಗರು ವಧು-ವರರಿಗೆ ಧರಿಸುವ ಬಾಸಿಂಗವು ವಿಶಿಷ್ಟ ಶೈಲಿಯದಾಗಿದ್ದು ಪೂರ್ಣ ಪ್ರಮಾಣದಲ್ಲಿ ಹಣೆ ಮುಚ್ಚುವ ರೀತಿಯಲ್ಲಿದ್ದು ಎರಡು ಕಡೆಯಲ್ಲೂ ಗೊಂಚಲುಗಳು ಇರುತ್ತವೆ. ವರನಿಗೆ ಕಚ್ಚೆ ಹಾಕಿ ರೇಷ್ಮೆ ಸೀರೆಯಿಂದ ವಿಶೇಷವಾಗಿ ಪೇಟ ಹಾಕುತ್ತಾರಲ್ಲದೆ ಮನೆಯ ದೇವರ ಮೂರ್ತಿಯ ವಿಗ್ರಹದ ಬಿಲ್ಲೆಯನ್ನು ವರನ ಕತ್ತಿಗೆ ಹಾಕಿರುತ್ತಾರೆ.



ಮರಾಠಿ ಜನಾಂಗದ ವಧುವರರು

ಮೊದಲ ದಿನವಾದ ಹಳದಿಶಾಸ್ತ್ರದ ದಿನ ಅಂದು ರಾತ್ರಿ ವರ ಮದುವೆ ಮನೆಗೆ ಬಂದ ನಂತರ ಪುರೋಹಿತರು ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದ ನಂತರ ಊಟ ಮುಗಿದ ನಂತರ ಹಳದಿಶಾಸ್ತ್ರ ಮಾಡುತ್ತಾರೆ. ವಧುವರರಿಗೆ ೫ ಜನ ಮುತ್ತೈದೆಯರು ಸ್ನಾನ ಮಾಡಿಸಿ ಅರಿಶಿನವನ್ನು ಮೈಗೆಲ್ಲ ಹಚ್ಚುತ್ತಾರೆ.

ವಧುವಿಗೆ ಕೈತುಂಬ ಹಸಿರು ಬಳೆಯನ್ನು ತೊಡಿಸಿ ಮೆಹಂದಿ ಹಚ್ಚಿರುತ್ತಾರಲ್ಲದೆ ತಲೆಯ ಮೇಲೆ ದುಪ್ಪಟ್ಟ ಹೊದಿಸಿರುತ್ತಾರೆ. ವಧು–ವರರಿಬ್ಬರ ಮನೆಯವರು ದೇವರನ್ನು ತರುವ ಪೂಜೆ ಆಚರಿಸುತ್ತಾರೆ. ಧಾರೆ ಮಂಟಪಕ್ಕೆ ವಧುವನ್ನು ಸೋದರ ಮಾವ ಕರೆತರುತ್ತಾರೆ. ಬ್ರಾಹ್ಮಣರ ಸಮ್ಮುಖದಲ್ಲಿ ಅನೇಕ ಪೂಜಾವಿಧಿವಿಧಾನಗಳ ಮದುವೆ ಶಾಸ್ತ್ರಗಳು ನಡೆಯುತ್ತವೆ.



ಧಾರಾ ಮಂಟಪಕ್ಕೆ ಕರೆದೊಯ್ಯುತ್ತಿರುವ ವಧುವಿನ ಸೋದರ ಮಾವ

ಮರಾಠಿಗರು ಮದುವೆಯಲ್ಲಿ 'ಸವಾಸೀನ್' ಅಥವಾ ಮತ್ತೈದೆ ಪೂಜೆಯನ್ನು ಆಚರಿಸುತ್ತಾರೆ. ೯ ಜನ ಮುತ್ತೈದೆಯರಿಗೆ ಮನೆಯಲ್ಲಿ ಪೂಜೆಗೆ ಕುಂಕುಮ ಇಟ್ಟು ಆಮಂತ್ರಿಸುತ್ತಾರೆ. ಆ ಮುತ್ತೈದೆಯರು ಪೂಜೆ ಮುಗಿಯುವವರೆಗೂ ಯಾವುದೇ ಆಹಾರವನ್ನು ಸೇವಿಸುವ ಹಾಗಿಲ್ಲ. ಅವರು ಉಪವಾಸದಲ್ಲಿರಬೇಕು. ನಂತರ ಎಲ್ಲ ಮುತ್ತೈದೆಯರನ್ನು ಒಂದೇ ಸಾರಿ ನಿಲ್ಲಿಸಿ ಅವರುಗಳ ಕಾಲು ತೊಳೆದು ಪಾದಪೂಜೆ ಮಾಡಿ ನಂತರ ಹಣೆಯ

ತುಂಬ ಅಡ್ಡ ಪಟ್ಟೆಯ ಕುಂಕುಮ ಹಚ್ಚುತ್ತಾರೆ. ನಂತರ ಅವರಿಗಾಗೆ ಮೀಸಲಿಟ್ಟ ಅಡುಗೆಗಳನ್ನು ಬಿಡಿಸಿ ಫಲ ತಾಂಬೂಲ ಮಂಗಳದ್ರವ್ಯಗಳನ್ನು ನೀಡಿ ಪೂಜಿಸಿ ಗೌರವಿಸುತ್ತಾರೆ.

ಮರಾಠಿಗರು ವಧುವಿನ ಮಾಂಗಲ್ಯವನ್ನು ಹೊಟ್ಟೆಗೆ ತಗಲುವ ರೀತಿ ಮಾಂಗಲ್ಯವನ್ನು ಪೋಣಿಸಿ ಮಧ್ಯ ಮಧ್ಯ ಅನೇಕ ಗಂಟುಗಳನ್ನು ಹಾಕಿರುತ್ತಾರೆ. ಮಾಂಗಲ್ಯ ಧಾರಣೆಯ ಸಂದರ್ಭದಲ್ಲಿ ಮಾಂಗಲ್ಯವನ್ನು ಅಕ್ಕಿಯಲ್ಲಿ ಕೊಬ್ಬರಿ ಹೋಳುಗಳನಿಟ್ಟು ಅದರಲ್ಲಿಟ್ಟಿರುತ್ತಾರೆ. ನಂತರ ಮಾಂಗಲ್ಯ ಧಾರಣೆಯ ಮೊದಲು ಹಿರಿಯರು ಮಾಂಗಲ್ಯವನ್ನು ಮುಟ್ಟಿ ನಮಸ್ಕರಿಸಿ ಹರಸುತ್ತಾರೆ. ವಧುವನ್ನು ಮಂಟಪಕ್ಕೆ ವಧುವಿನ ಸೋದರ ಮಾವ ಕರೆತರುತ್ತಾರೆ. ವಧುವಿನ ತಾಯಿ ತಂದೆ ವರನ ಕಾಲು ತೊಳೆದು ಧಾರೆ ಎರೆದುಕೊಡುತ್ತಾರೆ. ಬೇರೆ ಜನಾಂಗದ ಮದುವೆಗಳಲ್ಲಿ ನೆಂಟರಿಷ್ಟರು, ಆಪ್ತರು ಹಾಲು ನೀರು ಬಿಟ್ಟು ಹಾರೈಸುತ್ತಾರೆ. ಆದರೆ ಮರಾಠಿಗರಲ್ಲಿ ವಧುವಿನ ತಂದೆ ತಾಯಿ ಅಥವಾ ಸಂಬಂಧಿಕರಲ್ಲಿ ಯಾರಾದರೂ ಒಬ್ಬ ದಂಪತಿಗಳು ಮಾತ್ರ ಧಾರೆ ಎರೆದುಕೊಡುತ್ತಾರೆ.



ಧಾರೆ ಎರೆಯುತ್ತಿರುವ ವಧುವಿನ ತಂದೆ ತಾಯಿ

ವಧುವನ್ನು ಮನೆ ತುಂಬಿಸಿಕೊಂಡ ನಂತರ ಹಳದಿ ಆಡುವ ಶಾಸ್ತ್ರವನ್ನು ಮಾಡುತ್ತಾರೆ. ಅರಿಶಿನವನ್ನು ರುಬ್ಬಿ ವಧುವರರನ್ನು ಹಸೆಮಣೆಯಲ್ಲಿ ಕೂರಿಸಿ ಪರಸ್ಪರ ಅರಿಶಿನವನ್ನು ಬಳಿದುಕೊಳ್ಳುವ ಮೂಲಕ ನೆರೆದಿರುವ ಬಂಧು ಅರಿಶಿನ ಮೆತ್ತಿಕೊಂಡು ಪರಸ್ಪರರು ಸಂತೋಷಪಡುತ್ತಾರೆ. ನಂತರ ನೀರಿನ ಬಿಂದಿಗೆಯಲ್ಲಿ ನಾಣ್ಯ ಹಾಕಿ ವಧುವರರಲ್ಲಿ ಯಾರಿಗೆ ಆ

ನಾಣ್ಯ ಸಿಗುತ್ತದೊ ಅವರು ಪಂದ್ಯದಲ್ಲಿ ಗೆದ್ದರು ಎಂದು ತೀರ್ಮಾನಿಸುವುದರಿಂದ ಪರಸ್ಪರ ವಧುವರರು ಪೈಪೋಟಿಯಲ್ಲಿ ನಾಣ್ಯವನ್ನು ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ಸಂದರ್ಭದಲ್ಲಿ ಬಂಧು ಬಾಂಧವರು ವಧುವರರು ನಾಣ್ಯಕ್ಕಾಗಿ ಪೈಪೋಟಿ ನಡೆಸುವುದನ್ನು ನೋಡಿ ಸಂಭ್ರಮಿಸುತ್ತಾರೆ.

ಮರಾಠಿ ಮದುವೆಗಳಲ್ಲಿ ವರನನ್ನು ಕುದುರೆ ಮೇಲೆ ಕಲ್ಯಾಣ ಮಂಟಪಕ್ಕೆ ಕರೆತರುವುದು ಸಂಪ್ರದಾಯ ವರ ದೇವತಾಕಾರ್ಯದಂದು ಮದುವೆ ಮನೆಗೆ ಬರುವ ವೇಳೆಯಲ್ಲಿ ಹಲವಾರು ಬಣ್ಣ ಬಣ್ಣದ ಬಟ್ಟೆಗಳನ್ನು ದೊಣ್ಣೆಗೆ ಕಟ್ಟಿ ಅವುಗಳನ್ನು ವರನ ಹಿಂದೆ ಹಿಡಿದು ಬರುತ್ತಾರೆ. ಅವು ಮನೆಯ ದೇವರುಗಳು ಎಂಬುದು ಅವರ ನಂಬಿಕೆ. ನಂತರ ಆ ಬಟ್ಟೆಗಳನ್ನು ಹಿರಿಯರಿಗೆ ನೀಡುತ್ತಾರೆ. ಹಾಗೆಯೇ ಇಬ್ಬರು ವ್ಯಕ್ತಿಗಳು ದೊಣ್ಣೆವರಸೆ ಆಡುತ್ತಾ ದೊಣ್ಣೆಗಳನ್ನು ಬಡಿದುಕೊಂಡು ಬರುವುದು ಸಂಪ್ರದಾಯ.

ಮದುವೆಗೆ ವಿಶೇಷ ಖಾದ್ಯಗಳಾಗಿ ಕರಜಿಕಾಯಿ ಎಳ್ಳುಂಡೆ, ತೆಲ್‌ಚಿ, ಚಕ್ಕಲಿಗಳನ್ನು ಮಾಡುತ್ತಾರೆ.

ಹೆರಿಗೆ ಆದಾಗಿನ ಆಚರಣೆಗಳು

ಹೆರಿಗೆ ಆದಾಗ ಗಂಡನ ಮನೆಯವರಿಗೆ ಸೂತಕ ಇರುತ್ತದೆ. ೧೨ ದಿನಗಳವರೆಗೆ ಈ ಸೂತಕ ಇರುತ್ತದೆ. ಮಗು ಹುಟ್ಟಿದ ೫ನೇ ದಿನಕ್ಕೆ ೫ ಚಿಕ್ಕ ಹುಡುಗಿಯರನ್ನು ಕರೆತಂದು ಅವರಿಗೆ ಬೇಯಿಸಿದ ಕಾಳುಗಳು ಖರ್ಜೂರ, ಬಾಳೆಹಣ್ಣು, ನಿಂಬೆಹಣ್ಣು, ಎಲೆ-ಅಡಿಕೆ ಕೊಡುತ್ತಾರೆ. ನಂತರ ಆ ಮಕ್ಕಳಿಗೆ ಅಡಿಗೆ ಮಾಡಿ ಬಡಿಸುತ್ತಾರಲ್ಲದೆ ಗುಂಡುಕಲ್ಲಿನ ಮೇಲೆ ೫ ದೀಪಗಳನ್ನು ಹಚ್ಚಿಡುತ್ತಾರೆ. ಆ ದೀಪಗಳನ್ನು ಮಗು ನೋಡಬೇಕೆಂಬುದು ಮರಾಠಿ ಜನಾಂಗದ ಪ್ರತೀತಿ ನಂತರ ೧೨ನೇ ದಿನಕ್ಕೆ ಮನೆಯನ್ನು ಸ್ವಚ್ಛಗೊಳಿಸಿ ಬ್ರಾಹ್ಮಣರನ್ನು ಕರೆಸಿ ಪುಣ್ಯ ಮಾಡಿಸಿ ಸೂತಕ ಕಳೆಯುತ್ತಾರೆ. ಬಾಣಂತಿ ೫ ರಿಂದ ೬ ತಿಂಗಳು ತಾಯಿಯ ಮನೆಯಲ್ಲಿ ಬಾಣಂತಿ ಆರೈಕೆ ಮಾಡಿಸಿಕೊಳ್ಳುತ್ತಾಳೆ. ನಂತರ ನಾಮಕರಣ ಮಾಡಿ ಗಂಡನ ಮನೆಗೆ ಕಳುಹಿಸುತ್ತಾರೆ.

ಆಹಾರಪದ್ಧತಿ

ಮರಾಠಿಗರು ಎಲ್ಲಾ ರೀತಿಯ ಆಹಾರಗಳನ್ನು ಸೇವಿಸುತ್ತಾರೆ. ಸಿಹಿ ತಿನಿಸುಗಳಲ್ಲದೆ ಖಾರ ಪದಾರ್ಥಗಳನ್ನು ಇವರು ತಿನ್ನುತ್ತಾರೆ. ಮರಾಠಿಗರು ಮೂಲತಃ ಮಾಂಸಾಹಾರಿಗಳು

ಹೆಚ್ಚಾಗಿ ಕೋಳಿ, ಮೇಕೆ, ಕುರಿ ಮಾಂಸವನ್ನು ತಿನ್ನುತ್ತಾರಲ್ಲದೆ ಮೊಟ್ಟೆ ಪ್ರಿಯವಾದ ಖಾದ್ಯವಾಗಿದೆ. ಇವರು ಮಸಾಲೆ ಪದಾರ್ಥಗಳನ್ನು ಹೆಚ್ಚು ಉಪಯೋಗಿಸುತ್ತಾರೆ. ಹಾಗೆಯೇ ಒಬ್ಬಟ್ಟು ಪಾಯಸ, ಮಲಿದ, ಕಜ್ಜಾಯ, ‘ಚಲ್‌ಚಿ’,[೯] ಚಕ್ಕಲಿ ಕೋಡಬಳೆ ನಿಪ್ಪಟ್ಟು, ಶಂಕರ್‌ಪೋಳಿಗಳನ್ನು ಉಪಯೋಗಿಸುತ್ತಾರೆ. ಅಕ್ಕಿರೊಟ್ಟಿ ಹೆಚ್ಚಾಗಿ ತಿನ್ನುತ್ತಾರೆ. ಮಾಂಸದ ಜೊತೆ ರೊಟ್ಟಿ ತಿನ್ನುವುದು ಇವರಿಗೆ ಹೆಚ್ಚು ಪ್ರಿಯ. ಮಾಂಸದ ಜೊತೆ ಮುದ್ದೆಯನ್ನು ತಿನ್ನುವುದಿಲ್ಲ. ರೊಟ್ಟಿಗೆ ಕಡಲೆ ಬೇಳೆ ಮತ್ತು ಹುರುಳಿಬೇಳೆಯ ‘ಜುಂಕ’ವನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ.

ಹೋಳಿಗೆಗೆ ತುಪ್ಪ ಮತ್ತು ಬೆಲ್ಲದಿಂದ ಮಾಡುವ ಗುಳನಿಯನ್ನು ತಿನ್ನುತ್ತಾರೆ. ಒಂದೊಂದು ಹಬ್ಬಕ್ಕೆ ಒಂದೊಂದು ರೀತಿಯ ಅಡುಗೆಗಳನ್ನು ಮಾಡುತ್ತಾರೆ. ಉದಾಹರಣೆಗೆ: ವಿಜಯದಶಮಿಗೆ ಮಾಂಸದ ಅಡಿಗೆ ಮಾಡಿದರೆ ಗೌರಿ ಗಣೇಶ ಹಬ್ಬಕ್ಕೆ ಹೋಳಿಗೆ ಕಡುಬುಗಳನ್ನು ಮಾಡುತ್ತಾರೆ. ನಾಗರಪಂಚಮಿಗೆ ಎಳ್ಳಿನ ಕಡುಬು ಮಾಡಿ ನೈವೇದ್ಯ ಮಾಡುತ್ತಾರೆ.

ಭಕ್ಷ್ಯ: ಇವರು ಎಲ್ಲಾ ರೀತಿಯ ಆಹಾರವನ್ನು ಇಷ್ಟಪಡುತ್ತಾರೆ. ಎಲ್ಲಾ ರೀತಿಯ ತರಕಾರಿಗಳನ್ನು ಬಳಸುತ್ತಾರೆ. ಅಡಿಗೆಯಲ್ಲಿ ಮಸಾಲೆ ಪದಾರ್ಥಗಳನ್ನು ಹೆಚ್ಚು ಬಳಸುತ್ತಾರಲ್ಲದೆ ಮಾಂಸಾಹಾರಿಗಳಾದುದರಿಂದ ಕೋಳಿ, ಮೇಕೆ, ಕುರಿ ಮಾಂಸವನ್ನು ಬಳಸುತ್ತಾರೆ.

ಅಭಕ್ಷ್ಯ: ಮರಾಠಿಗರು ಮಸಾಲೆ ಇಲ್ಲದ ಅಡುಗೆ ತಿನ್ನಲು ಇಷ್ಟಪಡುವುದಿಲ್ಲ. ಹಾಗೆಯೇ ಹಂದಿ, ಹಸುವಿನ ಮಾಂಸಗಳನ್ನು ತಿನ್ನುವುದಿಲ್ಲ.

ವಿಠೋಬನಿಗೆ ಅರ್ಪಿಸುವ ನೈವೇದ್ಯಗಳು

ವಿಠೋಬನಿಗೆ ಹೆಚ್ಚಾಗಿ ಸಿಹಿ ತಿನಿಸುಗಳನ್ನು ನೈವೇದ್ಯಕ್ಕೆ ಇಡಲಾಗುತ್ತದೆ. ಹಲವು ಮಿಠಾಯಿಯನ್ನು ಇಲ್ಲವೆ ಸಕ್ಕರೆಯನ್ನು ಸಹ ಹೆಚ್ಚಾಗಿ ನೈವೇದ್ಯ ಮಾಡುತ್ತಾರೆ. ಹಾಗೆಯೇ ಕಡಲೆಕಾಳಿನ ಹುಸಲಿ, ಪಂಚಕಜ್ಜಾಯ, ಹೆಸರುಬೇಳೆಗಳನ್ನು ನೈವೇದ್ಯ ಮಾಡುತ್ತಾರೆ. ವಿಠೋಬನಿಗೆ ಯಾವುದೇ ರೀತಿಯ ಪ್ರಾಣಿಬಲಿ ನೀಡುವುದಿಲ್ಲ.

[೯] ಚಲ್‌ಚಿ ಎಂಬುದು ಎಳ್ಳು, ಕಡಲೆ, ಬೆಲ್ಲದಿಂದ ಮಾಡುವ ಮರಾಠಿಗರ ವಿಶಿಷ್ಟ ಸಿಹಿ ತಿಂಡಿಯಾಗಿದೆ.

ಕ್ಷುದ್ರದೇವತೆ ಆರಾಧನೆ ಮತ್ತು ಬಲಿ

ಇವರು ವಿಠೋಬ ಈಶ್ವರನನ್ನಲ್ಲದೆ ಎಲ್ಲ ಕ್ಷುದ್ರ ದೇವತೆಗಳನ್ನು ಆರಾಧಿಸುತ್ತಾರೆ ಮತ್ತು ಬಲಿಯನ್ನು ನೀಡುತ್ತಾರೆ. ಗ್ರಾಮದೇವತೆಯಾದ ಪಟ್ಟಲದಮ್ಮನನ್ನು, ಪಿರಿಯಾಪಟ್ಟಲದಮ್ಮ, ಚಾಮುಂಡೇಶ್ವರಿಯನ್ನು ಪೂಜಿಸುತ್ತಾರಲ್ಲದೆ ವಿಶೇಷವಾಗಿ ಅಂಬಾಭವಾನಿಯನ್ನು ಪೂಜಿಸುತ್ತಾರೆ. ಮೈಲಾರಲಿಂಗ, ಕಾಲಭೈರವೇಶ್ವರನನ್ನು ಪೂಜಿಸಿ ಕುರಿ ಕೋಳಿಗಳನ್ನು ಬಲಿ ಕೊಡುತ್ತಾರೆ.

ಮರಾಠಿ ಜನಾಂಗದ ಹಬ್ಬಗಳು

ಯುಗಾದಿ

ಹೊಸ ವರ್ಷವನ್ನು ಮರಾಠಿಗಳು ಯುಗಾದಿಯಿಂದ ಪ್ರಾರಂಭಿಸುತ್ತಾರೆ. ಯುಗಾದಿ ಹಬ್ಬಕ್ಕೆ ಮರಾಠಿಗರು 'ಗುಡಿಪಾಡವ' ಎಂದು ಕರೆಯುತ್ತಾರೆ. ಯುಗಾದಿ ಹಬ್ಬವನ್ನು ಸಂಭ್ರಮದಿಂದ ಮನೆಯವರೆಲ್ಲ ಹೊಸಬಟ್ಟೆ ಧರಿಸುವ ಮೂಲಕ ಆಚರಿಸುತ್ತಾರೆ. ಈ ಹಬ್ಬದಂದು ಒಂದು ಕಳಶಕ್ಕೆ ಪೂಜೆ ಮಾಡಿ, ಆ ಕಳಶಕ್ಕೆ ಕೇಸರಿ ಬಣ್ಣದ ಬಟ್ಟೆ ಹಾಕಿ ಪೂಜಿಸಿ ನಂತರ ಮನೆ ಹೊರಗೆ ಹಾರಿಸುತ್ತಾರೆ. ಇದು ಕ್ಷತ್ರಿಯರ ಸಂಕೇತ ನಂತರ ಹೋಳಿಗೆ ಮಾಡಿ ದೇವರಿಗೆ ಮತ್ತು ಆ ಕಳಶಕ್ಕೆ ನೈವೇದ್ಯ ಮಾಡಿ ಬೇವು-ಬೆಲ್ಲ ತಿಂದು ಊಟ ಮಾಡುತ್ತಾರೆ. ಸಂಜೆ ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸಿದ ನಂತರ ಸೂರ್ಯಾಸ್ತದ ಮೊದಲು ಹೊರಗೆ ನಿಲ್ಲಿಸಿದ ಕಳಶಕ್ಕೆ ಪೂಜೆ ಮಾಡಿ ತೆಗೆದಿಡುತ್ತಾರೆ. ಯುಗಾದಿಯಲ್ಲಿ ಎಲ್ಲರಂತೆ ಮರಾಠಿಗರು ಬೇವು-ಮಾವಿನ ಸೊಪ್ಪಿನ ತೋರಣದಿಂದ ಮನೆಯನ್ನು ಅಲಂಕರಿಸುತ್ತಾರೆ. ಯುಗಾದಿ ಹಬ್ಬದ ಮಾರನೆ ದಿನ ವರ್ಷದೊಡಕು ಆಚರಿಸಿ ಮಾಂಸದ ಅಡಿಗೆ ಮಾಡುತ್ತಾರೆ.

ರಾಮನವಮಿ: ಯುಗಾದಿ ಆದ ೯ ದಿನಕ್ಕೆ ರಾಮನವಮಿ ಆಚರಿಸುತ್ತಾರೆ. ಮರಾಠಿಗರು ಶ್ರೀರಾಮನ ಭಕ್ತರು. ಇವರು ಅಂದು ರಾಮನನ್ನು ಪೂಜಿಸಿ ಪಾನಕ ಕೋಸಂಬರಿ ಮಾಡಿ ನೈವೇದ್ಯ ಮಾಡುತ್ತಾರೆ.

ಆರತಿ (ಬಸವಜಯಂತಿ): ಬಸವಜಯಂತಿಯನ್ನು ಸಹ ಶ್ರದ್ಧೆಯಿಂದ ಆಚರಿಸುತ್ತಾರೆ. ಇದನ್ನು ಇವರು ಅಕಿತಿ ಎಂದು ಕರೆಯುತ್ತಾರೆ. ಅಂದು ಇವರು ಶಂಕರನನ್ನು ಪೂಜಿಸಿ ಪಾಯಸ ಮಾಡಿ

ನೈವೇದ್ಯ ಮಾಡುತ್ತಾರೆ. ವಿಶೇಷವಾಗಿ ಮನೆಗೆ ಚಿನ್ನವನ್ನು ಕೊಳ್ಳುತ್ತಾರೆ. ಅಕ್ಷಯತದಿಗೆ ಮರಾಠಿಗರಲ್ಲಿ ಅಕಿತಿ ಎಂದಾಗಿದೆ.

ವೈಕುಂಠ ಏಕಾದಶಿ: ವೈಕುಂಠ ಏಕಾದಶಿಯನ್ನು ತುಂಬ ಶ್ರದ್ಧೆಯಿಂದ ಮಾಡುತ್ತಾರೆ. ಅಂದು ಇವರು ಅನ್ನವನ್ನು ತಿನ್ನುವುದಿಲ್ಲ. ಕೆಲವರು ಉಪವಾಸ ಇರುತ್ತಾರೆ. ಇಲ್ಲದಿರುವರು ಉಪ್ಪಿಟ್ಟು ತಿನ್ನುತ್ತಾರೆ. ಈ ಹಬ್ಬಕ್ಕೆ ಅಳಿಯ ಮಗಳನ್ನು ಕರೆಯುತ್ತಾರೆ. ಉಪ್ಪಿಟ್ಟು, ಚಕ್ಕುಲಿ, ಕೋಡುಬಳೆ, ಕಜ್ಜಾಯ ನಿಪ್ಪಟ್ಟು ಈ ಹಬ್ಬದಲ್ಲಿ ಮಾಡುವ ತಿಂಡಿಗಳಾಗಿವೆ.

ಮಾರನೆದಿನ 'ದುವಾದಶಿ' ಅಂದು ಹೋಳಿಗೆ ಅಡಿಗೆ ಮಾಡಿ ಅಳಿಯ ಮಗಳಿಗೆ ಬಡಿಸುತ್ತಾರೆ. ಏಕಾದಶಿಯಂದು ಪೂಜೆ ಆದ ನಂತರ ತುಳಸಿದಳ ತಿಂದು ಫಲಾಹಾರ ಸೇವಿಸುತ್ತಾರೆ. ಈ ಹಬ್ಬದಲ್ಲಿ ಹಲಸಿನ ಹಣ್ಣು, ಬಾಳೆಹಣ್ಣು, ಕಲ್ಲಂಗಡಿ ಹಣ್ಣನ್ನು ಹೆಚ್ಚಾಗಿ ತಿನ್ನುತ್ತಾರೆ.

ಶ್ರಾವಣಮಾಸ: ಶ್ರಾವಣಮಾಸ ಇವರಿಗೆ ತುಂಬ ಶ್ರೇಷ್ಠ. ಈ ಮಾಸ ಬರುವ ಮೊದಲು ಮನೆಯೆಲ್ಲ ಸ್ವಚ್ಛಗೊಳಿಸಿ ಸುಣ್ಣಬಣ್ಣ ಮಾಡಿ ಸ್ವಚ್ಛಗೊಳಿಸುತ್ತಾರೆ. ಈ ಮಾಸದಲ್ಲಿ ಇವರು ಮಾಂಸಾಹಾರವನ್ನು ಬಳಸುವುದಿಲ್ಲ.

ಭೀಮನಮವಾಸ್ಯೆ: ಶ್ರಾವಣ ಮಾಸವು ಈ ಅಮಾವಾಸ್ಯೆಯಿಂದ ಪ್ರಾರಂಭವಾಗುತ್ತದೆ. ಭೀಮನ ಅಮಾವಾಸ್ಯೆಯನ್ನು ಮನೆಯಲ್ಲಿ ಪೂಜೆ ಮಾಡಿ ಗಂಡನ ಪೂಜೆ ಮಾಡಿ ಅವನಿಂದ ಆಶೀರ್ವಾದ ಪಡೆದು ನಂತರ ಅಶ್ವತ್ಥಕಟ್ಟೆಗೆ ಹೋಗಿ ಪೂಜೆ ಮಾಡಿ ಬರುತ್ತಾರೆ. ನಂತರ ಮನೆಯಲ್ಲಿ ಸಿಹಿ ಅಡಿಗೆ ಮಾಡಿ ನೈವೇದ್ಯ ಮಾಡಿ ಊಟ ಮಾಡುತ್ತಾರೆ.

ನಾಗರಪಂಚಮಿ: ನಾಗರಪಂಚಮಿಯನ್ನು ತುಂಬ ಶ್ರದ್ಧೆಯಿಂದ ಆಚರಿಸುತ್ತಾರೆ. ಪಂಚಮಿಯ ಮೊದಲ ದಿನ ಅಂದರೆ ಚೌತಿಯಂದು ಒಂದು ಬಿಳಿ ಹಾಳೆಯಲ್ಲಿ ೫ ರೀತಿಯ ನಾಗರಹಾವನ್ನು ಗಂಧದಲ್ಲಿ ಬಿಡಿಸಿ ಅದಕ್ಕೆ ಬಣ್ಣಗಳನ್ನು ತುಂಬಿ ಒಂದು ಗೋಡೆಯ ಮೇಲೆ ಹಾಕುತ್ತಾರೆ. ಇದನ್ನು ಶ್ರಾವಣ ಮಾಸ ಆಗುವವರೆಗೆ ತೆಗೆಯುವುದಿಲ್ಲ. ಚೌತಿಯಂದು ನಾಗಪ್ಪನನ್ನು ಪೂಜಿಸಿ ನೈವೇದ್ಯಕ್ಕೆ ಚಿತ್ರಾನ್ನ ಮಾಡಿ ಮನೆಯ ದೇವರಿಗೆ ಮತ್ತು ಹುತ್ತಕ್ಕೆ ಹೋಗಿ ಹಾಲು ಹಾಕಿ ಚಿತ್ರಾನ್ನ ನೈವೇದ್ಯ ಮಾಡಿ ಬರುತ್ತಾರೆ.

ಪಂಚಮಿಯಂದು ಮನೆಯಲ್ಲಿ ಪೂಜೆ ಮಾಡಿ ನೈವೇದ್ಯಕ್ಕೆ ಎಳ್ಳಿನ ಕಡುಬು ಮಾಡಿ ನೈವೇದ್ಯ ಮಾಡುತ್ತಾರೆ. ಅನ್ನ, ಸಾರು, ಎಳ್ಳಿನ ಕಡುಬನ್ನು ಹುತ್ತಕ್ಕೆ ಪೂಜೆ ಮಾಡಿ ನೈವೇದ್ಯ

ಮಾಡಿ ೫ ದಾರವನ್ನು ಪೂಜೆ ಮಾಡಿ ಆ ದಾರವನ್ನು ಕೈಗೆ ಕಟ್ಟಿಕೊಳ್ಳುತ್ತಾರೆ. ಹೀಗೆ ನಾಗರಪಂಚಮಿಯನ್ನು ತುಂಬ ಭಕ್ತಿ ಶ್ರದ್ಧೆಯಿಂದ ಆಚರಿಸುತ್ತಾರೆ. ಹುತ್ತದ ಮಣ್ಣನ್ನು ತಾವು ಹಚ್ಚಿಕೊಂಡು ಮನೆಗೂ ಪ್ರಸಾದವೆಂದು ತರುತ್ತಾರೆ. ಶ್ರಾವಣಮಾಸ ಮುಗಿಯುವವರೆಗೂ ಪ್ರತಿ ಶನಿವಾರ ಹುತ್ತಕ್ಕೆ ಹಾಲು ಎರೆಯುತ್ತಾರೆ.

ಶ್ರಾವಣ ಮಾಸದಲ್ಲಿ ಇವರು ಸಿರಿಯಾಳಷಷ್ಟಿ ಮಂಗಳಗೌರಿ ವ್ರತವನ್ನು ಆಚರಿಸುತ್ತಾರೆ. ಆದರೆ ಈ ಪೂಜೆ ಕೆಲವು ಮನೆತನಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಸಿರಿಯಾಳ ಷಷ್ಟಿಯನ್ನು ಘಾಟ್ಗೆ ವಂಶಸ್ಥರು ಶಿರಿಯಾಳನ ಮೂರ್ತಿಯನ್ನು ಮಾಡಿ ಪೂಜಿಸಿ ಬಂಧುಗಳನ್ನು ಕರೆಸಿ ಸಿಹಿ ಅಡಿಗೆ ಮಾಡಿ ಬಡಿಸಿ ನಂತರ ಸಂಜೆ ಕೆರೆಯಲ್ಲಿ ಸಿರಿಯಾಳನನ್ನು ವಿಸರ್ಜಿಸುತ್ತಾರೆ.

ಮಂಗಳಗೌರಿ ವ್ರತವನ್ನು ಬೋಬಡೆ ವಂಶಜರು ಮತ್ತು ಚೌಹಾಣ್ ವಂಶದವರು ಮಾಡುತ್ತಾರೆ. ಶ್ರಾವಣ ಮಾಸ ಪ್ರಾರಂಭವಾದ ಮೊದಲ ಮಂಗಳವಾರದಿಂದ ಕೊನೆಯ ಮಂಗಳವಾರದವರೆಗೆ ಪೂಜಿಸುತ್ತಾರೆ. ಕೊನೆಯ ಮಂಗಳವಾರ ಮುತ್ತೈದೆಯರನ್ನು ಕರೆಸಿ ಬಾಗಿನ ನೀಡಿ ಸಿಹಿ ಅಡಿಗೆ ಮಾಡಿ ಊಟ ಬಡಿಸುತ್ತಾರೆ. ನಂತರ ಸಂಜೆ ಮಂಗಳಗೌರಿಯನ್ನು ಕೆರೆಗೆ ಬಿಡುತ್ತಾರೆ.

ರಕ್ಷಾಬಂಧನ: ಈ ಹಬ್ಬಕ್ಕೆ ಹೊಸದಾಗಿ ಮದುವೆಯಾದ ಅಳಿಯ ಮಗಳನ್ನು ಕರೆಯುತ್ತಾರೆ. ಅಳಿಯನಿಗೆ ಬೆಳ್ಳಿಯ ತಾಯತ, ಮತ್ತು ಜನಿವಾರ ಹಾಕುತ್ತಾರೆ. ಹೆಣ್ಣು ಮಕ್ಕಳು ತಮ್ಮ ಅಣ್ಣ-ತಮ್ಮಂದಿರಿಗೆ ರಾಕಿಯನ್ನು ಕಟ್ಟುತ್ತಾರೆ. ಅಂದು ಸಹ ಹೋಳಿಗೆ ಅಡಿಗೆ ಮಾಡಿ ಅಳಿಯ ಮಗಳಿಗೆ ಬಡಿಸಿ ಅವರಿಗೆ ಹೊಸ ಬಟ್ಟೆಯನ್ನು ಉಡುಗೊರೆಯಾಗಿ ನೀಡುತ್ತಾರೆ.

ಗೌರಿಹಬ್ಬ: ಹಿಂದೂಗಳು ಗೌರಿಹಬ್ಬವನ್ನು ಗಣೇಶ ಹಬ್ಬಕ್ಕೆ ಮೊದಲು ಆಚರಿಸುತ್ತಾರೆ. ಅದು ಸ್ವರ್ಣಗೌರಿ ವ್ರತ. ಆದರೆ ಮರಾಠಿಗರು ಗಜಗೌರಿ ವ್ರತವನ್ನು ಆಚರಿಸುತ್ತಾರೆ. ಗಜಗೌರಿ ಸಪ್ತಮಿಯಂದು ಪ್ರಾರಂಭವಾಗುತ್ತದೆ. ಮರಾಠಿಗರು ೩ ದಿನ ಗೌರಿ ಹಬ್ಬವನ್ನು ಆಚರಿಸುತ್ತಾರೆ.

ಮೊದಲನೆ ದಿನ ಅಂದರೆ ಸಪ್ತಮಿಯಂದು ಮನೆಯಲ್ಲಿಯೇ ಇರುವ ಹಿತ್ತಾಳೆಯ ಗೌರಮ್ಮನ ಮೂರ್ತಿಗೆ ಚಿನ್ನದ ಒಡವೆಗಳಿಂದ ಅಲಂಕರಿಸಿ, ಹೊಸ ಸೀರೆ ಉಡಿಸಿ ಗೌರಮ್ಮನನ್ನು ಕರೆದುಕೊಳ್ಳುತ್ತಾರೆ. ಗೌರಮ್ಮನಿಗೆ ಉಡಿ ಕಟ್ಟಿರುತ್ತಾರಲ್ಲದೆ ನಂತರ ಗೌರಮ್ಮನನ್ನು ಕೂರಿಸಿ ಆಕೆಗೆ ಎಲ್ಲಾ ವಿಧವಾದ ಧಾನ್ಯಗಳ ರೊಟ್ಟಿ ಮತ್ತು ಸೊಪ್ಪಿನ ಪಲ್ಯ ಮಾಡಿ ನೈವೇದ್ಯ ಮಾಡುತ್ತಾರೆ. ಮೊದಲನೆ ದಿನ ರೊಟ್ಟಿ ಸೊಪ್ಪಿನ ಪಲ್ಯ ನೈವೇದ್ಯವಾಗಿರುತ್ತದೆ.

ಎರಡನೆ ದಿನ ಅಂದರೆ ಅಷ್ಟಮಿಯಂದು ಗೌರಮ್ಮನಿಗೆ ಹೋಳಿಗೆ ಮಾಡಿ ನೈವೇದ್ಯ ಮಾಡುತ್ತಾರೆ. ಮತ್ತು ಅಂದು ಮನೆ ಮಗಳಿಗೆ ಬಾಗಿನ ಕಳುಹಿಸುತ್ತಾರೆ. ಬಾಗಿನದಲ್ಲಿ ಅಕ್ಕಿ, ಎಳ್ಳು, ಹುರುಗಡ್ಲೆ, ಕಡ್ಲೆಬೀಜ, ಬೆಲ್ಲ, ಎಲೆ–ಅಡಿಕೆ, ಅರಿಶಿನ–ಕುಂಕುಮ, ಹೂವು, ತೆಂಗಿನಕಾಯಿ, ಗಂಧದಕಡ್ಡಿ, ಕರ್ಪೂರ, ರವಿಕೆ ಕಣ ಕಳುಹಿಸುತ್ತಾರೆ. ಈ ಬಾಗಿನದಿಂದ ಆ ಹೆಣ್ಣುಮಕ್ಕಳು ತಮ್ಮ ಮನೆಯ ಗೌರಿಯನ್ನು ಪೂಜಿಸುತ್ತಾರೆ.

ನಂತರ ೩ನೇ ದಿನ ನವಮಿಯಂದು ಗೌರಮ್ಮನನ್ನು ದೇವರ ಮನೆಯಿಂದ ಹೊರಗೆ ಕೂರಿಸಿ ಪೂಜಿಸಿ ಮೊದಲನೆ ದಿನ ತುಂಬಿದ ಮಡಿಲಕ್ಕಿಯನ್ನು ತೆಗೆದು ಆ ಅಕ್ಕಿಯಿಂದ ಸಿಹಿ ಪೊಂಗಲ್ ಮಾಡಿ ನೈವೇದ್ಯ ಮಾಡುತ್ತಾರೆ. ಮತ್ತು ೫ ದಾರಗಳಲ್ಲಿ ಕೊಬ್ಬರಿಯನ್ನು ಚಿಕ್ಕದಾಗಿ ಕತ್ತರಿಸಿಕೊಂಡು ಕಟ್ಟುತ್ತಾರೆ. ಇದರ ಜೊತೆಗೆ ಹೂವು, ಎಲೆಗಳನ್ನು ಸೇರಿಸಿ ಕಟ್ಟುತ್ತಾರೆ. ನಂತರ ಇದನ್ನು ದೇವರ ಮುಂದೆ ಇಟ್ಟು ಪೂಜಿಸಿ ತಮ್ಮ ಮಡಿಲಿಗೆ ಹಾಕಿಕೊಂಡು ದೇವರಿಗೆ ಪೂಜಿಸಿ ಹಿರಿಯರ ಆಶೀರ್ವಾದ ಪಡೆಯುತ್ತಾರೆ. ಮತ್ತು ಮನೆಮನೆಗೆ ಹೋಗಿ ಮುತ್ತೈದೆಯರಿಗೆ ಕುಂಕುಮ ಹಚ್ಚಿ ಹಿರಿಯರ ಆಶೀರ್ವಾದ ಪಡೆಯುತ್ತಾರೆ. ಹೀಗೆ ಗೌರಿ ಹಬ್ಬವನ್ನು ಮರಾಠಿಗರು ತಮ್ಮದೆ ವಿಶಿಷ್ಟತೆಯೊಂದಿಗೆ ಆಚರಿಸುತ್ತಾರೆ.

ಪಕ್ಷಮಾಸ: ಗೌರಿಹಬ್ಬವಾದ ಮೇಲೆ ಬರುವ ಹುಣ್ಣಿಮೆಯಿಂದ ಅಮಾವಾಸ್ಯೆಯವರೆಗೆ ಪಕ್ಷಮಾಸ ಇರುತ್ತದೆ. ಈ ೧೫ ದಿನದಲ್ಲಿ ಪ್ರತಿಯೊಬ್ಬರ ಮನೆಯಲ್ಲೂ ಸಹ ಅವರವರ ಮನೆತನಕ್ಕೆ ಬಂದಂತೆ ಪಿತೃ ಕಾರ್ಯವನ್ನು ಮಾಡುತ್ತಾರೆ. ಈ ದಿನದಂದು ಬ್ರಾಹ್ಮಣರನ್ನು ಕರೆಸಿ ತಮ್ಮ ಪೂರ್ವಜರ ಪಿಂಡವನ್ನು ಇಡಿಸಿ, ತರ್ಪಣ ಬಿಡಿಸಿ ಅದಕ್ಕೆ ನೈವೇದ್ಯ ತೋರಿಸುತ್ತಾರೆ. ನಂತರ ತಮ್ಮ ಬಂಧುಗಳನ್ನೆಲ್ಲ ಕರೆದು ಊಟ ಬಡಿಸುತ್ತಾರೆ. ಅಡಿಗೆಗೆ ಹೋಳಿಗೆ, ಹಪ್ಪಳ, ೫ ಬಗೆಯ ತರಕಾರಿಗಳನ್ನು ಮಾಡಿರುತ್ತಾರೆ. ಈ ೧೫ ದಿನಗಳಲ್ಲೂ ಸಹ ಮರಾಠಿಗರು ಮಾಂಸಾಹಾರವನ್ನು ಮಾಡುವುದಿಲ್ಲ.

ಮಹಾಲಯ ಅಮಾವಾಸ್ಯೆ: ಈ ಅಮಾವಾಸ್ಯೆಯಿಂದ ನವರಾತ್ರಿಗಳು ಪ್ರಾರಂಭವಾಗುತ್ತದೆ. ಈ ಅಮಾವಾಸ್ಯೆಯ ದಿನದಂದು ದೇವರನ್ನು ಕೂರಿಸುತ್ತಾರೆ. ಎಲ್ಲಾ ಕಾಳುಗಳನ್ನು ನೆನೆಸಿ ಕರೆಯಿಂದ ಮಣ್ಣನ್ನು ತಂದು ಅಗಲವಾದ ತಾಂಬಾಳೆ ತಟ್ಟೆಯಲ್ಲಿ ಹಾಕಿ ಈ ಕಾಳುಗಳನ್ನು ಅದರಲ್ಲಿ ಹಾಕುತ್ತಾರೆ. ನಂತರ ಅದರ ಮಧ್ಯ ಕಳಶ ಇಟ್ಟು ಪೂಜಿಸುತ್ತಾರೆ. ಇದು ವಿಜಯದಶಮಿಯವರೆಗೂ ಇರುತ್ತದೆ. ಆ ಕಾಳುಗಳು ಮೊಳೆತು ಗಿಡವಾಗಿ ಕಳಶದ ಮೇಲೆ ಬೆಳೆಯುತ್ತವೆ. ಮತ್ತೊಂದು ವಿಶೇಷವೆಂದರೆ ದೇವರು ಕೂರಿಸಿದ ದಿನ ಹಚ್ಚಿದ ದೀಪಗಳು ವಿಜಯದಶಮಿಯವರೆಗೂ ಆರದಂತೆ ಅದಕ್ಕೆ ಎಣ್ಣೆ ಹಾಕಿ ನೋಡಿಕೊಳ್ಳುತ್ತಾರೆ. ಪ್ರತಿದಿನ

ಒಂದು ಹೂವಿನ ಮಾಲೆಯನ್ನು ದೇವರಿಟ್ಟಿರುವ ಕಳಶದ ಮೇಲೆ ಬೀಳುವಂತೆ ಹಾಕಬೇಕು. ಹಾಗೆಯೇ ವೀಳ್ಯದೆಲೆಯಿಂದ ಮಾಡಿದ ಹಾರವನ್ನು ಹಾಕುತ್ತಾರೆ. ಮೈದಾ ಹಿಟ್ಟಿನಿಂದ ಅನೇಕ ಆಕಾರಗಳಲ್ಲಿ ಚಿತ್ರದ ರೀತಿ ತಿಂಡಿಯನ್ನು ಕರಿದು ದೇವರು ಕೂರಿಸಿರುವ ಗದ್ದಿಗೆಯನ್ನು ಅಲಂಕರಿಸುತ್ತಾರೆ. ಇವುಗಳಿಗೆ 'ಕಡಕನ್' ಎಂದು ಕರೆಯುತ್ತಾರೆ. ಮಹಾಲಯ ಅಮಾವಾಸ್ಯೆಯಲ್ಲಿ ೫ ಜನ ಚಿಕ್ಕ ಹುಡುಗಿಯರನ್ನು ಕರೆದು ಅವರಿಗೆ ಪೂಜಿಸಿ ನೈವೇದ್ಯಕ್ಕೆ ಮಾಡಿದ ಚಿತ್ರಾನ್ನವನ್ನು ಕೊಡುತ್ತಾರೆ. ಚಿಕ್ಕ ವಯಸ್ಸಿನ ಹೆಣ್ಣು ಮಕ್ಕಳನ್ನು ಪೂಜಿಸಿದರೆ ಚಾಮುಂಡಿಯನ್ನು ಪೂಜಿಸಿದಂತೆ ಎಂದು ಮರಾಠಿಗರ ನಂಬಿಕೆ. ಹೀಗೆ ಮಹಾಲಯ ಅಮಾವಾಸ್ಯೆಯಿಂದ ನವರಾತ್ರಿಯ ಹಬ್ಬಕ್ಕೆ ಚಾಲನೆ ದೊರೆಯುತ್ತದೆ.

ಆಯುಧಪೂಜೆ: ಆಯುಧಪೂಜೆಯಂದು ಮನೆಯಲ್ಲಿನ ಎಲ್ಲಾ ಆಯುಧಗಳಿಗೂ ಪೂಜಿಸುತ್ತಾರೆ. ನಂತರ ಸಂಜೆ ಮನೆಯಲ್ಲಿರುವ ಕತ್ತಿಯನ್ನು ತೆಗೆದು ಎಲ್ಲರೂ ಒಟ್ಟಿಗೆ ಕೆರೆಗೆ ಹೋಗಿ ತೊಳೆದುಕೊಂಡು ಬರುತ್ತಾರೆ. ಈ ಸಂದರ್ಭದಲ್ಲಿ ಮನೆಯ ಮಗ ಪೇಟ ಧರಿಸಿ ಕೆರೆಗೆ ಹೋಗಿ ಬರುತ್ತಾನೆ. ನಂತರ ಕೆರೆಯ ಬಳಿ ಬಂದು ಒಂದು ಹೋತವನ್ನು ಬಲಿ ನೀಡಿ ಎಲ್ಲರೂ ತಮ್ಮ ತಮ್ಮ ಕತ್ತಿಗಳಿಗೆ ರಕ್ತವನ್ನು ತಾಗಿಸುತ್ತಾರೆ. ಹೀಗೆ ಮಾಡುವುದರ ಉದ್ದೇಶವೆಂದರೆ ಕತ್ತಿಗೆ ಬಲಿ ಕೊಟ್ಟಂತಾಗುತ್ತದೆ ಎಂಬುದಾಗಿದೆ. ಮನೆಗೆ ಬಂದು ಕತ್ತಿಯನ್ನು ಪೂಜಿಸುತ್ತಾರೆ. ನೈವೇದ್ಯಕ್ಕೆ ಮಾಂಸದ ಅಡಿಗೆಯನ್ನು ಮಾಡಿ ನೈವೇದ್ಯ ಮಾಡುತ್ತಾರೆ. ಕೆರೆಯಿಂದ ಬರುವಾಗ ೫ ಕಲ್ಲುಗಳನ್ನು ತಂದು ಪಾಂಡವರೆಂತಲೂ ಪೂಜಿಸುತ್ತಾರೆ. ಕೆರೆಯ ಬಳಿ ಬನ್ನಿ ಮರ ಮತ್ತು ಚೆಲ್ಲರೆ ಮರಗಳನ್ನು ಕತ್ತರಿಸಿ ಆ ಎರಡು ಮರಗಳ ಎಲೆಗಳನ್ನು ಮನೆಗೆ ತರುತ್ತಾರೆ.

ವಿಜಯದಶಮಿ: ವಿಜಯದಶಮಿಯಂದು ಮನೆಯಲ್ಲಿ ಪೂಜೆ ಸಲ್ಲಿಸಿ ಸಿಹಿ ನೈವೇದ್ಯ ಮಾಡುತ್ತಾರೆ. ಸಂಜೆ ದೇವರ ಮೆರವಣಿಗೆ ತೆಗೆದು ಮೆರವಣಿಗೆಯೊಂದಿಗೆ ಮರಾಠಿ ಗಂಡುಮಕ್ಕಳು ಪೂಜಿಸಿದ ಕತ್ತಿಯನ್ನು ತೆಗೆದುಕೊಂಡು ಕೆರೆಯ ಬಳಿ ಹೋಗುತ್ತಾರೆ. ಹೆಂಗಳೆಯರು ಅಮಾವಾಸ್ಯೆಯ ದಿನದಂದು ಕೂರಿಸಿದ ಕುಂಭವನ್ನು ಮೆರವಣಿಗೆ ಹೊತ್ತು ತಂದು, ಗಂಗೆ ಪೂಜೆ ಮಾಡಿ ಆ ಬೆಳೆದ ಕುಂಭವನ್ನು ಅಶ್ವತ್ಥ ಕಟ್ಟೆಯಲ್ಲಿ ಮತ್ತು ಕೆರೆಗೆ ಬಿಡುತ್ತಾರೆ. ಗಂಡುಮಕ್ಕಳು ಬನ್ನಿ ಮರಕ್ಕೆ ಪೂಜೆ ಮಾಡಿ ಮರವನ್ನು ಕತ್ತರಿಸಿ ಅದರ ಎಲೆಗಳನ್ನು ಮನೆಗೆ ತರುತ್ತಾರೆ. ನಂತರ ಮನೆಯಲ್ಲಿ ಮುತ್ತೈದೆಯರು ಅವರಿಗೆ ಆರತಿ ಮಾಡಿ ಮನೆಯೊಳಗೆ ಕರೆದುಕೊಳ್ಳುತ್ತಾರೆ. ಮನೆಯಲ್ಲಿ ಕೂರಿಸಿ ಆರತಿ ಮಾಡಿದಾಗ ಗಂಡುಮಕ್ಕಳು ಬನ್ನಿಮರದ ಎಲೆಗಳನ್ನು ಮತ್ತು ಕಾಣಿಕೆ ದುಡ್ಡನ್ನು ತಟ್ಟೆಯಲ್ಲಿ ಹಾಕುತ್ತಾರೆ. ಬನ್ನಿ ಮರದ ಎಲೆಗಳು ಚಿನ್ನದಂತೆ ಎಂಬುದು ಕ್ಷತ್ರಿಯರಾದ ಮರಾಠಿಗರ ನಂಬಿಕೆ.

ತುಳಸಿ ಮದುವೆ: ಈ ಹಬ್ಬದಂದು ತುಳಸಿ ಮಾತೆಗೆ ಅಂದರೆ ತುಳಸಿ ಬೃಂದಾವನಕೆ ಚಪ್ಪರ ಹಾಕಿ ನೆಲ್ಲಿಕಾಯಿಯ ಗಿಡದ ಕೊಂಬೆಯನ್ನು ತುಳಸಿ ಗಿಡದ ಪಕ್ಕದಲ್ಲಿಟ್ಟು ಲಗ್ನ ಮಾಡುತ್ತಾರೆ. ಹಾಗೆಯೇ ಮಂಗಳದ್ರವ್ಯಗಳನ್ನು ಇಟ್ಟು ಪೂಜಿಸುತ್ತಾರೆ. ತುಳಸಿಗೆ ಉಡಿ ತುಂಬಿ ಮುತ್ತೈದೆಯರನ್ನು ಕರೆದು ಅರಿಶಿನ ಕುಂಕುಮ ಕೊಡುತ್ತಾರೆ.

ಬೋಗಿಹಬ್ಬ: ಈ ಹಬ್ಬವು ಸಂಕ್ರಾಂತಿ ಹಬ್ಬದ ಹಿಂದಿನ ದಿನ ಆಚರಿಸುವ ಪ್ರಮುಖ ಹಬ್ಬವಾಗಿದೆ. ಈ ದಿನದಂದು ಹೆಂಗಳೆಯರು ಬೆಳಗಿನ ಜಾವ ಎದ್ದು ಮನೆಯಲ್ಲಿ ದೇವರನ್ನು ಪೂಜಿಸಿ ಅಶ್ವತ್ಥ ಕಟ್ಟೆಗೆ ಹೋಗಿ ಪೂಜೆ ಸಲ್ಲಿಸಿ ಹುತ್ತಕ್ಕೆ ಹಾಲು ಎರೆದು ಬರುತ್ತಾರೆ. ದೇವಾಲಯದಲ್ಲಿ ಮುತ್ತೈದೆಯರು ಪರಸ್ಪರ 'ಪುರಿ',[೧] ಎಲೆ, ಅಡಿಕೆ ಬಾಳೆಹಣ್ಣುಗಳಿಂದ ಉಡಿ ತುಂಬುತ್ತಾರೆ. ಮನೆಮನೆಗೆ ಹೋಗಿ ಕುಂಕುಮ ಹಚ್ಚಿ ತರಕಾರಿ ವಿನಿಮಯ ಮಾಡಿಕೊಳ್ಳುತ್ತಾರೆ. ಬೋಗಿ ಹಬ್ಬದಂದು ಪ್ರತಿಯೊಂದು ತರಕಾರಿಯನ್ನು ಹಾಕಿ 'ಕೆಂದಟ್' ಎಂಬ ಪಲ್ಯವನ್ನು ಮಾಡಿ ರೊಟ್ಟಿ ಹಾಕಿ ನೈವೇದ್ಯ ತೋರಿಸುತ್ತಾರೆ.

ಮಹಾಶಿವರಾತ್ರಿ: ಈ ಹಬ್ಬಕ್ಕೆ ಏಕಾದಶಿ ಎಂದು ಕರೆಯುತ್ತಾರೆ. ಈ ಹಬ್ಬಕ್ಕೂ ಅಳಿಯ ಮಗಳನ್ನು ಕರೆಯುತ್ತಾರೆ. ಈ ಹಬ್ಬಕ್ಕೆ ಬೇರೆ ಜನಾಂಗದ ರೀತಿಯಲ್ಲೇ ಉಪ್ಪಿಟ್ಟು ಮಾತ್ರ ಮಾಡುತ್ತಾರೆ. ಉಪವಾಸ ಜಾಗರಣೆ ಮಾಡುವುದು ಅವರ ಮನಸ್ಥಿತಿಗೆ ಬಿಟ್ಟದ್ದಾಗಿದೆ. ಉಪವಾಸ ಮಾಡುವವರು ಜಾಗರಣೆ ಮಾಡಿ ಬೆಳಿಗ್ಗೆ ಪುನಃ ಸ್ನಾನ ಮಾಡಿ ಶಿವನನ್ನು ಪೂಜಿಸುತ್ತಾರೆ. ಶಿವರಾತ್ರಿಯಂದು ಶಿವನ ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸಿ ಬಿಲ್ವಪತ್ರೆ ತಿಂದು ನಂತರ ಫಲಹಾರ ತಿನ್ನುತ್ತಾರೆ. ಈ ಹಬ್ಬದಲ್ಲಿ ಹೆಚ್ಚು ಹಣ್ಣುಗಳನ್ನು ತಿನ್ನುತ್ತಾರೆ.

ಹೋಳಿಹಬ್ಬ: ಹೋಳಿ ಹಬ್ಬದಲ್ಲಿ ಗ್ರಾಮದಲ್ಲೆಲ್ಲ ಸೌದೆ ಬೆರಣಿಯನ್ನು ತಂದು ವಿಠೋಬ ದೇವಾಲಯದ ಎದುರು ಒಟ್ಟಲು ಮಾಡುತ್ತಾರೆ. ಕಾಮದಹನ ಅಥವಾ ಹೋಳಿಹಬ್ಬವನ್ನು ಮರಾಠಿಗರು ಮಾತ್ರ ಆಚರಿಸುತ್ತಾರೆ. ಸೌದೆ ರಾಶಿಗೆ ಒಂದು ಜೀವಂತ ಕೋಳಿಯನ್ನು ಕಟ್ಟಿ ಕಾಮಣ್ಣನನ್ನು ಸುಡುತ್ತಾರೆ. ಹೋಳಿ ಹಬ್ಬವಾದ ನಂತರ ೨ ದಿನ ಬಣ್ಣದ ಹಬ್ಬ ಎಂದರೆ ಪರಸ್ಪರ ಬಣ್ಣ ಬಳಿದುಕೊಂಡು ಹೋಳಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಕಾಮಣ್ಣನನ್ನು ಸುಟ್ಟ ಮೂರನೇ ದಿನಕ್ಕೆ ಶಾಂತಿ ಮಾಡಿ ಎಲ್ಲರಿಗೂ ಪುರಿ, ಪಾನಕ ಹಂಚುತ್ತಾರೆ. ಮರಾಠಿಗರೆಲ್ಲರೂ ಸೇರಿ ವರಿ ದುಡ್ಡಿನಿಂದ ಮಾಂಸದ ಅಡುಗೆ ಮಾಡಿ ಕಾಮಣ್ಣನಿಗೆ ನೈವೇದ್ಯ ಮಾಡುತ್ತಾರೆ.

---

[೧] ಮರಾಠಿಗರಲ್ಲಿ ಅಕ್ಕಿಯ ಬದಲು ಪುರಿಯಿಂದ ಉಡಿ ತುಂಬುವುದು ಸಂಪ್ರದಾಯದ ವಿಶೇಷತೆ.

ದುರ್ಗಾಷ್ಟಮಿ: ದುರ್ಗಾಷ್ಟಮಿಯಂದು ೫ ಜನ ಚಿಕ್ಕ ಹುಡುಗಿಯನ್ನು ಮನೆಗೆ ಕರೆತಂದು ಪೂಜಿಸಿ, ಅವರಿಗೆ ಕಾಣಿಕೆ ನೀಡುತ್ತಾರೆ. ನೈವೇದ್ಯಕ್ಕೆಂದು ಮಾಡಿದ ಚಿತ್ರಾನ್ನವನ್ನು ಊಟಕ್ಕೆ ಬಡಿಸುತ್ತಾರೆ. ಹೆಣ್ಣು ಮಕ್ಕಳನ್ನು ಪೂಜಿಸುವುದು ದುರ್ಗೆಯನ್ನು ಪೂಜಿಸಿದಂತೆ ಎಂಬುದು ಮರಾಠಿಗರ ನಂಬಿಕೆ. ಸಂಜೆ ಮಠಕ್ಕೆ ಹೋಗಿ ಪೂಜೆ ಸಲ್ಲಿಸಿ ಬರುತ್ತಾರೆ.

ಮಕರಸಂಕ್ರಾಂತಿ: ಸಂಕ್ರಾಂತಿ ಹಬ್ಬಕ್ಕೂ ಮರಾಠಿಗರು ಹೆಣ್ಣು ಮಕ್ಕಳಿಗೆ ಬಾಗಿನ ನೀಡುತ್ತಾರೆ. ಈ ಹಬ್ಬದಲ್ಲಿ ೫ ಚಿಕ್ಕ ಮಣ್ಣಿನ ಮಡಿಕೆಗಳನ್ನು ಜೋಡಿಸಿ ಅವುಗಳಿಗೆ ರವಿಕೆ ಬಟ್ಟೆ ಹೊದಿಸಿ ಉಡಿ ತುಂಬುತ್ತಾರೆ. ನೈವೇದ್ಯಕ್ಕೆ ಹೋಳಿಗೆ ಮಾಡುತ್ತಾರೆ. ನಂತರ ಸಂಜೆ ಎಳ್ಳುಬೆಲ್ಲ ಹಂಚುತ್ತಾರೆ.

'ಮರಾಠಿಗರಲ್ಲಿ ಅಪರಕಾರ್ಯ'

ಮರಾಠಿಗರಲ್ಲಿ ಶವಸುಡುವ ಸಂಪ್ರದಾಯವನ್ನು ಅಳವಡಿಸಿಕೊಂಡಿದ್ದಾರೆ. ಆದರೆ ಮದುವೆಯಾಗದವರಿಗೆ ಮತ್ತು ಮಕ್ಕಳಿಗೆ ಹೂಳುತ್ತಾರೆ. ಸಂಪ್ರದಾಯದಂತೆ ತಂದೆಗೆ ಹಿರಿಯ ಮಗ ಮತ್ತು ತಾಯಿಗೆ ಕಿರಿಯ ಮಗ ಅಗ್ನಿಸ್ಪರ್ಶ ಮಾಡುತ್ತಾರೆ. ಮರಾಠಿಗರಲ್ಲಿ ಸ್ತ್ರೀಯರು ಶವಯಾತ್ರೆ ಸಂದರ್ಭದಲ್ಲಿ ಸ್ಮಶಾನಕ್ಕೆ ಹೋಗುವ ಹಾಗಿಲ್ಲ.

ಶವಸಂಸ್ಕಾರವಾದ ಮೂರನೆ ದಿನಕ್ಕೆ 'ಕಾರ್ಯ' ಎಂಬ ಆಚರಣೆಯನ್ನು ಮಾಡುತ್ತಾರೆ. ಈ ದಿನ ಒಂದು ಮೊರದಲ್ಲಿ ಆ ವ್ಯಕ್ತಿ ತಿನ್ನಲು ಇಷ್ಟಪಡುವ ಎಲ್ಲ ತಿನಿಸುಗಳನ್ನು ಇಟ್ಟು ಅಗ್ನಿಸ್ಪರ್ಶ ಮಾಡಿದ ವ್ಯಕ್ತಿ ಬೆರಣಿ ಹಚ್ಚಿಕೊಂಡು ಮುಂದೆ ಹೋದಂತೆ ಹಿಂದಿನಿಂದ ಇತರೆ ವ್ಯಕ್ತಿಗಳು ಹಿಂಬಾಲಿಸುತ್ತಾರೆ. ಈ ಕಾರ್ಯದ ದಿನವೆ ಮಾಂಗಲ್ಯ, ಕುಂಕುಮ, ಹೂವು, ಬಳೆ, ತೆಗೆಯುವ ಶಾಸ್ತ್ರವನ್ನು ಮಾಡುತ್ತಾರೆ. ಹೀಗೆ ತೆಗೆದ ಬಳೆ, ಕರಿಮಣಿಗಳನ್ನು ಮೊರದಲ್ಲಿಟ್ಟುಕೊಂಡು ಸುಮಂಗಳಿಯ ಸಂಕೇತವನ್ನು ಕಳೆಯುತ್ತಾರೆ. ಬಳೆ, ಕುಂಕುಮ ತೆಗೆಯುವ ಶಾಸ್ತ್ರವನ್ನು ವಿಧವೆಯರು ನೆರವೇರಿಸುತ್ತಾರೆ.

ಸ್ಮಶಾನದಲ್ಲಿ ಮೂಳೆಗಳನ್ನು ಆಯ್ದು ಬೂದಿಯನ್ನು ಒಟ್ಟಾಗಿ ಸೇರಿಸಿ ಪೂಜೆ ಸಲ್ಲಿಸಿ ತಂದಿದ್ದ ವಸ್ತುಗಳೆಲ್ಲ ನೈವೇದ್ಯ ಮಾಡಿ ಅಲ್ಲೆ ಇಡುತ್ತಾರಲ್ಲದೆ ಹೂವು, ಬಳೆಗಳನ್ನು ಬೂದಿಯ ಮೇಲೆ ಹಾಕುತ್ತಾರೆ.

ನಂತರ ಮೂಳೆಗಳನ್ನು ಪೂಜಿಸಿ ನದಿಯಲ್ಲಿ ಬೂದಿಯೊಂದಿಗೆ ವಿಸರ್ಜಿಸುತ್ತಾರೆ. ಶವವನ್ನು ಹೊತ್ತಿದ್ದ ವ್ಯಕ್ತಿಗಳು ಅಂದು ಕಾರ್ಯದ ದಿನ ತಪ್ಪದೆ ಹಾಜರಾಗಬೇಕು. ಪೂಜೆ ಎಲ್ಲ ಮುಗಿದ ನಂತರ ಕೆರೆಯ ಬಳಿ ನೀರು ಕಾಯಿಸಿಕೊಂಡು ಸ್ನಾನ ಮಾಡಿ ಊಟ

ಮಾಡುತ್ತಾರೆ. ಅಂದು ರೊಟ್ಟಿ, ಜುಂಕ, ಮಸಾಲೆ ಅನ್ನವನ್ನು ಅಡಿಗೆಗೆ ಮಾಡಿ ಮೊದಲು ಶವ ಹೊತ್ತ ವ್ಯಕ್ತಿಗಳಿಗೆ ಊಟ ಬಡಿಸಿ ನಂತರ ಇತರರು ಊಟ ಮಾಡುತ್ತಾರೆ.

ಮರಾಠಿಗರಲ್ಲಿ ಮೂರು ದಿನದವರೆವಿಗೂ ಮನೆಯಲ್ಲಿ ಒಲೆ ಹಚ್ಚಿ ಅಡಿಗೆ ಮಾಡುವುದಿಲ್ಲ. ಬಂಧುಗಳು ಮತ್ತು ಸಂಬಂಧಿಕರು ಊಟ ತಂದು ಕೊಡುತ್ತಾರೆ.

ಸಂಸ್ಕಾರವಾದ ಹನ್ನೊಂದು ದಿನಕ್ಕೆ 'ಕರ್ಮಂತ್ರ' ಎಂಬ ಆಚರಣೆಯನ್ನು ಮಾಡುತ್ತಾರೆ. ಕರ್ಮತ್ರದಂದು ಅಗ್ನಿಸ್ಪರ್ಶ ಮಾಡಿದ ವ್ಯಕ್ತಿ ಮಗ ಅಥವಾ ಬೇರೆ ಯಾರೇ ಸಂಬಂಧಿಯಾಗಿರಬಹುದು. ಅವರಿಗೆ ತಲೆ ಬೋಳಿಸಿ ಜನಿವಾರ ಬದಲಾಯಿಸಿ ಮನೆಯಲ್ಲಿ ಸೂತಕವನ್ನು ಕಳೆಯುತ್ತಾರೆ. ಅಂದು ಬ್ರಾಹ್ಮಣರನ್ನು ಕರೆಸಿ ಅವರಿಗೆ ಛತ್ರಿ, ಚಾಪೆ, ಚಪ್ಪಲಿ, ವಸ್ತ್ರ, ಕಾಣಿಕೆ ನೀಡಿ ಸಂತೃಪ್ತಿಗೊಳಿಸುತ್ತಾರೆ. ೧೩ನೇ ದಿನಕ್ಕೆ ತಿಥಿ ಕಾರ್ಯವನ್ನು ನೆರವೇರಿಸುತ್ತಾರೆ.

ಮರಾಠಿಗರ ಭಜನೆ ಮತ್ತು ಶ್ಲೋಕಗಳು

ಮುಂಜಾವಿನ ಭಜನೆ

ಗಣಾಧಿಶ ಜೋ ಈಶ ಸರ್ವಾ ಗುಣಾಚಾ ।
ಮುಳಾರಂಭ ಆರಂಭ ತೋ ನಿರ್ಗುಣಾಚಾ ।
ನಮೋ ಶಾರದಾ ಮೂಳ ಚತ್ವಾರಿ ವಾಚಾ ।
ಗಮೋ ಪಂಥ ಅನಂತ ಯಾ ರಾಘವಾಚಾ ॥

ನಾರಾಯಣ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀ ವ್ಯಾಸಂ ತತೋ ಜಯಮುದಿರಯೇತ್ ॥

ಶ್ರೂಯತಾ ದೇವದೇವೇಶ ನಾರಾಯಣ ಜಗತ್ಪತೇ ।
ತ್ವದೀಯನಾಮಧ್ಯಾನೇನ ಕಥಯಿಷ್ಯೇ ಶುಭಾಃ ಕಥಾಃ ॥

ಅರ್ಥ : ಎಲ್ಲ ಗುಣಗಳಿಗೆ ಅಧಿಪತಿಯೂ; ನಿರ್ಗುಣಕ್ಕೂ ಆದಿಯಿದ್ದ ಮೂಲಾರಂಭನೂ ಆಗಿರುವ ಗಣೇಶನಿಗೆ ಮತ್ತು ನಾಲ್ಕು ವಾಣಿಗಳಿಗೆ ಮೂಲಳಾದ ಶಾರದಾದೇವಿಗೆ ನಮಸ್ಕರಿಸಿ ಶ್ರೀರಾಮನ ಶಾಶ್ವತ ಮಾರ್ಗವನ್ನು ಕ್ರಮಿಸುವಾ.

ನಾರಾಯಣನನ್ನು ಮತ್ತು ಪುರುಷ ಶ್ರೇಷ್ಠನಾದ ನರನನ್ನು ನಮಸ್ಕರಿಸಿ ಆಮೇಲೆ ಸರಸ್ವತೀದೇವಿಗೂ ಮಹರ್ಷಿ ವ್ಯಾಸನಿಗೂ ಜಯವೆಂದು ಘೋಷಿಸುವಾ. ಹೇ ದೇವಾಧಿದೇವಾ !

ಜಗತ್ತಿನ ಒಡೆಯನಾದ ನಾರಾಯಣಾ, ನಿನ್ನ ನಾಮಸ್ಮರಣೆಯೊಂದಿಗೆ ಮಂಗಲಕರವಾದ ಚರಿತ್ರೆಗಳನ್ನು ಹೇಳುವೆನು ಕೇಳಬೇಕು.

ಮಧ್ಯಾಹ್ನದ ಭಜನೆ

ಧನ್ಯಹೋ ಪ್ರದಕ್ಷಿಣಾ ಸದ್ಗುರುರಾಯಾಚಿ ।
ಧನ್ಯ ಧನ್ಯ ಹೋ ಪ್ರದಕ್ಷಿಣಾ ಶ್ರೀಗುರುರಾಯಾಚಿ ॥
ಝಾಲೀ ತ್ವರಾ ಸುರವರಾ ವಿಮಾನ ಉತರಾಯಾಚೀ ॥ಧೃ॥

ಪದೋಪದೀ ಘಡಲ್ಯಾ ಅಪಾರ ಪುಣ್ಯಾಚ್ಯಾ ರಾಶೀ ।
ಸಕಳಹೀ ತೀರ್ಥೇ ಘಡಲೀ ಅಮ್ಹಾ ಆದಿಕರುನಿ ಕಾಶೀ ॥೧॥

ಕೋಟಿ ಬ್ರಹ್ಮಹತ್ಯಾ ಹರತೀ ಕರಿತಾ ದಂಡವತ ।
ಲೋಟಾಂಗಣ ಘಾಲಿತಾ ಮೋಕ್ಷ ಲೋಳೇ ಪಾಯತ ॥೨॥

ಮೃದಂಗ ಟಾಳ ಘೋಳ ಭಕ್ತ ಭಾವಾರ್ಥೇ ಗಾತೀ ।
ನಾಮಸಂಕೀರ್ತನೀ ನಿತ್ಯಾನಂದೇ ನಾಚತೀ ॥೩॥

ಗುರುಭಜನಾಚಾ ಮಹಿಮಾನ ಕಳೇ ನಿಗಮಾ ಆಗಮಾಸೀ ।
ಅನುಭವ ಜೇ ಜಾಣತೀ ತೇ ಗುರುಪದಿ ಅಭಿಲಾಷಿ ॥೪॥

ಪ್ರದಕ್ಷಿಣಾ ಕರೂನಿ ದೇಹ ಭಾವೇ ವಾಹಿಲಾ ।
ಶ್ರೀರಂಗಾತ್ಮಜ ವಿಠ್ಠಲ ಪುಢೇ ಉಭಾ ರಾಹಿಲಾ ॥೫॥

ಅರ್ಥ: ಸದ್ಗುರುರಾಯರ ಪ್ರದಕ್ಷಿಣೆಯು ಧನ್ಯವಿರುತ್ತದೆ ! ಶ್ರೀಗುರು ರಾಯರ ಪ್ರದಕ್ಷಿಣೆಯು ಧನ್ಯಧನ್ಯವಿರುತ್ತದೆ !

ಶ್ರೇಷ್ಠರಾದ ದೇವತೆಗಳಿಗೂ ಪ್ರದಕ್ಷಿಣೆಗಾಗಿ ವಿಮಾನದಿಂದ ಇಳಿಯುವ ಗಡಿಬಿಡಿಯಾಯಿತು!

ಗುರುಪ್ರದಕ್ಷಿಣೆಯ ಹೆಜ್ಜೆಜ್ಜೆಗೂ ಲೆಕ್ಕವಿಲ್ಲದಷ್ಟು ಪುಣ್ಯರಾಶಿಗಳೇ ಘಡಿಸಿದವು! ಹಾಗೂ ಕಾಶೀ ಮೊದಲುಮಾಡಿ ಎಲ್ಲ ತೀರ್ಥಗಳು ಘಡಿಸಿದವು!

ಸದ್ಗುರುಗಳಿಗೆ ದಂಡವತ್ತಾಗಿ (ಬಡಿಗೆಯಂತೆ) ಭೂಮಿಯಮೇಲೆ ನಮಸ್ಕಾರ ಮಾಡಲು, ಕೋಟಿ ಬ್ರಹ್ಮಹತ್ಯಯ ಪಾಪಗಳೂ ನಷ್ಟವಾಗುವವು ! ಮತ್ತು ಸಾಷ್ಟಾಂಗ ನಮಸ್ಕಾರ ಹಾಕಲು ಮೋಕ್ಷವು ಕಾಲಲ್ಲಿ ಹೋರಳಾಡುವದು !!

ಗುರುಭಕ್ತರು ಮೃದಂಗ, ತಾಳ ಮುಂತಾದ ವಾದ್ಯಗಳ ಉಚ್ಚ ಧ್ವನಿಯೊಡನೆ ಭಕ್ತಿಪೂರ್ವಕವಾಗಿ ಹಾಡುವರು. ಮತ್ತು ನಿತ್ಯವೂ ನಾಮಘೋಷನವನ್ನು ಮಾಡುತ್ತ ಆನಂದದಿಂದ ಕುಣಿದಾಡುವರು !

ಗುರುಭಜನೆಯ ಮಹತ್ವವು ವೇದಶಾಸ್ತ್ರಗಳಿಗೂ ತಿಳೀಯದು ! ಅನುಭವವನ್ನು ಅರಿತವರು ಮಾತ್ರ ಆ ಆಗಮ್ಯ ಗುರುಸ್ವರೂಪವನ್ನೇ ಇಚ್ಛಿಸುವರು!

ಹೀಗೆ ಪ್ರದಕ್ಷಿಣೆ ಮಾಡಿ ದೇಹವನ್ನು ಸದ್ಭಾವದಿಂದ ಸದ್ಗುರುಗಳಿಗೆ ಅರ್ಪಿಸಿ ಶ್ರೀರಂಗ ಪುತ್ರನಾದ ವಿಠಲನು ಗುರುಗಳೆದುರಿಗೆ ನಿಂತುಕೊಂಡನು !

ರಾತ್ರಿಯ ಭಜನೆ

ಗುರುವಾರ: ಜಯ ಜಯ ಗುರುಮಹಾರಾಜ ಗುರೂ
ಜಯಗುರು ಜಯಗುರು ಜಯಗುರು ಜಯಗುರು
ಜಯ ಜಯ ಗುರುಮಹಾರಾಜ ಗುರೂ ।
ಜಯ ಜಯ ಪರಬ್ರಹ್ಮ ಸದ್‌ಗುರೂ ॥

ಶುಕ್ರವಾರ: ಪಾವನಾರಾಮಾ ಪತೀತಪಾವನಾರಾಮಾ । (ಸಾವಕಾಶವಾಗಿ ೩ ಸಾರಿ)
ಪಾವನಾರಾಮಾ (ಇಷ್ಟೇ ಧ್ವನಿ ಏರಿಸಿ ಚಾಲೂ ಸ್ವರದಲ್ಲಿ ಬಂದ ನಂತರ ಪೂರ್ವವತ್ ಸಣ್ಣ ಧ್ವನಿಯಿಂದ) ಪಾವನಾ ರಾಮಾ ಪತೀತಪಾವನಾ ರಾಮಾ (೨ ಸಾರಿ) ॥ ಹರೀ ನಾರಾಯಣ ಗುರು ನಾರಾಯಣ।
ಘಡಿ ಘಡಿ ಜಿವ್ಹೇಂ ಕರಿ ಪಾರಾಯಣ । ತವ ದಾಸೋಹಂ ನಾರಾಯಣ ॥
ಹರಿನಾರಾಯಣ ಗುರುನಾರಾಯಣ ॥
ಲಕ್ಷ್ಮೀ ಶ್ರೀಗಂಧರ ಸೀತಾರಘುವೀರ ರಾಧೇಗೋವಾಂದಾ ।
ಹರಿ ಹರಿ ರಾಧೇಗೋವಿಂದಾ । ರಖುಮಾ ಈ ಪಾಂಡುರಂಗಾ (೩ ಸಾರಿ)

ಶನಿವಾರ: ಮಾರುತಿ ಸಖಯಾ ಬಲಭೀಮಾ, ಭಜನಾ ಲಾಗೋ ದೇ
ಪ್ರೇಮಾ (೨ ಸಾರಿ) ಭಜನಾ ಲಾಗೋ ದೇ ಪ್ರೇಮಾ,
ಭಜನಾ ಲಾಗೋ ದೇ ಪ್ರೇಮಾ । (೨ ಸಾರಿ) ಮಾರುತಿ
ಸಖಯಾ ಬಲಭೀಮಾ ಭಜನಾ ಲಾಗೋ ದೇ ಪ್ರೇಮಾ ॥
(೨ ಸಾರಿ)

ರವಿವಾರ : ಸಾಂಬ ಸದಾಶಿವ ಸಾಂಬ ಸದಾಶಿವ ಸಾಂಬ ಸದಾಶಿವ
ಸಾಂಬ ಹರಾ ಹರಾ (ಸಾವಕಾಶವಾಗಿ)

ಸೋಮವಾರ: ಸಾಂಬ ಸದಾಶಿವ ಸಾಂಬ ಸದಾಶಿವ ಸಾಂಬ ಸದಾಶಿವ
ಸಾಂಬ (ಜಲದ ೨ ಸಾರಿ) ಸಾಂಬ ಸದಾಶಿವ ಸಾಂಬ

(ಧ್ವನಿ ಏರಿಸಿ ೩ ಸಾರಿ) ಸಾಂಬ ಸದಾಶಿವ ಸಾಂಬ ಸದಾಶಿವ
ಸಾಂಬ ಸದಾಶಿವ ಸಾಂಬಾ (ಪೂರ್ವವತ್ ೨ ಸಾರಿ)

ಮಂಗಳವಾರ: ರವಿವಾರದಂತೆಯೇ

ಬುಧವಾರ: ಹರಿ ಹರಿ ವಿಠಲ ರಖುಮಾ ಈ ವಿಠೋಬಾ

ಅಧ್ಯಾಯ ೭

ಪ್ರಸಿದ್ಧ ದಾನಿಗಳು

ಮನುಷ್ಯ ಮೂಲತಃ ಸಮಾಜಜೀವಿಯಾದ್ದರಿಂದ ಪರಸ್ಪರ ಕೊಡುಕೊಳ್ಳುವಿಕೆಯ ಸಂಬಂಧ ಅನಿವಾರ್ಯವಾದುದು. ಸಮಾಜವನ್ನು ಪ್ರಗತಿಪಥದತ್ತ ಕೊಂಡೊಯ್ಯುವುದು ಪ್ರತಿಯೊಬ್ಬ ನಾಗರೀಕನ ಕರ್ತವ್ಯ. ಅಂತಹ ಕರ್ತವ್ಯವನ್ನು ದೈವವೆಂದು ಭಾವಿಸಿ ತಮ್ಮ ಜೀವನದುದ್ದಕ್ಕೂ ಸಮಾಜದ ಉನ್ನತಿಗಾಗಿ ಅನ್ಯರ ಯಶಸ್ವಿಗೋಸ್ಕರ ದಾನಧರ್ಮಕ್ಕೋಸ್ಕರ ತಮ್ಮನ್ನೇ ಮುಡಿಪಾಗಿಟ್ಟುಕೊಳ್ಳುವ ವ್ಯಕ್ತಿಗಳು ಅತ್ಯಂತ ವಿರಳ. ಅಂತಹ ವ್ಯಕ್ತಿಗಳಲ್ಲಿ ಗಾವಡಗೆರೆ ಗ್ರಾಮದ ಶ್ರೀಯುತ ಟಿ.ಎಸ್.ಸುಬ್ಬರಾವ್ ಘಾಟ್ಕೆರವರು ಪ್ರಮುಖರು.

ಟಿ.ಎಸ್.ಸುಬ್ಬರಾವ್ ಘಾಟ್ಕೆ ೧೯೦೫ರಲ್ಲಿ ಗಾವಡಗೆರೆ ಗ್ರಾಮದ ದೌಲತ್‌ರಾವ್ ಘಾಟ್ಕೆ ಹಾಗೂ 'ಕಾಶೀಬಾಯಿ' ಎಂಬ ಅತಿ ಬಡತನದಿಂದ ಕೂಡಿದ ಕುಟುಂಬದಲ್ಲಿ ಜನಿಸಿದರು. ಬಡತನದಲ್ಲಿದ್ದೆ ೫ನೇ ತರಗತಿವರೆಗೆ ವಿದ್ಯಾಭ್ಯಾಸ ಮುಗಿಸಿ ಚಿಕ್ಕವಯಸ್ಸಿನಲ್ಲಿಯೇ ಸಣ್ಣಪುಟ್ಟ ವ್ಯಾಪಾರದಲ್ಲಿ ತೊಡಗಿಸಿಕೊಂಡರು. ನಂತರ ಅಂದಿನ ಪ್ರಮುಖ ವಾಣಿಜ್ಯ ಬೆಳೆಯಾದ ತಂಬಾಕು ವ್ಯಾಪಾರದಲ್ಲಿ ತಮ್ಮ ಪರಿಶ್ರಮಪಟ್ಟು ಉತ್ತಮವಾದ ಸಂಪಾದನೆ ಮಾಡಲು ಪ್ರಾರಂಭಿಸಿದರು. ಪ್ರತಿಯೊಬ್ಬ ಪುರುಷನೊಂದಿಗೆ ಒಬ್ಬ ಸ್ತ್ರೀಯ ಪಾತ್ರ ಇದ್ದೇ ಇರುತ್ತದೆ. ಹಾಗೆ ಸುಬ್ಬರಾವ್‌ರವರಿಗೂ ಅವರ ತಾಯಿಯಾದ ಕಾಶೀಬಾಯಿಯ ಮಾರ್ಗದರ್ಶನದಿಂದ ಅವರು ಜೀವನದಲ್ಲಿ ಸಾಕಷ್ಟು ಯಶಸ್ಸು ಗಳಿಸಿದರು.

ಟಿ.ಎಸ್. ಸುಬ್ಬರಾವ್ ತಮ್ಮ ಸಂಪಾದನೆಯ ೪ ಭಾಗದಷ್ಟು ದಾನಕ್ಕಾಗಿ ಮೀಸಲಿಡುತ್ತಿದ್ದರು. ಅಂತಹ ಪ್ರಮುಖವಾದ ದಾನಗಳೆಂದರೆ ಊರಿನ ಮಕ್ಕಳಲ್ಲದೆ ಗಾವಡಗೆರೆ ಸುತ್ತಮುತ್ತಲಿನ ಗ್ರಾಮದ ಮಕ್ಕಳ ಶಿಕ್ಷಣಕ್ಕಾಗಿ ಕಟ್ಟಡವಿಲ್ಲದೆ ಪರದಾಡುವಂತಹ ಸನ್ನಿವೇಶದಲ್ಲಿ ತಮ್ಮ ಸ್ವಂತ ನಿವೇಶನದಲ್ಲಿ ಪ್ರಾಥಮಿಕ ಶಾಲಾ ಕಟ್ಟಡವನ್ನು ನಿರ್ಮಿಸಿ ಅದನ್ನು ಸರ್ಕಾರಕ್ಕೆ ಸಮರ್ಪಿಸಿದ್ದು, ಮೊದಲಾಗಿ ತಮ್ಮ ತಂದೆಯವರಾದ ಶ್ರೀಯುತ ದೌಲತ್‌ರಾವ್ ಘಾಟ್ಕೆಯವರ ಹೆಸರಿನಲ್ಲಿ ಆಸ್ಪತ್ರೆಯನ್ನು ಕಟ್ಟಿಸಿದರು.

ಪಶು ವೈದ್ಯಕೀಯ ಆಸ್ಪತ್ರೆಯನ್ನಲ್ಲದೆ ಬಡಬಗ್ಗರಿಗೆ ಸಹಾಯವಾಗಲೆಂದು ಕಲ್ಯಾಣ ಮಂಟಪವನ್ನು ಕಟ್ಟಿಸಿದರು. ಹುಣಸೂರಿನ ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜಿನ ನಿರ್ಮಾಣಕ್ಕಾಗಿ ೨೦ ಸಾವಿರ ರೂಪಾಯಿಗಳನ್ನು ಹಾಗೆಯೇ ಗಾವಡಗೆರೆ ಪ್ರೌಢಶಾಲೆಯ ಕಟ್ಟಡ

ನಿರ್ಮಾಣಕ್ಕಾಗಿ ೬೦ ಸಾವಿರ ರೂಪಾಯಿಗಳನ್ನಲ್ಲದೆ ೩ ಎಕರೆ ಭೂಮಿಯನ್ನು ೧೯೬೦ರ ದಶಕದಲ್ಲಿ ದಾನವಾಗಿ ನೀಡಿದರು. ೧೯೬೨ರಲ್ಲಿ ಭೀಕರ ಬರಗಾಲ ಬಂದ ಸಂದರ್ಭದಲ್ಲಿ ಗಂಜಿಕೇಂದ್ರವನ್ನು ತೆರೆದು ಗ್ರಾಮಸ್ಥರಿಗೆ ಮಾತ್ರವಲ್ಲದೆ ಸುತ್ತಮುತ್ತಲ ಹಳ್ಳಿಯ ಜನಗಳಿಗೂ ಗಂಜಿಯನ್ನು ಉಣಬಡಿಸಿದರು.

ಸುಬ್ಬರಾವ್‌ರವರ ದಾನಧರ್ಮಗಳು ಸ್ಥಳೀಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಕೆ.ಆರ್.ನಗರದ ಸರ್ಕಾರಿ ಆಸ್ಪತ್ರೆಗೆ ಒಂದು ವಾರ್ಡ್ ಕಟ್ಟಿಸಿಕೊಟ್ಟರು. ಇಂದಿಗೂ ಸಹ ಆ ವಾರ್ಡ್‌ಗೆ ಟಿ.ಎಸ್.ಸುಬ್ಬರಾವ್ ವಾರ್ಡ್ ಎಂಬ ಹೆಸರಿನಿಂದಲೇ ಕರೆಯಲಾಗುತ್ತದೆ. ಶ್ರೀಯುತರ ಸಾಮಾಜಿಕ ಸೇವೆಯನ್ನು ಗುರುತಿಸಿದ ಸಮಸ್ತ ಗ್ರಾಮಸ್ಥರು ಇವರಿಗೆ ಗೌರವಾನ್ವಿತ ಸ್ಥಾನಗಳಾದ ಗ್ರಾಮ ಪಂಚಾಯಿತಿ ಅಧ್ಯಕ್ಷ ಪದವಿ 'ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯತ್ವ ಪದವಿಯನ್ನು ನೀಡಿ ಗೌರವಿಸಿದ್ದಾರೆ.

ಹಾಗೆಯೇ ಹುಣಸೂರು ತಾಲ್ಲೂಕಿನ ಅಲ್ಪಸಂಖ್ಯಾತ ಕೋಮಿನ ಶ್ರೀ ದೇವರಾಜ ಅರಸುರವರು ಮುಖ್ಯಮಂತ್ರಿ ಪದವಿಗೇರಲು ಶ್ರೀಯುತರು ರಾಜಕೀಯವಾಗಿ ಬಹಳ ಶ್ರಮಿಸಿದರು. ದೇವರಾಜ ಅರಸುರವರು ರಾಯರ ಬಗ್ಗೆ ಅಪಾರ ಪ್ರೀತಿ ಮತ್ತು ಗೌರವ ಹೊಂದಿದ್ದರು.


ಬದುಕಿನಲ್ಲಿ ಶಿಸ್ತು ಮತ್ತು ಶಾಂತಿಯನ್ನು ಪಾಲಿಸಿಕೊಂಡು ಬಂದ ರಾಯರು ಗ್ರಾಮದಲ್ಲಿ ಯಾವುದೇ ಕಲಹ ದೊಂಬಿಗಳು ನಡೆಯದಂತೆ ಕಟ್ಟುನಿಟ್ಟಾಗಿ ನೋಡಿಕೊಳ್ಳುತ್ತಿದ್ದರು. ಯಾವುದೇ ಸಮಸ್ಯೆಗಳನ್ನು ಬಹಳ ಸಹನೆಯಿಂದ ನ್ಯಾಯ ಪಂಚಾಯಿತಿಯ ಮೂಲಕ ಬಗೆಹರಿಸುತ್ತಿದ್ದರು. ಹೀಗಾಗಿ ಇಡೀ ಗ್ರಾಮದ ಜನತೆಯಲ್ಲದೆ ಸುತ್ತಮುತ್ತಲ ಗ್ರಾಮದ ಜನರೂ ಅಪಾರವಾದ ಗೌರವ ಮನ್ನಣೆ ನೀಡುತ್ತಿದ್ದರು.

ಟಿ.ಎಸ್.ಸುಬ್ಬರಾವ್ ಘಾಟ್ಗೆರವರ ಮತ್ತೊಂದು ಹೆಸರು 'ಬಾರಾಯರು' ಎಂದು. ಸ್ಥಳೀಯ ಜನರಿಗೆ ಬಾರಾಯರು ಎಂದರೆ ಇವರ ಪರಿಚಯ ಗೊತ್ತಾಗುವುದು. ಬಾರಾಯರ ಪರಿಚಯ ಸ್ಥಳೀಯ ಜನತೆಗಲ್ಲದೆ ಕೆ.ಆರ್.ನಗರ ಮತ್ತು ಹುಣಸೂರು ತಾಲ್ಲೂಕುಗಳ ಜನರಿಗೂ ಇವರು ಬಾರಾಯರೆಂದೆ ಪ್ರಸಿದ್ಧರಾಗಿದ್ದರು.

ಸ್ವಾತಂತ್ರ್ಯ ಪೂರ್ವ ದಿನಗಳಲ್ಲಿ ಸುಬ್ಬರಾಯರವರು ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸದಸ್ಯರಾಗಿ ಸಲ್ಲಿಸಿದ್ದಾರಲ್ಲದೆ ೧೯೫೫ ರಿಂದ ೧೯೬೮ರವರೆಗೆ ೨ ಅವಧಿಗೆ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಮಾಜಿ ಮುಖ್ಯಮಂತ್ರಿ ಅರಸು ಅವರಲ್ಲದೆ ಮಾಜಿ ಸಚಿವ ದಿವಂಗತ ಶ್ರೀ ಹೆಚ್.ಎಂ. ಚೆನ್ನಬಸಪ್ಪನವರು ಬಾರಾಯರ ಆತ್ಮೀಯ ಹಾಗೂ ಆಪ್ತ ಗೆಳೆಯರೂ ಆಗಿದ್ದರು ಎಂಬ ಅಂಶ ಗಾವಡಗೆರೆ ಜನತೆ ಹೆಮ್ಮೆಪಡುವಂತಹ ವಿಷಯವಾಗಿದೆ.

ಇಂತಹ ದಾನವಂತ ಟಿ.ಎಸ್. ಸುಬ್ಬರಾವ್ ಘಾಟ್ಕೆರವರು ೧೯೭೫ ಜನವರಿ ೨೬ರಂದು ನಿಧನ ಹೊಂದಿದರು. ಅವರ ಅಪಾರ ಕೊಡುಗೆಗಳು ಅವರ ಪ್ರತಿರೂಪದಂತೆ ನಿಂತು ಅವರ ಸಾಮಾಜಿಕ ಮತ್ತು ಶೈಕ್ಷಣಿಕ, ಧಾರ್ಮಿಕ ಕಳಕಳಿಯನ್ನು ಸದಾ ನೆನೆಸಿಕೊಳ್ಳುವಂತೆ ಇವೆ.



ಟಿ. ಎಸ್. ಸುಬ್ಬರಾವ್ ಘಾಟ್ಕೆ

ಜನನ : 1905 ಮರಣ : 1975

ಅಧ್ಯಾಯ ೮

ಜಾತ್ರೆಯಲ್ಲಿ ನಡೆಯುವ ಉತ್ಸವಗಳು

ಗಾವಡಗೆರೆ ಗ್ರಾಮದಲ್ಲಿ ಅನೇಕ ಜಾತ್ರಾ ಮಹೋತ್ಸವಗಳು ನಡೆಯುತ್ತವೆ. ಜಾತ್ರೆಗಳು ಗ್ರಾಮೀಣ ಸಂಸ್ಕೃತಿಯ ಮೂಲ ನೆಲೆಯಾಗಿವೆ. ಜಾತ್ರೆಗಳಲ್ಲಿ ಜನ ತಮ್ಮ ನೋವು ಸಂಕಟಗಳನ್ನು ಮರೆತು ಒಟ್ಟಾಗಿ ಕಲೆತು ಉತ್ಸವದಲ್ಲಿ ಪಾಲ್ಗೊಂಡು ಉಲ್ಲಸಿತರಾಗುತ್ತಾರೆ. ಗಾವಡಗೆರೆ ಗ್ರಾಮದಲ್ಲಿ ನಡೆಯುವ ಪ್ರಮುಖ ಜಾತ್ರೆಗಳೆಂದರೆ;

೧. ಪಟ್ಟಲದಮ್ಮ ಅಥವಾ ಗಾವಡಗೆರೆಯಮ್ಮನ ಜಾತ್ರೆ

೨. ಮಹದೇಶ್ವರಸ್ವಾಮಿ ಜಾತ್ರೆ

೩. ಬಸವೇಶ್ವರಸ್ವಾಮಿ ಓಕುಳಿ

ಗಾವಡಗೆರೆಯಮ್ಮನ ಜಾತ್ರೆ: ಗ್ರಾಮದಲ್ಲಿ ನಡೆಯುವ ಪ್ರಮುಖ ಜಾತ್ರೆಗಳಲ್ಲಿ ಪಟ್ಟಲದಮ್ಮನವರ ಜಾತ್ರೆ ಹೆಚ್ಚು ಜನಪ್ರಿಯವಾಗಿದೆ. ಈ ಜಾತ್ರೆಗೆ ಸುತ್ತಮುತ್ತಲಿನ ಸಾಕಷ್ಟು ಹಳ್ಳಿಗಳಿಂದ ಸಹಸ್ರಾರು ಭಕ್ತರು ಬರುತ್ತಾರಲ್ಲದೆ ಹೊರರಾಜ್ಯಗಳಲ್ಲಿರುವ ಅಮ್ಮನವರ ಭಕ್ತರು ಈ ಜಾತ್ರೆಯಲ್ಲಿ ಪಾಲ್ಗೊಂಡು ಧನ್ಯತಾ ಭಾವವನ್ನು ಹೊಂದುತ್ತಾರೆ.

ಜಾತ್ರೆಯ ಆಚರಣೆಯ ಪೂರ್ವಭಾವಿ ತಯಾರಿಯಾಗಿ ಊರಿನ ಯಜಮಾನರು ಮತ್ತು ಮುಖಂಡರು ಸಭೆ ಸೇರಿ ಒಂದು ಪ್ರಮುಖ ನಿರ್ಧಾರಕ್ಕೆ ಬರುತ್ತಾರೆ. ಹಾಗೆಯೇ ಜಾತ್ರೆ ನಡೆಸಲು ಮೊದಲು ದೇವಿಯ ಅನುಮತಿ ಪಡೆಯಲು ದೇವಿಯಲ್ಲಿ ವರವನ್ನು ಬೇಡುತ್ತಾರೆ. ಈ ಜಾತ್ರೆಯು ದೇವಿಯನ್ನು ವಿಶೇಷವಾಗಿ ಪೂಜಿಸಲ್ಪಡುವ ಶುಕ್ರವಾರದಂದೆ ನಡೆಸುವುದು ಒಂದು ವಿಶೇಷವಾಗಿದೆ.



ಪಟ್ಟಲದಮ್ಮ ದೇವಿಯ ವಾನ್ಯ

ಶುಕ್ರವಾರದಂದು ದೇವಿಯ ಉತ್ಸವ ಮೂರ್ತಿಯನ್ನು ವಿಶೇಷವಾಗಿ ಅಲಂಕರಿಸಿರುವ ಜೋಡಿ ಕುದುರೆಗಳ ವಾಹನದ (ವಾನ್ಯ) ಮೇಲೆ ಇಟ್ಟು ಊರಿನ ಮಧ್ಯ ಭಾಗದಲ್ಲಿರುವ ದೇವಸ್ಥಾನದಿಂದ ಉತ್ಸವವನ್ನು ಆರಂಭಿಸಲಾಗುತ್ತದೆ. ಉತ್ಸವಕ್ಕಾಗಿ ಊರನ್ನೆಲ್ಲ ತಳಿರು ತೋರಣಗಳಿಂದ ಅಲಂಕರಿಸಿ ದೀಪಾಲಂಕಾರದಿಂದ ಸಿಂಗರಿಸಲಾಗಿರುತ್ತದೆ. ಉತ್ಸವ ಮೂರ್ತಿಯನ್ನು ವಿಶೇಷವಾದ ಮಂಗಳವಾದ್ಯಗಳು ತಮಟೆ, ಕುಣಿಯೋ ಗೌಡರ ವಾದ್ಯ ಮೇಳಗಳ ಮೂಲಕ ಮಾರಮ್ಮನ ದೇವಾಲಯದ ಬಳಿ ತಂದ ನಂತರ ಹರಕೆ ಹೊತ್ತ ಭಕ್ತರೆಲ್ಲರು 'ಬಾಯಿಬೀಗ' ಹಾಕಿಸಿದ ನಂತರ ಪಂಜಿನ ಆರತಿ ಎತ್ತಲಾಗುತ್ತದೆ.

ಬಾಯಿಬೀಗ ಹಾಕಿಸಿಕೊಳ್ಳಲು ಹರಕೆ ಹೊತ್ತ ವ್ಯಕ್ತಿ ಬೆಳಿಗ್ಗೆಯಿಂದಲೂ ಯಾವುದೇ ಫಲಾಹಾರ, ಹಣ್ಣುಹಂಪಲು, ಊಟವನ್ನು ಸೇವಿಸದೆ ಉಪವಾಸ ವ್ರತವನ್ನು ಕೈಗೊಂಡು ಬಾಯಿಬೀಗ ಚುಚ್ಚಿಸಿಕೊಂಡು ದೇವರ ಎದುರಿನಲ್ಲಿ ಪಂಜನ್ನು ಹಚ್ಚಿಕೊಂಡು ರಾತ್ರಿಯಿಡೀ ದೇವರ ಉತ್ಸವಮೂರ್ತಿಯೊಂದಿಗೆ ಮಾತನಾಡದೆ ಹೋಗಬೇಕು.

ವಿಠೋಬ ದೇವಸ್ಥಾನದ ಬಳಿ ಉತ್ಸವ ಮೂರ್ತಿಯ ಮುಂದೆ ಕುಣಿಯೋಗೌಡರು ಎಂಬ ವಿಶೇಷ ವಾದ್ಯ ಮೇಳದವರು.

ಒಲಿದು ಬಾರೆ ನಮ್ಮವ್ವ ಒಲಿದು ಬಾರೆ
ಗಾವಡಗೆರೆಯಮ್ಮ ತಾಯೆ ಒಲಿದು ಬಾರೆ

ಎಂದು ಕಾಲಿಗೆ ಗೆಜ್ಜೆಯನ್ನು ಕಟ್ಟಿ ಹಾಡುತ್ತಾ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿ ನೃತ್ಯ ಮಾಡುತ್ತಾರೆ. ದೇವಿಯು ಒಬ್ಬ ವ್ಯಕ್ತಿಯ ಮೈಮೇಲೆ ಅವಗಾಹನೆಯಾದ ನಂತರ ಗ್ರಾಮದ ಪ್ರಮುಖರು ಆ ವ್ಯಕ್ತಿಯನ್ನು ದೇವತೆಯೆಂದು ಭಾವಿಸಿ ತಾವು ಮಾಡಿದ ಸೇವೆ ತೃಪ್ತಿಯಾಯಿತೆ? ನಮ್ಮಿಂದ ಇನ್ಯಾವ ರೀತಿಯ ಸೇವೆ ನಡೆಸಬೇಕೆಂದು ಆಜ್ಞೆ ಮಾಡು ಎಂದು ಕೇಳಿಕೊಳ್ಳುತ್ತಾರೆ.

ಜಾತ್ರೆಯ ಉತ್ಸವದಲ್ಲಿ ನಡೆಯುವ ಮತ್ತೊಂದು ಪ್ರಮುಖವಾದ ಆಕರ್ಷಣೆಯೆಂದರೆ ಪಟಾಕಿ ಬಾಣ ಬಿರುಸುಗಳ ಪ್ರದರ್ಶನ. ಈ ಜಾತ್ರೆಯ ಉತ್ಸವಕ್ಕೆಂದು ೧ ರಿಂದ ೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ವಿಶೇಷವಾದ ಪಟಾಕಿ ತಯಾರಿಸಲಾಗುತ್ತದೆ. ಈ ಸಂದರ್ಭದಲ್ಲಿ ಬಸವೇಶ್ವರ ದೇವಾಲಯದ ಮುಂದೆ ನಡೆಯುವ ಬಣ್ಣ ಬಣ್ಣದ ಪಟಾಕಿ ಸಿಡಿತವನ್ನು ಕಂಡು ಜನ ಹರ್ಷಿತರಾಗುತ್ತಾರೆ.

ಉತ್ಸವಮೂರ್ತಿ ರಾಂಚೇಯಿ ದೇವಾಲಯದ ಬಳಿ ಬಂದಾಗ ಹಲವಾರು ವ್ಯಕ್ತಿಗಳ ಮೇಲೆ ಮೈಮೇಲೆ ದೇವರು ಬರುತ್ತದೆ. ಎಂದು ನಂಬಿಕೆ ಅಲ್ಲಿ ಹಲವು ಗಂಟೆಗಳ ಹೊತ್ತು ದೇವಿ ಮೈಮೇಲೆ ಬಂದ ವ್ಯಕ್ತಿಗಳೊಂದಿಗೆ ಸಂಭಾಷಣೆ ನಡೆಸಲಾಗುತ್ತದೆ.

ಇಡೀ ರಾತ್ರಿ ಸಾಗುವ ಈ ಮೆರವಣಿಗೆ ಬೆಳಿಗ್ಗೆ ವೇಳೆಗೆ ಊರಾಚೆ ಇರುವ ಪಟ್ಟಲದಮ್ಮ ದೇವಿಯ ದೇವಾಲಯ ಬಳಿ ೪ ಗಂಟೆಗೆ ತಲುಪುತ್ತದೆ. ನಂತರ ದೇವಾಲಯದ ಎದುರಿಗೆ ದೊಡ್ಡ ಕೆಂಡದ ರಾಶಿಯಿಂದ ಕೊಂಡವನ್ನು ಮಾಡಲಾಗಿರುತ್ತದೆ. ಆ ಕೊಂಡದ ಸುತ್ತ ಎಲ್ಲ ದಿಕ್ಕುಗಳಲ್ಲಿ ಪೂಜೆ ಸಲ್ಲಿಸಿ ಎಡೆ ಇಟ್ಟು ನಂತರ ದೇವತೆಗೆ ಎಡೆ ಇಟ್ಟು ಮೊದಲು

ದೇವತೆಯನ್ನು ಹೊತ್ತವರು 'ಕೊಂಡ'[೧] ಹಾಯ್ದ ನಂತರ ಹರಕೆ ಹೊತ್ತ ಭಕ್ತರು ಕೊಂಡವನ್ನು ಹಾಯ್ದು ಬಾಯಿಬೀಗ ತೆಗೆದು ಕೊಂಡದಲ್ಲಿ ಹಾಕಿ ಪಕ್ಕದ ಕೊಳದಲ್ಲಿ ಮಿಂದು ಹರಕೆ ತೀರಿಸುತ್ತಾರೆ. ಈ ಎಲ್ಲ ಆಚರಣೆಗಳು ಸುರ್ಯೋದಯದ ಮೊದಲ ಆಗಬೇಕಾದ ಆಚರಣೆಗಳಾಗಿವೆ.

ಜಾತ್ರೆಯ ಮತ್ತೊಂದು ವಿಶೇಷವೆಂದರೆ ದಲಿತರು ದೇವಿಗಾಗಿ ಎಡೆಯನ್ನು ತರುತ್ತಾರಲ್ಲದೆ ದೇವಾಲಯದ ಪಕ್ಕದಲ್ಲಿರುವ ಚಿಕ್ಕ ಚಿಕ್ಕ ಗುಡಿಗಳಲ್ಲಿರುವ ಮೂರ್ತಿಗಳಿಗೆ ಎಡೆಯನ್ನು ಇಡುತ್ತಾರೆ. ನಂತರ ದೇವಿಯ ಉತ್ಸವಮೂರ್ತಿಯನ್ನು ಊರಿನಲ್ಲಿರುವ ದೇವಾಲಯಕ್ಕೆ ತಂದು ಸೂರ್ಯೋದಯದ ನಂತರ ಮತ್ತೆ ಮೂರ್ತಿಯನ್ನು ಊರಾಚೆಗಿರುವ ದೇವಾಲಯಕ್ಕೆ ತಂದು ಪ್ರಾಣಿ ಬಲಿ ನೀಡಲಾಗುತ್ತದೆ. ನಂತರ ಅಂದು ದೊಡ್ಡ ಜಾತ್ರೆ ಕಟ್ಟುತ್ತದೆ. ಸಾವಿರಾರು ಜನ ದೇವಿಗೆ ಪೂಜೆಯನ್ನು ಸಲ್ಲಿಸಿ ಜಾತ್ರೆಯಲ್ಲಿ ಪಾಲ್ಗೊಂಡ ನಂತರ ಸೂರ್ಯಾಸ್ತದ ಮೊದಲು ದೇವಿಯ ಮೂರ್ತಿಯನ್ನು ಗ್ರಾಮಕ್ಕೆ ತರಲಾಗುತ್ತದೆ. ನಂತರ ಯಾವುದೇ ವ್ಯಕ್ತಿ ದೇವಾಲಯದ ಸುತ್ತಮುತ್ತ ಇರಬಾರದು ಎಂಬ ನಂಬಿಕೆ ಇದೆ. ಕಾರಣ ದೇವತೆ ಮತ್ತು ಆಕೆಯ ಯಕ್ಷಿಣಿಯರು ಬಲಿಕೊಟ್ಟ ಮಾಂಸದ ಆಹಾರಕ್ಕಾಗಿ ಬರುತ್ತಾರೆ. ಅದನ್ನು ಯಾವುದೇ ಮನುಷ್ಯ ನೋಡಿದಲ್ಲಿ ರಕ್ತ ಕಾರಿ ಸಾಯುತ್ತಾರೆ ಎಂಬುದು ನಂಬಿಕೆ.

ಮಹದೇಶ್ವರಸ್ವಾಮಿ ಜಾತ್ರೆ: ಮಹದೇಶ್ವರಸ್ವಾಮಿ ದೇವಾಲಯದಲ್ಲಿ ನಡೆಯುವ ಜಾತ್ರೆಯ ಪ್ರಮುಖವಾದ ಆಚರಣೆಗಳೆಂದರೆ ಜಾತ್ರೆಯ ಹಿಂದಿನ ದಿನ ಊರಿನಲ್ಲಿ ಅಕ್ಕಿ ಬೇಳೆ ಎತ್ತಿ ಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪರುವಿನ ಅಡಿಗೆ ಮಾಡಿ ಎಲ್ಲರಿಗೂ ಬಡಿಸುವ ಮೊದಲು ದೇವರಿಗೆ ನೈವೇದ್ಯ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಲಿಂಗಕ್ಕೆ ಅಭಿಷೇಕ ಮಾಡಿ ಪಂಚ ಕಲಶಗಳಿಂದ ಪೂಜೆ ಸಲ್ಲಿಸಿ ನಂತರ ಸಹ ಭೋಜನದ ಮೂಲಕ ಎಲ್ಲರಿಗೂ ಪ್ರಸಾದವನ್ನು ಬಡಿಸಲಾಗುತ್ತದೆ.

ಪ್ರಸಾದ ವಿನಿಯೋಗದ ನಂತರ ಮಹದೇಶ್ವರಸ್ವಾಮಿಯ ಉತ್ಸವಮೂರ್ತಿಯನ್ನು ಹುಲಿವಾಹನದ (ವಾನ್ಯ) ಮೇಲೆ ಇಟ್ಟು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಊರಾಚೆ ಕೆರೆಯ ದಡದಲ್ಲಿರುವ ದೇವಸ್ಥಾನಕ್ಕೆ ತರಲಾಗುತ್ತದೆ. ನಂತರ ಪಕ್ಕದ ಕೆರೆಯೂರು ಗ್ರಾಮದ ಜನರು ಸೇರಿ ಮಹದೇಶ್ವರ ದೇವಾಲಯದಲ್ಲಿ ಪರು ಮಾಡಿ ಮಹದೇಶ್ವರನಿಗೆ ಎಡೆ ಇಟ್ಟು ಪ್ರಸಾದ ವಿನಿಯೋಗ ಮಾಡುತ್ತಾರೆ. ನಂತರ ಸೂರ್ಯೋದಯವಾಗುವುದಕ್ಕೆ ಮುಂಚಿತವಾಗಿ ಕೊಂಡೋತ್ಸವ ನಡೆಯುತ್ತದೆ.

---

[೧] ಕೊಂಡ ಎಂದರೆ ದೇವಾಲಯದ ಮುಂದೆ ಹಾಕುವ ಬೆಂಕಿಯ ರಾಶಿ.

ಹುಲಿವಾಹನದಲ್ಲಿ ಮಹದೇಶ್ವರನ ಉತ್ಸವಮೂರ್ತಿಯನ್ನು ದೇವಾಲಯದ ಪಕ್ಕದಲ್ಲಿರುವ ಕೊಳದಲ್ಲಿ ತಂದು ಗಂಗೆಪೂಜೆ ಮಾಡಿದ ನಂತರ 'ವೀರಭದ್ರಕುಣಿತ'ದ ವ್ಯಕ್ತಿಗೂ ಪೂಜೆ ಸಲ್ಲಿಸಿ ವೀರಭದ್ರ ಕುಣಿತದ ಮೂಲಕ ಉತ್ಸವ ಮೂರ್ತಿಯ ವಾನ್ಯವನ್ನು ದೇವಾಲಯದ ಮುಂದಿನ ಬೆಂಕಿಯ ಕೊಂಡದ ಮುಂದೆ ತರಲಾಗುತ್ತದೆ. ಕೊಂಡದ ನಾಲ್ಕು ದಿಕ್ಕುಗಳಿಗೂ ಹಣ್ಣು ಕಾಯಿಗಳಿಂದ ಪೂಜಿಸಿ ಎಡೆಯನ್ನಿಟ್ಟು ವೀರಭದ್ರ ಕುಣಿತದ ವ್ಯಕ್ತಿ ಕತ್ತಿಯನ್ನು ಝುಳಪಿಸುತ್ತ ಕೆಲವು ಮಾತುಗಳನ್ನಾಡುತ್ತಾ ಕೊಂಡದ ಸುತ್ತ ಸುತ್ತುತ್ತಾರೆ ಕೊನೆಗೆ ಆವೇಶ ಭರಿತವಾಗಿ ವೀರಭದ್ರ ಕುಣಿತದ ವ್ಯಕ್ತಿ ಮೈಮೇಲೆ ದೇವರು ಬಂದು ಬೆಂಕಿಯ ಕೊಂಡವನ್ನು ಹಾಯ್ದು ನಂತರ ದೇವರ ಉತ್ಸವಮೂರ್ತಿಯ ವಾಹನವನ್ನು ಹೊತ್ತಿರುವ ವ್ಯಕ್ತಿಗಳು ಕೊಂಡವನ್ನು ಹಾಯ್ದ ನಂತರ ಹರಕೆ ಹೊತ್ತ ಭಕ್ತರು ಕೊಂಡ ತುಳಿಯುತ್ತಾರೆ.

ಈ ಜಾತ್ರೆಯಲ್ಲಿ ನಡೆಯುವ ಮತ್ತೊಂದು ವಿಶೇಷ ಆಚರಣೆಯೆಂದರೆ ಹರಕೆ ಹೊತ್ತ ಭಕ್ತರು ಉತ್ಸವಮೂರ್ತಿಯನ್ನು ದೇವಾಲಯ ಸುತ್ತ ಮೂರು ಸುತ್ತು ಪುರಿ ಎರಚುವ ಮೂಲಕ ಪ್ರದಕ್ಷಿಣೆ ಹಾಕಿ ತಮ್ಮ ಹರಕೆಯನ್ನು ತೀರಿಸುತ್ತಾರೆ. ವಿಶೇಷವಾಗಿ ಜಾನುವಾರುಗಳನ್ನು ಕರೆತಂದು ಹರಕೆ ಅರ್ಪಿಸುವುದು ಪ್ರಮುಖ ಆಚರಣೆಯಾಗಿದೆ.

ಮಹದೇಶ್ವರನಿಗೆ ಸುತ್ತಮುತ್ತಲಿನ ಗ್ರಾಮಸ್ಥರು ಬಂದು ಪೂಜೆ ಸಲ್ಲಿಸಿ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಸಂಜೆ ೬ ಗಮಟೆ ಸಮಯಕ್ಕೆ ಮಹದೇಶ್ವರಸ್ವಾಮಿಯ ಉತ್ಸವಮೂರ್ತಿಯನ್ನು ಮತ್ತೆ ಗ್ರಾಮದ ಮಧ್ಯಭಾಗದಲ್ಲಿರುವ ಬಸವೇಶ್ವರಸ್ವಾಮಿ ದೇವಸ್ಥಾನಕ್ಕೆ ಹುಲಿವಾಹನದ ಮೂಲಕ ಕರೆತರಲಾಗುತ್ತದೆ. ಈ ಸಮಯದಲ್ಲಿ ದೇವರ ಉತ್ಸವವನ್ನು ಕಣ್ತುಂಬಿಕೊಳ್ಳಲು ನೂರಾರು ಭಕ್ತರು ದೇವಸ್ಥಾನದ ಬಳಿ ಜಮಾಯಿಸಿ 'ಉಗೇ ಮಹಾತ್ಮಲಯ್ಯ ಉಗೇ ಮಾದೇವ ನಮ್ಮ ಮಾದೇವಂಗೆ ಉಗೇ ಅನ್ರಪೋ ಉಗೇ' ಎಂದೋ ಭಾವೋರ್ಷಿಚ್ಛಿತರಾಗಿ ಮಹದೇಶ್ವರನನ್ನು ಹಾಡಿ ಕೊಂಡಾಡುತ್ತಾರೆ. ನಂತರ ಉತ್ಸವಮೂರ್ತಿಯನ್ನು ನಡೆಮುಡಿ ಪಂಜಿನ ಆರತಿಯ ಮೂಲಕ ದೇವಾಲಯದ ಒಳಗಡೆ ಕರೆತರಲಾಗುತ್ತದೆ.

ಬಸವೇಶ್ವರಸ್ವಾಮಿಯ ಓಕುಳ ಉತ್ಸವ: ಬಸವೇಶ್ವರನ ಓಕುಳಿ ಹಬ್ಬ ಗ್ರಾಮದಲ್ಲಿ ನಡೆಯುವ ಪ್ರಮುಖ ಉತ್ಸವಗಳಲ್ಲೊಂದಾಗಿದೆ. ಹಬ್ಬ ನಡೆಯುವ ಹದಿನೈದು ದಿನದ ಮುಂಚೆ 'ಹರಗೂಡು'[೧] ಎಂದು ಹೇಳಿ ಊರಿನಲ್ಲೆಲ್ಲ ಓಕುಳಿ ಹಬ್ಬ ಎಂದು ಸಾರುತ್ತಾನೆ. ಆ ದಿನದಿಂದ ಪ್ರತಿದಿನ ಸಂಜೆ ಊರಿನ ನಾಯಕ ಸಮುದಾಯದ ಜನ ಬಸವೇಶ್ವರ ದೇವಾಲಯದ

---

[೧] 'ಹರಗೂಡು' ಎಂದರೆ ಊರಿನಲ್ಲಿ ಓಕುಳಿ ಹಬ್ಬ ಇದೆ ಎಂದು ೧೫ ದಿನ ಮುಂಚಿತವಾಗಿ ಊರಿನೆಲ್ಲೆಲ್ಲಾ ಸಾರುವುದು ಎಂದರ್ಥ

ಎದುರಿರುವ ಕುರ್ಜಿನ ಮುಂದೆ ಹಾಡು ಹೇಳುತ್ತ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಕುರ್ಜಿನ ಸುತ್ತ ನರ್ತಿಸುತ್ತಾರೆ.

ಓಕುಳಿ ಗುಂಡಿಗೆ ಕೆರೆಯಿಂದ ನೀರನ್ನು ತರಲು ಮಂಗಳವಾದ್ಯಗಳ ಮೂಲಕ ಹೋಗಲಾಗುತ್ತದೆ. ಕೆರೆಯಲ್ಲಿ ೫ ಕಳಶಗಳನ್ನು ಮಾಡಿ ಅವುಗಳನ್ನು ಮಂಗಳದ್ರವ್ಯಗಳ ಮೂಲಕ ಪೂಜಿಸಿ ಆ ಕಳಶದೊಂದಿಗೆ ಮಿಕ್ಕ ಹೆಣ್ಣು ಮಕ್ಕಳು ತಂದಿರುವ ಕಳಶಗಳನ್ನು ಪೂಜಿಸಿ ಓಕುಳಿ ಗುಂಡಿಗೆ ನೀರನ್ನು ತರಲಾಗುತ್ತದೆ. ನಂತರ ಅರ್ಚಕ ಓಕುಳಿ ಗುಂಡಿಗೆ ಅರಿಶಿನ ಕುಂಕುಮ ಪುಷ್ಪಾದಿಗಳಿಂದ ಪೂಜಿಸಿದ ನಂತರ ಮೊದಲ ೫ ಕಳಶಗಳ ನೀರನ್ನು ಗುಂಡಿಗೆ ಅರ್ಚಕ ಹಾಕಿದ ನಂತರ ಮಿಕ್ಕ ಹೆಣ್ಣುಮಕ್ಕಳು ಕಳಶದ ನೀರನ್ನು ಓಕುಳಿ ಗುಂಡಿಗೆ ಹಾಕುತ್ತಾರೆ.

ಈಶ್ವರ ಪಾರ್ವತಿ ಮತ್ತು ಬಸವೇಶ್ವರಮೂರ್ತಿ ಇರುವ ಉತ್ಸವ ಮೂರ್ತಿಯ ವಿಗ್ರಹಗಳನ್ನು ಹೂವಿನಿಂದ ಶೃಂಗರಿಸಲಾಗಿರುತ್ತದೆ. ಊರಿನ ಎಲ್ಲ ಕೋಮಿನ ಯಜಮಾನರು ಮತ್ತು ಮುಖಂಡರು ಮಂಗಳವಾದ್ಯ, ಛತ್ರಿ, ಚಾಮರ, ಕೊಂಬು, ಕಹಳೆಯೊಂದಿಗೆ ದೇವರನ್ನು ಕರೆತರಲು ಅರ್ಚಕನ ಮನೆ ಬಳಿ ಬರುತ್ತಾರೆ. ಯಾವೊಬ್ಬ ಮುಖಂಡನ ಅನುಪಸ್ಥಿತಿಯಿಲ್ಲದೆ ದೇವರಿಗೆ ಮಂಗಳಾರತಿ ಆದ ನಂತರ ನೈವೇದ್ಯ ಮಾಡಲಾಗುತ್ತದೆ.



ಬಸವೇಶ್ವರ ಸ್ವಾಮಿಯ ಕುರ್ಜು

ಮಂಗಳಾರತಿ ಆದ ನಂತರ ದೇವರು ಹೊರಡುವ ವೇಳೆಗೆ ಕಹಳೆಗಳು ಮೊಳಗುತ್ತವೆ. ಮೊದಲಿಗೆ ನಡೆಮುಡಿ ಹಾಸಿ ಪಂಜಿನ ಆರತಿ ಎತ್ತಿ ನಮಸ್ಕರಿಸಿದ ನಂತರ ದೇವರಮೂರ್ತಿಯನ್ನು ಬಸವೇಶ್ವರ ದೇವಾಲಯಕ್ಕೆ ತಂದು ದೇವಾಲಯದ ಸುತ್ತ ೩ ಬಾರಿ ಪ್ರದಕ್ಷಿಣೆ ಮಾಡಿ ದೇವಾಲಯದಲ್ಲಿಟ್ಟು ಮಂಗಳಾರತಿ ಮಾಡಿದ ನಂತರ ಊರಿನ ಯಜಮಾನರು ದೇವರಲ್ಲಿ ತಾವು ಮಾಡಿದ ಸೇವೆ ತೃಪ್ತಿಯಾಯಿತೆ' 'ಊರಿಗೆ, ಊರಿನ ಜನಕ್ಕೆಲ್ಲ ಒಳಿತನ್ನು ಮಾಡು' 'ಸದಾ ನಿನ್ನ ಸೇವೆಗೆ ನಾವೆಲ್ಲ ಸಿದ್ಧರು' ಎಂದು ಪ್ರಾರ್ಥಿಸುತ್ತಾರೆ. ನಂತರ ದೇವರ ಮೂರ್ತಿಯನ್ನು ದೇವಾಲಯದ ಮುಂದಿರುವ ಕುರ್ಜಿನ ಸುತ್ತ ೯ ಸುತ್ತು ಪ್ರದಕ್ಷಿಣೆ ಮಾಡಿ ಜಯಘೋಷಗಳ ಮೂಲಕ ಕುರ್ಜಿನ ಮೇಲೆ ಉತ್ಸವಮೂರ್ತಿಯನ್ನು ಇಟ್ಟು ಪೂಜೆ ಸಲ್ಲಿಸಿದ ನಂತರ ಹಾಡುತ್ತಾ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಕುಣಿಯುತ್ತಾರೆ.

ಬೆಳಿಗ್ಗೆ ೬ ಗಂಟೆ ಸಮಯಕ್ಕೆ ಉತ್ಸವಮೂರ್ತಿಯನ್ನು ಕುರ್ಜಿನಿಂದ ಕೆಳಗಿಳಿಸಿ ದೇವಾಲಯದಲ್ಲಿ ಇಡಲಾಗುತ್ತದೆ. ನಂತರ ಒಂಟಿ ಕುದುರೆಯ ವಾಹನದಲ್ಲಿ ಬಸವೇಶ್ವರನನ್ನು, ಜೋಡಿ ಕುದುರೆಯ ವಾಹನದಲ್ಲಿ ಗಾವಡಗೆರೆಯಮ್ಮನನ್ನು ಇಟ್ಟು ಊರಲ್ಲೆಲ್ಲ ಮೆರವಣಿಗೆ ಮಾಡಿಪ್ರತಿ ಮನೆಯಲ್ಲೂ ಪೂಜಿಸಲಾಗುತ್ತದೆ. ಗ್ರಾಮದಲ್ಲೆಲ್ಲ ಮೆರವಣಿಗೆಯಾದ ನಂತರ ದೇವರ ವಾನ್ಯಗಳನ್ನು ಕುರ್ಜಿನ ಸುತ್ತ ೯ ಸುತ್ತು ಸುತ್ತಿಸಿ ಉತ್ಸವಮೂರ್ತಿಗಳನ್ನು ಕೆಳಗಿಳಿಸಿ ದೇವಾಲಯಕ್ಕೆ ತಂದು ಮಂಗಳಾರತಿ ಮಾಡಲಾಗುತ್ತದೆ. ಬಸವೇಶ್ವರನ ಉತ್ಸವಮೂರ್ತಿಯನ್ನು ಮತ್ತೆ ಮಂಗಳ ವಾದ್ಯಗಳ ಮೂಲಕ ಅರ್ಚಕರ ಮನೆಗೆ ತಂದು ದೀಪಾರತಿ, ಧೂಪಾರತಿಗಳನ್ನು ಮಾಡಿ ಬರಮಾಡಿಕೊಂಡು ಉತ್ಸವ ಮೂರ್ತಿಯನ್ನು ಇಡಲಾಗುತ್ತದೆ.

ಅಧ್ಯಾಯ ೬

ಗಾವಡಗೆರೆ ಗ್ರಾಮದೇವತೆ ಪಟ್ಟಲದಮ್ಮ (ಗಾವಡಗೆರೆಯಮ್ಮ)

ಗಾವಡಗೆರೆ ಗ್ರಾಮದ ಜನತೆಯ ಗ್ರಾಮ ದೇವತೆಯಾದ ಪಟ್ಟಲದಮ್ಮ ಅಥವಾ ಗಾವಡಗೆರೆಯಮ್ಮನನ್ನು ಬಹಳ ಭಕ್ತಿಪೂರ್ವಕವಾಗಿ ಪೂಜಿಸುತ್ತಾರೆ. ಅವರ ದಿನನಿತ್ಯದ ಕಾರ್ಯಚಟುವಟಿಕೆಗಳು ದೇವಿಯನ್ನು ಸ್ತುತಿಸುವುದರ ಮೂಲಕ ಕಾರ್ಯಪ್ರವೃತ್ತರಾಗುತ್ತಾರೆ.

ಗಾವಡಗೆರೆಯಮ್ಮನ ದೇವಾಲಯವು ಗಾವಡಗೆರೆ ಗ್ರಾಮದ ಊರಾಚೆ ೧ ಕಿ.ಮೀ. ದೂರದಲ್ಲಿ ಒಂದು ದೇವಾಲಯವಿದ್ದರೆ ಊರ ಮಧ್ಯ ಭಾಗದಲ್ಲಿ ಮತ್ತೊಂದು ದೇವಾಲಯವಿದೆ. ಶುಕ್ರವಾರ ದೇವಿಯನ್ನು ಪೂಜಿಸುವ ವಿಶೇಷ ವಾರವಾಗಿದ್ದು ಪ್ರತಿ ಶುಕ್ರವಾರ ಬೆಳಿಗ್ಗೆಯಿಂದ ಸಂಜೆಯವರೆಗೆ ಊರಾಚೆಗಿನ ದೇವಾಲಯದಲ್ಲಿ ಭಕ್ತರು ಪೂಜೆಗೆ ಆಗಮಿಸಿದರೆ ಸಂಜೆ ೬ ಗಂಟೆಯಿಂದ ೧೦ ಗಂಟೆಯವರೆಗೆ ಊರ ನಡುವಿರುವ ದೇವಾಲಯದಲ್ಲಿ ಪೂಜೆ ನೆರವೇರುತ್ತದೆ. ದೇವಿಯ ಭಕ್ತರು ನಾನಾ ಊರುಗಳಿಂದ ದರ್ಶನವನ್ನು ಪಡೆಯಲು ಬರುತ್ತಾರೆ.

ಪಟ್ಟಲದಮ್ಮನ ಭಕ್ತರ ಒಂದು ನಂಬಿಕೆಯೆಂದರೆ ಬೇಡಿದ್ದನ್ನು ನೀಡುವ ವರಸಿದ್ಧಿ ದೇವಿಯೆಂದು ಆಕೆಯನ್ನು ನಂಬಿದ್ದಾರೆ. ಊರಾಚೆ ಇರುವ ದೇವಾಲಯದಲ್ಲಿ ದೇವಿಯ ಮೂಲ ವಿಗ್ರಹವಿದ್ದರೆ ಊರ ನಡುವಿನ ದೇವಾಲಯದಲ್ಲಿ ಸುಂದರವಾದ ಉತ್ಸವಮೂರ್ತಿಯ ವಿಗ್ರಹವಿದೆ. ದೇವಿಯ ಮೂರ್ತಿಯು ೩ ಅಡಿ ಎತ್ತರವಿದ್ದು ಚಿನ್ನ ಮತ್ತು ಬೆಳ್ಳಿಯಿಂದ ಮಾಡಲ್ಪಟ್ಟಿದೆ. ದೇವಿಗೆ ಗ್ರಾಮದಲ್ಲಿ ನಡೆಯುವ ಎಲ್ಲ ಉತ್ಸವಗಳಲ್ಲಿ ಜೋಡಿ ಕುದುರೆಯಲ್ಲಿ ಮೆರವಣಿಗೆ ಮಾಡಲಾಗುತ್ತದೆ.

ಗಾವಡಗೆರೆ ಗ್ರಾಮದಲ್ಲಿ ಬಹುಸಂಖ್ಯಾತರು 'ನಾಯಕ' ಜನಾಂಗದವರಾಗಿದ್ದು ಇವರು ದೇವಿಯನ್ನು ಹೆಚ್ಚು ನಂಬಿ ಪೂಜಿಸುತ್ತಾರೆ. ಮನೆಯಲ್ಲಿನ ಯಾವುದೇ ಶುಭ ಕಾರ್ಯಗಳಾಗಲಿ, ಮದುವೆಗಳಾಗಲಿ ದೇವಿಯ ವರವನ್ನು ಕೇಳಿ ಮುಂದುವರೆಯುತ್ತಾರೆ. ವರ ಬೇಡಿದಾಗ ದೇವಿಯ ಬಲಭಾಗದಲ್ಲಿ ಹೂವು ಬಿದ್ದರೆ ಶುಭದ ಸಂಕೇತವೆಂದು ಎಡಭಾಗದಲ್ಲಿ ಬಿದ್ದರೆ ಅಶುಭದ ಸಂಕೇತ ಎಂದು ನಂಬಿ ಮುಂದೆ ಯಾವುದೇ ಕೆಲಸಗಳಿಗೆ ಕೈ ಹಾಕುತ್ತಾರೆ.

ಮನೆಯಲ್ಲಿ ಏನಾದರೂ ಕಳುವಾದ ಸಂದರ್ಭದಲ್ಲಿ ಮೆರವಣಿಗೆ ದಿನ ‘ವಾನ್ಯ’[೧] ಅವರ ಮನೆ ಬಾಗಿಲಿಗೆ ಬಂದಾಗ ನಮ್ಮ ಮನೆಯಲ್ಲಿ ಈ ರೀತಿ ಕಳ್ಳತನವಾಗಿದೆ ಅದನ್ನು ನೀನು ಕಂಡುಹಿಡಿದು ತೋರಿಸು ಎಂದರೆ ನೇರ ದೇವಿಯ ವಾನ್ಯ ಕಳ್ಳತನ ಮಾಡಿರುವ ವ್ಯಕ್ತಿಯ ಮನೆಯ ಮುಂದೆ ನಿಲ್ಲುತ್ತದೆ. ಆಗ ಊರಿನ ಮುಖಂಡರು ವಿಚಾರಣೆ ನಡೆಸಿ ತಪ್ಪು ಸಾಬೀತಾದಲ್ಲಿ ದಂಡ ವಿಧಿಸುತ್ತಾರೆ. ತಪ್ಪು ಮಾಡಿದ ವ್ಯಕ್ತಿ ದೇವಿಯನ್ನು ಕ್ಷಮೆಯಾಚಿಸುತ್ತಾನೆ. ಈ ರೀತಿ ಕಳ್ಳತನ ಕಂಡುಹಿಡಿದ ಅನೇಕ ನಿದರ್ಶನಗಳು ಇವೆ.

ವಿಸ್ಮಯದ ವಿಷಯವೆಂದರೆ ೧೫ ವರ್ಷಗಳ ಹಿಂದೆ ದೇವಿಯ ಬೆಲೆಬಾಳುವ ಉತ್ಸವಮೂರ್ತಿಯನ್ನು ಊರಿನ ಕೆಲವು ಜನ ಬೇರೆ ವ್ಯಕ್ತಿಗಳೊಂದಿಗೆ ಶಾಮಿಲ್ಲಾಗಿ ಲಕ್ಷಾಂತರ ಬೆಲೆಬಾಳುವ ದೇವಿ ಉತ್ಸವಮೂರ್ತಿ ಮತ್ತು ಅಪಾರ ಚಿನ್ನದ ಆಭರಣಗಳನ್ನು ಕಳುವು ಮಾಡಿದರು. ನಂತರ ಬಸವೇಶ್ವರಸ್ವಾಮಿ ಮತ್ತು ದೇವಿಯ ಚಿಕ್ಕದೊಂದು ಉತ್ಸವಮೂರ್ತಿಯನ್ನು ಇಟ್ಟು ಮೆರವಣಿಗೆ ಮಾಡಿದಾಗ ಆ ಕಳ್ಳತನದಲ್ಲಿ ಯಾವ ವ್ಯಕ್ತಿಗಳು ಭಾಗಿಯಾಗಿದ್ದಾರೆ, ಆ ಮನೆಗಳನ್ನೆಲ್ಲ ಪತ್ತೆ ಮಾಡಲಾಯಿತಲ್ಲದೆ, ದೇವಿಯ ಕೆಲವು ಆಭರಣಗಳನ್ನು ಎಲ್ಲಿ ಹೂತಿಟ್ಟಿದ್ದಾರೋ ಅಲ್ಲೆಲ್ಲಾ ಗುರುತು ಹಚ್ಚಲಾಯಿತು. ನಂತರ ಕಳ್ಳತನ ಮಾಡಿದ ವ್ಯಕ್ತಿಗಳು ತಾವು ಮಾಡಿದ ತಪ್ಪನ್ನು ಒಪ್ಪಿಕೊಂಡರಲ್ಲದೆ ಗ್ರಾಮದ ಜನತೆ ಪೋಲಿಸರಿಗೆ ಯಾವುದೇ ರೀತಿಯ ಮಾಹಿತಿಯನ್ನು ನೀಡದೆ ಕಳ್ಳರಿಗೆ ಶಿಕ್ಷೆ ನೀಡಲು ಮುಂದಾದಾಗ ಊರಿನಲ್ಲಿ ಪ್ರಕ್ಷುಬ್ದ ಪರಿಸ್ಥಿತಿ ನಿರ್ಮಾಣವಾಗಿ ಕರ್ಫ್ಯೂ ಸಹಾ ವಿಧಿಸಲಾಗಿತ್ತು.

ನಂತರ ಗ್ರಾಮದ ಜನತೆಯಲ್ಲದೆ ಅಪಾರ ದೇವಿಯ ಭಕ್ತರ ಮೂಲಕ ವಂತಿಗೆ ಸ್ವೀಕರಿಸಿ ದೇವಿಯ ಹೊಸ ವಿಗ್ರಹವನ್ನು ಚಿನ್ನ ಮತ್ತು ಬೆಳ್ಳಿಯಿಂದ ಮಾಡಿಸಿ ವಿಜೃಂಭಣೆಯಿಂದ ದೇವಿಯ ಪ್ರತಿಷ್ಠಾಪನಾ ಮಹೋತ್ಸವವನ್ನು ನೆರವೇರಿಸಲಾಯಿತು.

ದೇವಿಗೆ ನಡೆಸುವ ಪ್ರತಿವರ್ಷದ ಜಾತ್ರೆಯನ್ನು ತುಂಬ ವಿಜೃಂಭಣೆಯಿಂದ ನೆರವೇರಿಸಲಾಗುತ್ತದೆ. ಈ ಜಾತ್ರೆಗೆ ದೂರದ ಕೊಡಗು ಜಿಲ್ಲೆಯಿಂದಲ್ಲದೆ ಮಹಾರಾಷ್ಟ್ರದ ಮುಂಬೈ ನಗರದಿಂದಲೂ ಅಪಾರ ಭಕ್ತರು ಆಗಮಿಸುತ್ತಾರಲ್ಲದೆ ವಿಜೃಂಭಣೆಯಿಂದ ಜಾತ್ರಾ ಮಹೋತ್ಸವವನ್ನು ನಡೆಸಲಾಗುತ್ತದೆ. ಈ ದೇವಿಯ ಜಾತ್ರೆಯ ವಿಶೇಷವೆಂದರೆ ಹರಕೆ ಹೊತ್ತ ಭಕ್ತರು ಬಾಯಿ ಬೀಗ ಚುಚ್ಚಿಸಿಕೊಂಡು ಬೆಂಕಿಯ ಕೊಂಡ ಹಾಯ್ದು ಹರಕೆ ತೀರಿಸುವುದಾಗಿದೆ.

---

[೧] ವಾನ್ಯ ಎಂದರೆ ದೇವರ ಉತ್ಸವ ಮೂರ್ತಿಯನ್ನು ಪಂಚಲೋಹದ ಕುದುರೆ ಮತ್ತು ಪ್ರಭಾವಳಿಯೊಂದಿಗೆ ಅಲಂಕರಿಸಿರುವ ವಾಹನ. ವಾಹನವೇ ಗ್ರಾಮೀಣರ ಭಾಷೆಯಲ್ಲಿ ವಾನ್ಯ ಎಂದಾಗಿದೆ.

ಪಟ್ಟಲದಮ್ಮ ದೇವಿಯ ಉತ್ಸವ ೨ ದಿನಗಳ ಕಾಲ ಸಂಭ್ರಮದಿಂದ ನಡೆಯುತ್ತದೆಯಲ್ಲದೆ ಈ ಜಾತ್ರೆಗೆ ಜಾತಿಭೇದವಿಲ್ಲದೆ ಎಲ್ಲ ಜನಾಂಗದವರು ನೆಂಟರಿಷ್ಟರನ್ನು ಕರೆದು ಸಡಗರದಿಂದ ಹಬ್ಬ ಆಚರಿಸುತ್ತಾರೆ. ಜಾತ್ರೆಯ ಮತ್ತೊಂದು ವಿಶೇಷವೆಂದರೆ ಪಟಾಕಿ ಬಾಣ ಬಿರುಸುಗಳ ಪ್ರದರ್ಶನ ಮತ್ತು ಸಿಡಿತ. ದೇವಿಯ ಜಾತ್ರೆಗೆಂದೆ ೨ ಲಕ್ಷ ರೂಪಾಯಿಗಳಷ್ಟು ವೆಚ್ಚ ಮಾಡಿ ಸಿಡಿಮದ್ದುಗಳನ್ನು ತಯಾರಿಸಲಾಗುತ್ತದೆ.

ದೇವಿಗೆ ಹರಕೆ ಹೊತ್ತವರು ಮಾಂಗಲ್ಯ ಮತ್ತು ಸೀರೆಯಲ್ಲಿ ಉಡಿ ತುಂಬಿ ತಮ್ಮ ಹರಕೆ ತೀರಿಸುತ್ತಾರೆ.

ಪಟ್ಟಲದಮ್ಮ ದೇವಿ ಜಾತ್ರೆಯಲ್ಲಿ ಊರಿನಲ್ಲೆಲ್ಲ ವಿದ್ಯುದ್ದೀಪಗಳಿಂದ ಅಲಂಕರಿಸಿ ರಾತ್ರಿ ಊರ ದೇವಾಲಯದಿಂದ ಹೊರಡುವ ದೇವಿಯ ಮೆರವಣಿಗೆ ಬೆಳಗಾಗುವವರೆಗೆ ಅನೇಕ ಆಚರಣೆಗಳಿಂದ ಊರಾಚೆಗಿರುವ ದೇವಿಯ ದೇವಾಲಯವನ್ನು ಸೂರ್ಯ ಮಾಡುವುದಕ್ಕೆ ಮುಂಚಿತವಾಗಿ ಕೊಂಡ ಹಾಯುವುದರ ಮೂಲಕ ಕೊನೆಗೊಳ್ಳುತ್ತದೆ. ನಂತರ ಬೆಳಿಗ್ಗೆ ಹರಕೆ ಹೊತ್ತವರ ಕುರಿ, ಕೋಳಿ, ಮೇಕೆ ಬಲಿ ಕೊಡುತ್ತಾರೆ.

ಸಂಜೆ ೬ ಗಂಟೆಯವರೆಗೂ ಜಾತ್ರೆಗೆ ಸಹಸ್ರಾರು ಭಕ್ತರು ನೆರೆಯುತ್ತಾರೆ. ೬ ಗಂಟೆಯ ನಂತರ ಯಾರು ದೇವಾಲಯದ ಆವರಣದಲ್ಲಿ ಇರಕೂಡದು ಎಂಬ ಪ್ರತೀತಿಯಂತೆ. ದೇವಿಯ ಉತ್ಸವಮೂರ್ತಿಯನ್ನು ಊರ ದೇವಾಲಯಕ್ಕೆ ತಂದು ಮಹಾಮಂಗಳಾರತಿ ಮಾಡುವ ಮೂಲಕ ಜಾತ್ರಾ ಮಹೋತ್ಸವ ಮುಕ್ತಾಯವಾಗುತ್ತದೆ.

ಗಾವಡಗೆರೆಯಮ್ಮ ದೇವಿಯ ದೇವಾಲಯವನ್ನು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಜೀರ್ಣೋದ್ಧಾರ ಮಾಡುವ ಕೆಲಸ ಭರದಿಂದ ಸಾಗಿದೆ. ಇದಕ್ಕೆ ಅನೇಕ ಭಕ್ತರು ಉದಾರವಾಗಿ ದಾನ ನೀಡಿದ್ದಾರಲ್ಲದೆ ದೇವಿಯ ಕಾಣಿಕೆಹುಂಡಿ ಹಣವನ್ನು ಇದಕ್ಕೆ ವಿನಿಯೋಗಿಸಲಾಗುತ್ತಿದೆ. ಊರಿನಲ್ಲಿ ನ್ಯಾಯ ತೀರ್ಮಾನವಾಗಿ ದಂಡ ವಿಧಿಸಿದ ಹಣವು ದೇವಾಲಯಗಳ ಜೀರ್ಣೋದ್ಧಾರ ನವೀಕರಣಕ್ಕಾಗಿ ಉಪಯೋಗಿಸಲಾಗುತ್ತಿದೆ.



ಪಟ್ಟಲದಮ್ಮ

ಅಧ್ಯಾಯ ೧೦

ಉಪಸಂಹಾರ

ಸಂಸ್ಕೃತಿ ಮಾನವನ ಬದುಕಿನಲ್ಲಿ ಹಾಸು ಹೊಕ್ಕಾಗಿರುವುದರ ಬಗೆಗೆ ಯಾರಿಗೂ ಅನುಮಾನವಿಲ್ಲ. ಮಾನವನ ಬದುಕಿನ ಲಕ್ಷಾಂತರ ವರ್ಷಗಳು ಅವಧಿಯಲ್ಲಿ ಸಂಸ್ಕೃತಿ ವಿಕಸಿಸುತ್ತಾ ಬಂದಿದೆ. ಹಾಗೆಯೇ ಸಂಸ್ಕೃತಿಯ ಸ್ವರೂಪವು ಬದಲಾಗುತ್ತಾ ಬಂದಿದೆ. ಸಾಮಾಜಿಕ, ರಾಜಕೀಯ, ಧಾರ್ಮಿಕ ಕಾರಣಗಳು ಸಾಂಸ್ಕೃತಿಗೆ ಅಂಶಗಳನ್ನು ನಿರಂತರ ಪರಿಷ್ಕರಣೆಗೆ ಗುರಿ ಮಾಡಿವೆ. ಯಾವುದೇ ಪ್ರಬಲವಾದ ಒತ್ತಡಕ್ಕೆ ಸಂಸ್ಕೃತಿ ಏಕಾಏಕಿ ಒಳಪಡುವುದಿಲ್ಲ. ಹಾಗೂ ಸಂಪೂರ್ಣವಾಗಿ ಬದಲಾಗುವುದಿಲ್ಲ. ಅನ್ಯ ಪ್ರಭಾವಗಳನ್ನು ತನ್ನ ಆಂತರಿಕ ಪರಿಸ್ಥಿತಿಗೆ ಅನುಗುಣವಾಗಿ ತನ್ನೊಳಗೆ ಸೇರಿಸಿಕೊಂಡು ತನ್ನದನ್ನಾಗಿ ಮಾಡಿಕೊಳ್ಳುತ್ತದೆ. ಹಾಗೆ ನೋಡಿದರೆ ಮಾನವ ಸಂಸ್ಕೃತಿ ಹುಟ್ಟಿಕೊಂಡದ್ದೇ ಈ ನೈಸರ್ಗಿಕ ಪ್ರಭಾವಗಳಿಂದ ಎನ್ನಬಹುದು. ಮಾನವ ನಾಗರೀಕತೆ ಕೂಡ ನಿಸರ್ಗದ ಮಡಿಲಿನಲ್ಲಿಯೇ ಆರಂಭವಾಯಿತು. ಈ ಸ್ಥಳಗಳಲ್ಲಿ ಸಂಸ್ಕೃತಿಯ ತೊಟ್ಟಿಲುಗಳು ಕಾಣಿಸಿಕೊಂಡವು. ಈ ಹಿನ್ನೆಲೆಯಲ್ಲಿ ನಿರ್ಧಿಷ್ಟ ಪ್ರದೇಶವೊಂದನ್ನು ಆಯ್ಕೆ ಮಾಡಿಕೊಂಡು ಅತ್ಯಂತ ಸೂಕ್ಷ್ಮವಾಗಿ ಅಲ್ಲಿನ ವೈವಿದ್ಯಮಯ ವೈಶಿಷ್ಟ್ಯಗಳನ್ನು ಅಧ್ಯಯನ ಮಾಡುವುದರ ಮೂಲಕ ಅಲ್ಲಿಯದೇ ಆದ ಅನನ್ಯವಾದ ಸಂಸ್ಕೃತಿಯನ್ನು ಗ್ರಹಿಸುವ ಅವಕಾಶ ಸಿಗುತ್ತದೆ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಗಾವಡಗೆರೆ - ಸಾಂಸ್ಕೃತಿಕ ಅಧ್ಯಯನಕ್ಕೆ ಬಹಳ ವಿಶಿಷ್ಟವಾದ ಸಾಮಗ್ರಯನ್ನು ಒದಗಿಸಿದೆ. ಅಧ್ಯಯನದ ಉದ್ದೇಶ ವ್ಯಾಪ್ತಿಯಲ್ಲಿ-ಅಧ್ಯಯನ ಉದ್ದೇಶವೆಲ್ಲವನ್ನು ವಿವೇಚಿಸಿ ಅದರಲ್ಲಿ ಹತ್ತು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ.

ಆಧುನಿಕತೆಯ ಪ್ರಭಾವದಿಂದಾಗಿ ನಮ್ಮ ಅಮೂಲ್ಯ ಸಂಸ್ಕೃತಿ ನಾಶವಾಗುತ್ತಿದ್ದು 'ಹಳ್ಳಿ ಹಾಳಾಯ್ತು' ಎಂಬ ನಾಣ್ಣುಡಿಯಂತೆ ಚಲನಚಿತ್ರ ಸಮೂಹ ಮಾಧ್ಯಮಗಳು ಹಳ್ಳಿಗರ ಮೇಲೆ ಕೆಟ್ಟ ಪರಿಣಾಮ ಬೀರಿ ತನ್ನ ಮೂಲ ತಾಯಿಬೇರಾದ ಜನಪದ ಸಂಸ್ಕೃತಿಯನ್ನು ಮರೆಯುತ್ತಿರುವುದು ಅತ್ಯಂತ ಖೇದಕರವಾಧ ವಿಷಯವಾಗಿದೆ. ಇಂತಹ ಸಂದರ್ಭದಲ್ಲಿಯೂ ಗಾವಡಗೆರೆ ಗ್ರಾಮದ ಜನ ತಮ್ಮದೆ ದೇವತೆಗಳು, ಹಬ್ಬಹರಿದಿನಗಳು, ಆಚಾರ-ವಿಚಾರಗಳನ್ನು ಅಳವಡಿಸಿಕೊಂಡು ಬದುಕು ಸಾಗಿಸುತ್ತಿದ್ದಾರೆ.

ಗಾವಡಗೆರೆ ಸಾಂಸ್ಕೃತಿಕ ಅಧ್ಯಯನ ಎಂಬ ಸಂಶೋಧನಾ ಸಂಪ್ರಬಂಧದಲ್ಲಿ ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಸ್ಪಷ್ಟಪಡಿಸುತ್ತದೆ.

ಗಾವಡಗೆರೆಯಲ್ಲಿರುವ ಜನ ಮೊದಲನೆ ಮಹಾ ಯುದ್ಧಕ್ಕೆ ಹೋದ ನೆನಪಿಗೆ ದಾನ ನೀಡಿದ ಶಾಸನಗಳನ್ನು ಕುರಿತು ೨ನೇ ಅಧ್ಯಾಯದಲ್ಲಿ ಗುರುತಿಸಿದ್ದೇನೆ.

ಗಾವಡಗೆರೆಯ ಜನ ಅಪಾರ ದೈವಭಕ್ತಿಯುಳ್ಳವರಾಗಿದ್ದು ಅದಕ್ಕೆ ಪ್ರತೀಕವೆಂಬಂತೆ ಅನೇಕ ದೇವಾಲಯಗಳು ಗಾವಡಗೆರೆಯಲ್ಲಿದ್ದು ಹಾಗೆಯೇ ಧಾರ್ಮಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನದೆ ಸೇವೆ ಸಲ್ಲಿಸುತ್ತಿರುವ ಓಂ ಶ್ರೀ ಗುರುಲಿಂಗ ಜಂಗಮದೇವರ ಮಠ, ಮರಾಠಿಗರ ಸಿದ್ಧರಾಮೇಶ್ವರ ಮಠದ ಕುರಿತು ೩ನೇ ಅಧ್ಯಾಯದಲ್ಲಿ ತಿಳಿಸಿದ್ದೇನೆ.

ಗಾವಡಗೆರೆ ಭೌಗೋಳಿಕ ಲಕ್ಷಣ, ಗಾವಡಗೆರೆ ಒಂದು ಹೋಬಳಿ ಕೇಂದ್ರವಾಗಿದ್ದು, ಇಲ್ಲಿ ವಾಸವಾಗಿರುವ ವಿವಿಧ ಜಾತಿಯಾಧಾರಿತ ಜನಾಂಗಗಳು, ಪುರುಷ ಮತ್ತು ಸ್ತ್ರೀಯರ ಸಂಖ್ಯೆ, ಕುಟುಂಬಗಳು, ಮುಂತಾದವುಗಳನ್ನು ಕುರಿತು ೪ ಮತ್ತು ೫ನೇ ಅಧ್ಯಾಯದಲ್ಲಿ ಚರ್ಚಿಸಿದ್ದೇನೆ.

ಗಾವಡಗೆರೆ ಗ್ರಾಮದ ವಿಶೇಷತೆಯೆಂದರೆ ಇಲ್ಲಿ ವಾಸವಾಗಿರುವ ಮರಾಠಿ ಜನಾಂಗ ಮರಾಠಿಗರು ತಮ್ಮದೆ ಆಚಾರ, ವಿಚಾರ, ಹಬ್ಬ-ಹರಿದಿನ, ಮದುವೆ ಉತ್ಸವಗಳನ್ನು ತಮ್ಮದೆ ವಿಶಿಷ್ಟ ಶೈಲಿಯಲ್ಲಿ ಆಚರಿಸಿಕೊಂಡು ತಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ. ಹೀಗಾಗಿ ಮರಾಠಿ ಜನಾಂಗದ ಕುರಿತು ೬ನೇ ಅಧ್ಯಾಯದಲ್ಲಿ ನೋಡಬಹುದು.

ಗಾವಡಗೆರೆ ಗ್ರಾಮದಲ್ಲಿ ತಮ್ಮ ದಾನ ಧರ್ಮ, ಸಾಮಾಜಿಕ ಕಳಕಳಿ, ಪರೋಪಕಾರ ಮುಂತಾದವುಗಳಿಗೆ ಹೆಸರಾಗಿ ಕೀರ್ತಿಶೇಷರಾಗಿರುವ ಪ್ರಮುಖ ದಾನಿಗಳಾದ ಟಿ.ಎಸ್.ಸುಬ್ಬರಾವ್ ಘಾಟ್ಕೆಯವರ ಕುರಿತು ೭ನೇ ಅಧ್ಯಾಯದಲ್ಲಿ ತಿಳಿಸಿದ್ದೇನೆ.

ಗಾವಡಗೆರೆ ಗ್ರಾಮದಲ್ಲಿ ಅನೇಕ ಜಾತ್ರೆ ಉತ್ಸವಗಳು ನಡೆಯುತ್ತವೆಯಲ್ಲದೆ ಆ ಜಾತ್ರೆ ಉತ್ಸವಗಳಲ್ಲಿ ತಮ್ಮದೆ ವಿಶಿಷ್ಟ ಆಚರಣೆಗಳನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಹಾಗೆಯೇ ಗಾವಡಗೆರೆ ಸುತ್ತಮುತ್ತ ಪಟ್ಟಲದಮ್ಮ ದೇವಿಯ ಮಹಿಮೆ ಮತ್ತು ಭಕ್ತಿ ಸಮೂಹ ಅಪಾರವಾದುದಾಗಿದ್ದು ದೇವಿಯನ್ನು ಅಪಾರ ಶ್ರದ್ಧಾ ಭಕ್ತಿಯಿಂದ ಪೂಜಿಸಿ ದೇವಿಗೆ ನಡೆದುಕೊಳ್ಳುತ್ತಾರೆ. ಹೀಗಾಗಿ ಜಾತ್ರೆಯಲ್ಲಿ ನಡೆಯುವ ಉತ್ಸವ ಮತ್ತು ಪಟ್ಟಲದಮ್ಮ ದೇವಿಯ ಕುರಿತು ೮ ಮತ್ತು ೯ ನೆ ಅಧ್ಯಾಯದಲ್ಲಿ ಸ್ಪಷ್ಟಪಡಿಸಿದ್ದೇನೆ.

ಒಟ್ಟಾರೆಯಾಗಿ ಗಾವಡಗೆರೆಯಲ್ಲಿನ ಜನಪದರು ಅವರ ಆಚರಣೆ, ನಂಬಿಕೆ, ಉತ್ಸವಗಳು, ಮದುವೆಗಳು, ಹಬ್ಬಗಳು, ಮರಾಠಿಗರು ತಮ್ಮದೆ ಸಂಸ್ಕೃತಿಯನ್ನು ಪರ ಸಂಸ್ಕೃತಿಯೊಂದಿಗೆ ಮೇಳೈಸಿಕೊಂಡು ತಮ್ಮ ವಿಶಿಷ್ಟ ಆಚರಣೆಯನ್ನು ಉಳಿಸಿಕೊಂಡು ಬಂದಿರುವ ಬಗೆ ಈ ವಿಚಾರಗಳನ್ನು ಪರಿಚಯಿಸುವ ಪ್ರಾಮಾಣಿಕ ಪ್ರಯತ್ನವನ್ನು ಕೈಗೊಂಡಿದ್ದೇನೆ.

ವಕ್ತೃವಿವರ

೧.	ನಟರಾಜಸ್ವಾಮಿಗಳು	–	೫೫ ವರ್ಷ
೨.	ಬಸವರಾಜಪ್ಪ	–	೭೦ ವರ್ಷ
೩.	ಗೋಪಾಲನಾಯಕ	–	೫೫ ವರ್ಷ
೪.	ವೆಂಕಟರಾವ್ ಕದಂ	–	೮೦ ವರ್ಷ
೫.	ಶುಭಕದಂ	–	೨೮ ವರ್ಷ
೬.	ರೇಖಾಬಾಯಿ	–	೩೦ ವರ್ಷ
೭.	ರೇವಣ್ಣ	–	೪೫ ವರ್ಷ
೮.	ಕೃಷ್ಣನಾಯಕ	–	೬೦ ವರ್ಷ
೯.	ಗೌರಮ್ಮ	–	೫೫ ವರ್ಷ
೧೦.	ರಾಮನಾಯಕ	–	೬೮ ವರ್ಷ
೧೧.	ನಾಗುಬಾಯಿ	–	೬೦ ವರ್ಷ
೧೨.	ಬಸವರಾಜು	–	೪೦ ವರ್ಷ
೧೩.	ಮಂಚಮ್ಮ	–	೭೦ ವರ್ಷ
೧೪.	ಯೋಗೇಶನಾಯಕ	–	೩೦ ವರ್ಷ
೧೫.	ಗೋಪಾಲನಾಯಕ	–	೫೫ ವರ್ಷ
೧೬.	ಹಾಲನಾಯಕ	–	೬೦ ವರ್ಷ
೧೭.	ಮಂಚನಾಯಕ	–	೪೫ ವರ್ಷ
೧೮.	ಸಣ್ಣಮ್ಮ	–	೭೦ ವರ್ಷ
೧೯.	ಮಹದೇವ	–	೩೮ ವರ್ಷ
೨೦.	ಶಿವನಂಜಪ್ಪ	–	೫೮ ವರ್ಷ
೨೧.	ಕೃಷ್ಣಬಾಯಿ	–	೮೦ ವರ್ಷ
೨೨.	ಅನ್ನಪೂರ್ಣ ಘಾಟ್ಕೆ	–	೫೮ ವರ್ಷ
೨೩.	ಗಾಯಿತ್ರಿ ಕದಂ	–	೩೫ ವರ್ಷ

೧೪. ವಿಠ್ಠಲರಾವ್ ಕದಂ – ೬೫ ವರ್ಷ

೧೫. ಮಹದೇವಯ್ಯ – ೫೬ ವರ್ಷ

೧೬. ಸಣ್ಣನಾಯಕ – ೭೦ ವರ್ಷ

೧೭. ತುಕಾರಾಂರಾವ್ ಕದಂ – ೮೦ ವರ್ಷ

೧೮. ನಂಜಪ್ಪ – ೬೦ ವರ್ಷ

೧೯. ಮಲ್ಲಿಕಾರ್ಜುನಾಚಾರ್ – ೭೫ ವರ್ಷ

೨೦. ಚೆನ್ನವೀರ – ೭೦ ವರ್ಷ

೨೧. ವಿಶ್ವನಾಥರಾವ್ ಮುತಾಲೆ – ೫೦ ವರ್ಷ

೨೨. ಚೆಲುವಯ್ಯ – ೫೫ ವರ್ಷ

೨೩. ಸಣ್ಣಾಲು – ೫೮ ವರ್ಷ